ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 16 ಶುಕ್ರವಾರ 2024

ಸಂಪುಟ: 44 | ಸಂಚಿಕೆ: 299 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4




'ಮೈಸೂರು ಮಿತ್ರ'ನ ಸೋದರ 'ಸ್ಟಾರ್ ಆಫ್ ಮೈಸೂರ್'ಗೆ 47ನೇ ಹುಟ್ಟುಹಬ್ಬದ ಸಂಭ್ರಮ. ಈ ಶುಭ ಸಂದರ್ಭದಲ್ಲಿ 64 ಪುಟಗಳ ವರ್ಣರಂಜಿತ ವಿಶೇಷಾಂಕವನ್ನು ನೀಡಲಾಗುತ್ತಿದೆ. ಈ ಸಂತಸದ ವೇಳೆ ಸಮಸ್ತ ಓದುಗರು, ಚಂದಾದಾರರು, ಜಾಹೀರಾತುದಾರರು, ಹಿತೈಷಿಗಳು, ಅಭಿಮಾನಿಗಳು ಹಾಗೂ ಪತ್ರಿಕೆ ವಿತರಕರಿಗೂ

ವಂದನೆ–ಅಭಿವಂದನೆ

ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಆರೋಗ್ಯದಲ್ಲಿ ಏರುಪೇರು

ಮಣಿಪಾಲ ಆಸ್ಪತ್ರೆಗೆ ದಾಖಲು



ಬೆಂಗಳೂರು, ಫೆ15–ಅನಾರೋಗ್ಯದ ಕಾರಣ ಮಾಜಿ ಪಿಎಂ ಎಚ್.ಡಿ. ದೇವೇಗೌಡರು ಮಣಿಪಾಲ್ ಆಸ್ಪತ್ರೆಗೆ ದಾಖಲಾಗಿದ್ದಾರೆ. ಸದ್ಯ ವೈದ್ಯರು ಚಿಕಿತ್ಸೆ ಮುಂದುವರೆಸಿದ್ದಾರೆ. ಗುರುವಾರ ಬೆಳಿಗ್ಗೆ ದೇವೇಗೌಡರಿಗೆ ಉಸಿರಾಟದ ಸಮಸ್ಯೆ ಕಾಣಿಸಿಕೊಂಡಿದ್ದು, ಕೂಡಲೇ ಅವರನ್ನು ಮಣಿಪಾಲ್ ಆಸ್ಪತ್ರೆಗೆ ಕರೆದು ಕೊಂಡು ಹೋಗಲಾಗಿದೆ. ಅಲ್ಲಿನ ಶ್ವಾಸಕೋಶ ತಜ್ಞ ಡಾ.ಸತ್ಯನಾರಾಯಣ ಅವರು ಪರೀಕ್ಷೆ ನಡೆಸಿ, ಆಸ್ಪತ್ರೆಯ ಲ್ಲಿಯೇ ದಾಖಲಿಸಿಕೊಂಡು ನಿಗಾ ವಹಿಸಿದ್ದಾರೆ. ಸದ್ಯ ದೇವೇಗೌಡರ ಆರೋಗ್ಯ ಸ್ಥಿತಿ ಸ್ಥಿರವಾಗಿದ್ದು, ಆತಂಕಪಡುವ ಅಗತ್ಯ ಇಲ್ಲ ಎಂದು ಮಣಿಪಾಲ್ ಆಸ್ಪತ್ರೆಯ ವೈದ್ಯರು ಮಾಹಿತಿ ನೀಡಿದ್ದಾರೆ. 90 ವರ್ಷದ ಎಚ್.ಡಿ.ದೇವೇಗೌಡರು ಸಕ್ರಿಯ ರಾಜಕಾರಣದಲ್ಲಿದ್ದು, ಸದ್ಯ ಅವರು ಲೋಕಸಭೆ ಚುನಾವಣೆಯ ಪ್ರಚಾರ, ಸಭೆಗಳನ್ನು ನಡೆಸುತ್ತಿದ್ದಾರೆ.

ಬಾಕಿ ಇರುವ ಪಡಿತರ ಚೀಟಿ ಅರ್ಜಿಗಳು ಮಾ.31ರೊಳಗೆ ವಿಲೇವಾರಿ

ಏಪ್ರಿಲ್ 1ರಿಂದ ಎಪಿಎಲ್, ಬಿಪಿಎಲ್ ಕಾರ್ಡ್‌ಗೆ ಹೊಸದಾಗಿ ಅರ್ಜಿ ಸ್ವೀಕಾರ

● ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಹೆಚ್.ಮುನಿಯಪ್ಪ ಮಾಹಿತಿ ● 4 ಚಕ್ರ ವಾಹನವುಳ್ಳ, 1.20 ಲಕ್ಷಕ್ಕಿಂತ ಅಧಿಕ ಆದಾಯವುಳ್ಳ ಕುಟುಂಬಕ್ಕೆ ಬಿಪಿಎಲ್ ಕಾರ್ಡ್ ನೀಡಲ್ಲ

ಬೆಂಗಳೂರು, ಫೆ.15(ಕೆಎಂಶಿ)– ಪಡಿತರ ಚೀಟಿಗಳಿಗಾಗಿ ಬಾಕಿ ಇರುವ ಅರ್ಜಿಗಳನ್ನು ಮಾರ್ಚ್ 31 ರೊಳಗಾಗಿ ಇತ್ಯರ್ಥಗೊಳಿಸಿ, ಏಪ್ರಿಲ್ 1ರಿಂದ ಬಿಪಿಎಲ್, ಎಪಿಎಲ್ ಕಾರ್ಡ್‌ಗಳಿಗೆ ಹೊಸದಾಗಿ ಅರ್ಜಿಗಳನ್ನು ಸ್ವೀಕರಿಸಲಾಗುವುದು ಎಂದು ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್.ಮುನಿಯಪ್ಪ ವಿಧಾನ ಸಭೆಯಲ್ಲಿಂದು ತಿಳಿಸಿದ್ದಾರೆ.



ಪ್ರಶ್ನೋತ್ತರ ಅವಧಿಯಲ್ಲಿ ನಯನಾ ಮೋಟಮ್ಮ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ರಾಜ್ಯದಲ್ಲಿ ಆದ್ಯತಾ ಪಡಿತರ ಚೀಟಿಗಳನ್ನು (ಬಿಪಿಎಲ್) ಪಡೆಯಲು ಸಾಕಷ್ಟು ನಿಯಮಗಳನ್ನು ರೂಪಿಸಲಾಗಿದೆ.

ನಿಯಮಗಳ ಅಡಿಯಲ್ಲಿ ಬರುವವರಿಗೆ ಹೊಸ ಪಡಿತರ ಚೀಟಿ ನೀಡಿ ಸರ್ಕಾರಿ ಸೌಲಭ್ಯಗಳನ್ನು ಕಲ್ಪಿಸಲಾಗುವುದು. ಏಪ್ರಿಲ್ 1 ರಿಂದ ಎಪಿಎಲ್ ಮತ್ತು ಬಿಪಿಎಲ್ ಹೊಸ ಪಡಿತರ ಚೀಟಿ ಪಡೆಯಲು ಅರ್ಜಿ ಆಹ್ವಾನಿಸುವುದಾಗಿ ತಿಳಿಸಿದ ಸಚಿವರು, ಅರ್ಹ ಫಲಾನುಭವಿಗಳು ತಮಗೆ ದಕ್ಕಬಹುದಾದ ಸವಲತ್ತನ್ನು ಈ ಚೀಟಿಗಳನ್ನು ಪಡೆಯುವ ಮೂಲಕ ತಮ್ಮದಾಗಿಸಿಕೊಳ್ಳಿ ಎಂದರು. ವೇತನ ಪರಿಗಣನೆ, ಎಲ್ಲಾ



ಕಾಯಂ ನೌಕರರು ಜಿಎಸ್ಟಿ, ಆದಾಯ ಸೇವಾ ತೆರಿಗೆ, ವೃತ್ತಿ ತೆರಿಗೆ ಪಾವತಿಸುವವರು, ಗ್ರಾಮೀಣ ಪ್ರದೇಶದಲ್ಲಿ 3 ಹೆಕ್ಟೇರ್ ಒಣಭೂಮಿ ಅಥವಾ ತತ್ಸಮಾನ ನೀರಾವರಿ ಭೂಮಿ ಹೊಂದಿರುವ ಕುಟುಂಬಗಳು ಅಥವಾ ಗ್ರಾಮೀಣ ಪ್ರದೇಶವನ್ನು ಹೊರತುಪಡಿಸಿ ನಗರಪ್ರದೇಶಗಳಲ್ಲಿ ಸಾವಿರ ಚದುರ ಅಡಿಗಿಂತ ಹೆಚ್ಚಿನ ವಿಸ್ತೀರ್ಣದ ಪಕ್ಕಾ ಮನೆಯನ್ನು ಸ್ವಂತಕ್ಕಾಗಿ ಹೊಂದಿರುವ ಕುಟುಂಬಗಳು ಜೀವನೋಪಾಯಕ್ಕಾಗಿ ಸ್ವಂತವಾಗಿ ಓಡಿಸುವ ಒಂದು ವಾಣಿಜ್ಯ ವಾಹನ ಅಂದರೆ, ಟ್ರ್ಯಾಕ್ಟರ್, ಮ್ಯಾಕ್ಸಿಕ್ಯಾಬ್, ಟ್ಯಾಕ್ಸಿ ಇತ್ಯಾದಿಗಳನ್ನು ಹೊಂದಿರುವ ಕುಟುಂಬಗಳನ್ನು ಹೊರತುಪಡಿಸಿ 4 ಚಕ್ರದ ವಾಹನವನ್ನು ಹೊಂದಿರುವ ಎಲ್ಲಾ ಕುಟುಂಬಗಳನ್ನೂ ಬಿಪಿಎಲ್ ವ್ಯಾಪ್ತಿಯಿಂದ ಹೊರಗಿಡಲಾಗಿದೆ. ಕುಟುಂಬದ ಆದಾಯ 1.20 ಲಕ್ಷ ರೂ.ಗಿಂತ ಹೆಚ್ಚಿದ್ದರೆ ಅವರಿಗೂ ಬಿಪಿಎಲ್‌ಗೆ ಅವಕಾಶವಿಲ್ಲ ಎಂದರು. ಈ ಹಿಂದಿನ ಸರ್ಕಾರದ ಅವಧಿಯಲ್ಲಿ 2.95 ಲಕ್ಷ ಅರ್ಜಿಗಳನ್ನು ಎಪಿಎಲ್ ಹಾಗೂ ಬಿಪಿಎಲ್‌ಗಾಗಿ ಸ್ವೀಕರಿಸಲಾಗಿತ್ತು. ● 6ನೇ ಪುಟಕ್ಕೆ

ಇಂದು ಬೆಳಗ್ಗೆ 10.15ಕ್ಕೆ ಸಿಎಂ ಸಿದ್ದರಾಮಯ್ಯ ಬಜೆಟ್ ಮಂಡನೆ




ಬೆಂಗಳೂರು, ಫೆ.15–ಇನ್ನು ಎರಡು ತಿಂಗಳಲ್ಲಿ ದೇಶದಲ್ಲಿ ಸಾರ್ವತ್ರಿಕ ಚುನಾವಣೆ ನಡೆಯಲಿದೆ. ಈ ಸಂದರ್ಭದಲ್ಲಿ ಎಲ್ಲಾ ರಾಜ್ಯಗಳಿಗೂ ಈ ಚುನಾವಣೆ ಮಹತ್ವದ್ದಾಗಿದೆ. ಕೇಂದ್ರದಲ್ಲಿ ಪ್ರಸ್ತುತ ಎನ್‌ಡಿಎ ಸರ್ಕಾರವಿದ್ದು ರಾಜ್ಯದ 28 ಲೋಕಸಭಾ ಸ್ಥಾನಗಳಲ್ಲಿ ಬಹುತೇಕ ಬಿಜೆಪಿ ಸಂಸದರಿದ್ದಾರೆ. ಮುಂಬರುವ ಚುನಾವಣೆಯಲ್ಲಿ ರಾಜ್ಯದಿಂದ ಕಾಂಗ್ರೆಸ್‌ಗೆ ಅತೀ ಹೆಚ್ಚು ಸ್ಥಾನಗಳನ್ನು ಗೆಲ್ಲುವ ತವಕದಲ್ಲಿರುವ ರಾಜ್ಯ ಆಡಳಿತಾರೂಢ ಕಾಂಗ್ರೆಸ್ ಜನರನ್ನು ಸೆಳೆಯಲು ಹಲವು ತಂತ್ರಗಳನ್ನು ಮಾಡುತ್ತಿದೆ. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ನಾಳೆ ಮಂಡಿಸುತ್ತಿರುವ 15ನೇ ಬಜೆಟ್ ಮಹತ್ವದ್ದಾಗಿದೆ.

ವಿಶೇಷ ಸಂಪುಟ ಸಭೆ

ಕರ್ನಾಟಕದ ಮಟ್ಟಿಗೆ ಇದೊಂದು ಹೊಸ ದಾಖಲೆಯಾಗಿದೆ. ಲೋಕಸಭೆ ಚುನಾವಣೆ ಹೊತ್ತಲ್ಲೇ ಬಜೆಟ್ ಮಂಡನೆ ಮಾಡುತ್ತಿರುವುದರಿಂದ ಮಹತ್ವದ ಘೋಷಣೆಗಳು ಹೊರಬೀಳುವ ನಿರೀಕ್ಷೆಗಳಿವೆ. ಲೋಕಸಭೆ ಚುನಾವಣೆ ಮೇಲೆ ಗಮನ ಇಟ್ಟುಕೊಂಡು ರಾಜ್ಯ ಬಜೆಟ್‌ನಲ್ಲಿ ಸಿದ್ದರಾಮಯ್ಯ ಮಹತ್ವದ ಘೋಷಣೆ ಮಾಡುವ ಸಾಧ್ಯತೆಯೂ ಇದೆ. ಬಜೆಟ್ ಮಂಡನೆಗೂ ಮುನ್ನ ಸಿದ್ದರಾಮಯ್ಯ ಅವರು ವಿಶೇಷ ಸಂಪುಟ ಸಭೆ ನಡೆಸಲಿದ್ದಾರೆ. ಇಂದು (ಫೆ.16) ಬೆಳಗ್ಗೆ 10.15ಕ್ಕೆ ಸಿದ್ದರಾಮಯ್ಯ ಅವರು ವಿಧಾನ ಸಭೆಯಲ್ಲಿ ಬಜೆಟ್ ಮಂಡನೆ ಮಾಡಲಿದ್ದಾರೆ. ಬಜೆಟ್ ಸರ್ಕಾರದ ಮಾಧ್ಯಮದಲ್ಲಿ ನೇರ ಪ್ರಸಾರವಾಗಲಿದೆ.

ಈ ಬಾರಿ ರಾಜ್ಯದ ಬಜೆಟ್ ಗಾತ್ರ 3.80 ಲಕ್ಷ ಕೋಟಿ ರೂಪಾಯಿಗೆ ಏರಿಕೆಯಾಗಲಿದೆ. ಈವರೆಗೂ ರಾಜ್ಯದ ಬಜೆಟ್ ಗಾತ್ರ 3.27 ಲಕ್ಷಕೋಟಿ ರೂ. ದಾಟಿರಲಿಲ್ಲ. ಆದರೆ ಈ ಬಾರಿ ಸುಮಾರು 50 ಸಾವಿರ ಕೋಟಿ ರೂ.ಹೆಚ್ಚಳವಾಗಲಿದೆ.

ಭಯಂಕರ ಸಿಡಿಮದ್ದಿಗೂ ಜಗ್ಗದ ಸಿದ್ದೇಗೌಡರು ಬೆಂದ ದೇಹದ ನೋವಿಂದ ನರಳುವ ದುಸ್ಥಿತಿ...

● ದಸರಾ ವೇಳೆ ಸಿಡಿಮದ್ದು ಸಿಡಿಸುವಾಗ ಸ್ಫೋಟದ ಸಂತ್ರಸ್ತ ಗೋಳು ● ಚಿಕಿತ್ಸೆಗೆ ಹಣವಿಲ್ಲ; ಕುಟುಂಬ ನಿರ್ವಹಣೆ ಸಂಕಷ್ಟದ ಅಳಲು ● ಮರೆತಂತಿರುವ ಪೊಲೀಸ್ ಇಲಾಖೆ; ದಯೆ ತೋರದ 'ಮಾನವೀಯ' ಸರ್ಕಾರ



■ ಮೋಹನ್ ಕಾಯಕ

ಮೈಸೂರು, ಫೆ.15–ಸಿಡಿಮದ್ದಿನ ಬೆಂಕಿಯಲ್ಲಿ ಬೆಂದು ನೋವುಂಡ ಆರಕ್ಷಕರಿಗೆ ಪೊಲೀಸ್ ಇಲಾಖೆಯ ಅನುಗ್ರಹವೂ ಇಲ್ಲ... ಸರ್ಕಾರದ ಸಾಂತ್ವನ ಪೂರ್ವಕ ಧನವೂ ಇಲ್ಲ...! ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದಲ್ಲಿ ಜಂಬೂಸವಾರಿ ಮೆರವಣಿಗೆ ಆರಂಭಕ್ಕೂ ಮುನ್ನ ಗೌರವ ಸೂಚಕವಾಗಿ 21 ಬಾರಿ ಕುಶಾಲ ತೋಪುಗಳನ್ನು ಸಿಡಿಸಲಾಗುವುದು. ಸಿಡಿಮದ್ದುಗಳನ್ನು ಸಿಡಿಸುವುದಕ್ಕಾಗಿಯೇ ಫಿರಂಗಿ ದಳ ರಚನೆ ಮಾಡಿ, ಕಠಿಣ ತರಬೇತಿಯೊಂದಿಗೆ ಪೂರ್ವ ತಯಾರಿಯನ್ನು ಮಾಡಿಕೊಳ್ಳಲಾಗುವುದು. ಕಳೆದ ದಸರಾ ಮಹೋತ್ಸವದಲ್ಲಿನ ವಿಜಯದಶಮಿ ಮುನ್ನ ದಿನ ಅಂದರೆ ಕಡೆ ಹಂತದ ಕುಶಾಲತೋಪು ● 6ನೇ ಪುಟಕ್ಕೆ

> “ಚಿಕಿತ್ಸೆ ಪಡೆಯುವಾಗ ಇನ್ಸೂರೆನ್ಸ್ ಕಂಪನಿಯವರಿಗೆ ಸರಿಯಾದ ಮಾಹಿತಿ ನೀಡದ ಕಾರಣ ಇನ್ಸೂರೆನ್ಸ್ ಹಣ ಸಿಗಲಿಲ್ಲ. ಸ್ವಂತ ಮನೆ ಕಟ್ಟುವ ಭರದಲ್ಲಿ ಚಿಕ್ಕದಾಗಿ ಜಾಗ ಖರೀದಿಸಿ ಲೋನ್ ತೆಗೆದುಕೊಂಡು ಮನೆ ಕಟ್ಟಿದೆ. ಇನ್ನೇನು ಸ್ವಲ್ಪ ಆರ್ಥಿಕವಾಗಿ ಚೇತರಿಸಿಕೊಳ್ಳಬೇಕು ಎನ್ನುವಷ್ಟರಲ್ಲಿ ನನಗೆ ಈ ರೀತಿಯಾಯಿತು. ಬೆಂಕಿ ಬಿದ್ದಾಗಿನಿಂದ ಇವತ್ತಿನವರೆಗೂ ನೋವಿನಲ್ಲೇ ಕಾಲಕಳೆಯುತ್ತಿದ್ದೇನೆ. ಒಮ್ಮೊಮ್ಮೆ ವಿಪರೀತವಾಗಿ ಕಡಿಯುತ್ತದೆ. ಸ್ವಲ್ಪ ಕೆರೆದರೂ ತಡೆಯಲಾಗದಷ್ಟು ಉರಿಯುತ್ತದೆ. ಲೇಸರ್ ಟ್ರೀಟ್‌ಮೆಂಟ್ ಆಗಬೇಕು. ಆದರೆ ಹಣವಿಲ್ಲದೆ ಟ್ರೀಟ್‌ಮೆಂಟ್ ಪಡೆಯಲು ಸಾಧ್ಯವಾಗಿಲ್ಲ. ಆರ್ಥಿಕವಾಗಿ ಸಂಕಷ್ಟದಲ್ಲಿದ್ದೇನೆ. ಬಲಗೈ ಬೆರಳುಗಳನ್ನು ಯಾವಾಗಲು ಆಡಿಸುತ್ತಿರಬೇಕು. ಐದತ್ತು ನಿಮಿಷ ಅಲುಗಾಡಿಸದಿದ್ದರೆ ಹಾಗೆ ಮುದುರಿಕೊಳ್ಳುತ್ತವೆ. ಎಲ್ಲಿಂದ ಹಾರಿಬಂತೋ ಸಣ್ಣ ಕಿಡಿ ಗೊತ್ತಿಲ್ಲ. ಬ್ಯಾಗ್‌ನಲ್ಲಿದ್ದ ಸುಮಾರು 2 ಕೆ.ಜಿ ಸಿಡಿಮದ್ದು ಕ್ಷಣಾರ್ಧದಲ್ಲೇ ಸಿಡಿಯಿತು. ಕಣ್ಮುಚ್ಚಿ ಬಿಡುವಷ್ಟರಲ್ಲಿ ದೇಹದ ಅರ್ಧಭಾಗ ಬೆಂದಿತು. 52 ಸೆಕೆಂಡ್‌ನಲ್ಲಿ 21 ಬಾರಿ ಸಿಡಿಮದ್ದು ಸಿಡಿಸಬೇಕು. ಆ ವೇಳೆ ನಮ್ಮ ಗಮನ ಸಂಪೂರ್ಣವಾಗಿ ಅದರ ಕಡೆಗಿರುತ್ತದೆ. ನನ್ನ ಬ್ಯಾಡ್ ಟೈಂ ಅನ್ಸುತ್ತೆ. – ಸಿದ್ದೇಗೌಡರು



ಹುಣಸೂರು 100 ಹಾಸಿಗೆಗಳ ಹೊಸ ಆಸ್ಪತ್ರೆ ಮುಂದಿನ ವರ್ಷದೊಳಗೆ ಉದ್ಘಾಟನೆ

ಶಾಸಕ ಜಿ.ಡಿ.ಹರೀಶ್‌ಗೌಡರಿಗೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಭರವಸೆ

ಬೆಂಗಳೂರು, ಫೆ.15(ಕೆಎಂಶಿ)–ಹುಣಸೂರು ತಾಲೂಕಿನಲ್ಲಿ ನಿರ್ಮಾಣ ಹಂತದಲ್ಲಿರುವ 100 ಹಾಸಿಗೆಗಳ ಸಾಮರ್ಥ್ಯದ ಸಾರ್ವಜನಿಕ ಆಸ್ಪತ್ರೆಯ ಕಟ್ಟಡವನ್ನು ಮುಂದಿನ ವರ್ಷದೊಳಗಾಗಿ ಜನಸೇವೆಗೆ ಲೋಕಾರ್ಪಣೆಗೊಳಿಸುವುದಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ವಿಧಾನಸಭೆಯಲ್ಲಿಂದು ತಿಳಿಸಿದ್ದಾರೆ. ಪ್ರಶ್ನೋತ್ತರದ ಅವಧಿಯಲ್ಲಿ ಜಿ.ಟಿ.ಹರೀಶ್‌ಗೌಡರು ವಿಷಯ ಪ್ರಸ್ತಾಪಿಸಿ, ಹುಣಸೂರು ಪಟ್ಟಣದಲ್ಲಿ 31 ಕೋಟಿ ರೂ. ● 6ನೇ ಪುಟಕ್ಕೆ


ದಿನೇಶ್ ಗುಂಡೂರಾವ್


ಹರೀಶ್‌ಗೌಡ

ಪತ್ನಿಯ 'ಕರಿಮಣಿ ಮಾಲೀಕ ನೀನಲ್ಲ' ಮೋಜಿಗೆ ಪತಿ ಬಲಿ

ಹನೂರು, ಫೆ.15– ಪತ್ನಿಯ 'ಕರಿಮಣಿ ಮಾಲೀಕ ನೀನಲ್ಲ' ರೀಲ್ಸ್ ಮೋಜು ಆಕೆಯ ಪತಿಯನ್ನೇ ಇನ್ನಿಲ್ಲವಾಗಿಸಿದ ಘಟನೆ ತಾಲೂಕಿನ ಪಿ.ಜಿ.ಪಾಳ್ಯ ಗ್ರಾಮದಲ್ಲಿ ನಡೆದಿದೆ. ಪಿ.ಜಿ.ಪಾಳ್ಯದ ಕುಮಾರ್ (33), ಪತ್ನಿ ರೂಪಾ ಮಾಡಿದ್ದ ರೀಲ್ಸ್ ಬಗ್ಗೆ ಕೆಲವರು ರೇಗಿಸಿದ್ದರಿಂದ ಮನನೊಂದು ಬುಧವಾರ ರಾತ್ರಿ ಮರಕ್ಕೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಕುಮಾರ್ ಹಾಗೂ ರೂಪಾ ವಿವಾಹವಾಗಿ ಸುಮಾರು 10 ವರ್ಷವಾಗಿದ್ದು, ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ರೂಪಾ ಇತ್ತೀಚೆಗೆ ರೀಲ್ಸ್ ಮಾಡುವ ಗೀಳು ಹಚ್ಚಿಕೊಂಡಿದ್ದರು. ಈ ವಿಚಾರವಾಗಿ ದಂಪತಿ ನಡುವೆ ಜಗಳವಾಗಿತ್ತು ಎನ್ನಲಾಗಿದೆ.


ಕುಮಾರ್

ಈ ನಡುವೆ ತವರು ಮನೆಗೆ ಹೋಗಿದ್ದಾಗ ರೂಪಾ, ತನ್ನ ಸಹೋದರಿ ಯಶೋದಾ ಹಾಗೂ ಸೋದರಮಾವ ಗೋವಿಂದ ಅವರೊಂದಿಗೆ 'ಕರಿಮಣಿ ಮಾಲೀಕ ನೀನಲ್ಲ' ಹಾಡಿಗೆ ರೀಲ್ಸ್ ಮಾಡಿದ್ದರು. ಆ ವಿಡಿಯೋವನ್ನು ಸಹೋದರಿ ಮೊಬೈಲ್‌ನಿಂದ ತಮ್ಮ ಮೊಬೈಲ್‌ಗೆ ಕಳುಹಿಸಿಕೊಂಡ ರೂಪಾ, ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದರು. ಈ ರೀಲ್ಸ್ ನೋಡಿದ ಕುಮಾರ್‌ನ ಕೆಲ ಸ್ನೇಹಿತರು, ಕರಿಮಣಿ ಮಾಲೀಕ ನೀನಲ್ವ ಎಂದು ಅವನನ್ನು ರೇಗಿಸಿದ್ದಾರೆ. ಈ ರೀತಿ ಏಕೆ ರೇಗಿಸುತ್ತಿದ್ದೀರಿ ಎಂದು ವಿಚಾರಿಸಿದಾಗ ತನ್ನ ಪತ್ನಿ 'ಕರಿಮಣಿ ಮಾಲೀಕ ನೀನಲ್ಲ' ● 9ನೇ ಪುಟಕ್ಕೆ

ನಾಮಫಲಕಗಳಲ್ಲಿ ಶೇ.60ರಷ್ಟು ಕನ್ನಡ ಕಡ್ಡಾಯ

ಬೆಂಗಳೂರು, ಫೆ.15– ನಾಮಫಲಕಗಳಲ್ಲಿ ಶೇ.60ರಷ್ಟು ಕನ್ನಡ ಪ್ರದರ್ಶಿಸುವುದನ್ನು ಕಡ್ಡಾಯಗೊಳಿಸುವ ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ವಿಧೇಯಕವನ್ನು ಗುರುವಾರ ವಿಧಾನಸಭೆಯಲ್ಲಿ ಅಂಗೀಕರಿಸಲಾಗಿದೆ. 2024ರ ತಿದ್ದುಪಡಿ ಮಸೂದೆ ಇದಾಗಿದ್ದು, ವಾಣಿಜ್ಯ, ಕೈಗಾರಿಕೆ, ಉದ್ಯಮ, ಆಸ್ಪತ್ರೆಗಳು, ಪ್ರಯೋಗಾಲಯಗಳು, ಹೋಟೆಲ್‌ಗಳು ಸೇರಿದಂತೆ ಎಲ್ಲಾ ನಾಮಫಲಕಗಳಲ್ಲಿಯೂ ಕನ್ನಡ ಭಾಷೆಯನ್ನು ಶೇ.60ರಷ್ಟು ಪ್ರದರ್ಶಿಸುವುದು ಕಡ್ಡಾಯವಾಗಲಿದೆ. ನಾಮಫಲಕಗಳ ಮೇಲ್ಭಾಗದಲ್ಲಿ ಕನ್ನಡವನ್ನು ಪ್ರದರ್ಶಿಸಬೇಕು ಎಂದು ಮಸೂದೆಯಲ್ಲಿ ಉಲ್ಲೇಖಿಸಲಾಗಿದೆ. ನಾಮಫಲಕಗಳಲ್ಲಿ ಶೇ.60 ರಷ್ಟು ಕನ್ನಡ ಕಡ್ಡಾಯ ನಿಯಮ ಪಾಲಿಸದಿದ್ದಲ್ಲಿ ಉದ್ಯಮಗಳ ಪರವಾನಗಿ ರದ್ದತಿಗೆ ಕಾರಣವಾಗುತ್ತದೆ ಎಂದು ಸರ್ಕಾರ ಸದನದಲ್ಲಿ ಪ್ರತಿಪಾದಿಸಿದೆ. ವಿಧಾನ ಸಭೆಯಲ್ಲಿ ವಿಧೇಯಕವನ್ನು ಮಂಡಿಸಿದ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಅವರು, ● 9ನೇ ಪುಟಕ್ಕೆ

ಲೋಕಸಭಾ ಚುನಾವಣೆಗೆ ಬಿಜೆಪಿ ಸಮರ ಸಿದ್ಧತೆ

ಮೈಸೂರಿನಲ್ಲಿ ಚುನಾವಣೆಯ ಕಾರ್ಯಾಲಯ ಉದ್ಘಾಟನೆ

● 4 ಲೋಕಸಭಾ ಕ್ಷೇತ್ರಕ್ಕೆ ಒಂದು ಕ್ಲಸ್ಟರ್ ● ಇಲ್ಲಿಂದಲೇ ಬಿಜೆಪಿ–ಜೆಡಿಎಸ್ ಕಾರ್ಯತಂತ್ರ ● ಸಂಸದೀಯ ಮಂಡಳಿಯಲ್ಲಿ ಟಿಕೆಟ್ ತೀರ್ಮಾನ ● ಕೊಡಗಿನಲ್ಲಿ ಬಿಜೆಪಿಗೆ ಮತ್ತಷ್ಟು ಭಾರಿ ಬೆಂಬಲ

ಮೈಸೂರು, ಫೆ.15(ಬಿಎಲ್‌ಯು)– ಏಪ್ರಿಲ್– ಮೇ ತಿಂಗಳಲ್ಲಿ ನಡೆಯುವ ಲೋಕಸಭಾ ಚುನಾವಣೆಯ ಪ್ರಜಾಪ್ರಭುತ್ವದ ಹಬ್ಬಕ್ಕೆ ಬಿಜೆಪಿ ಸಮರ ಸಿದ್ಧತೆಯಲ್ಲಿ ತೊಡಗಿದೆ. ಮೈಸೂರಿನ ಬಿಜೆಪಿ ಪ್ರಧಾನ ಕಚೇರಿಯಲ್ಲಿ ಇಂದು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಚುನಾವಣಾ ಕಾರ್ಯಾಲಯವನ್ನು ಇಂದು ಉದ್ಘಾಟಿಸಿ, ಚುನಾವಣಾ ಸಿದ್ಧತಾ ಕಾರ್ಯಗಳಿಗೆ ಬಿಜೆಪಿ ನಾಯಕರು ಅಧಿಕೃತವಾಗಿ ಚಾಲನೆ ನೀಡಿದ್ದಾರೆ.

ರಾಷ್ಟ್ರ ರಾಜಕಾರಣಕ್ಕೆ ಮುನ್ನುಡಿ ಬರೆಯುವ ಲೋಕಸಭಾ ಚುನಾವಣಾ ಅಖಾಡದಲ್ಲಿ ಸೆಣಸಾಟ ನಡೆಸಲು ಬಿಜೆಪಿ ಸಿದ್ಧತೆ ಆರಂಭಿಸಿದೆ. ಚುನಾವಣೆ ಘೋಷಣೆಗೆ ಇನ್ನು ಕೆಲವೇ ದಿನಗಳು ಬಾಕಿ ಇರುವಂತೆ ಬಿಜೆಪಿ ಪ್ರಚಾರ ಕಾರ್ಯತಂತ್ರ ರೂಪಿಸಿದೆ. ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯ ಗೆಲುವಿನ ತಂತ್ರ ವಿನೂತನವಾಗಿದೆ. ಮೈಸೂರು–ಕೊಡಗು, ಚಾಮರಾಜನಗರ, ಮಂಡ್ಯ ಹಾಗೂ ಹಾಸನ ಲೋಕಸಭಾ ಕ್ಷೇತ್ರ ಸೇರಿಸಿ ಒಂದು ಕ್ಲಸ್ಟರ್ ಮಾಡಿದೆ. ಈ ಕ್ಲಸ್ಟರ್‌ಗೆ ಮಾಜಿ ಸಚಿವ ಎಸ್.ಎ.ರಾಮದಾಸ್ ಅವರನ್ನು ಮುಖ್ಯಸ್ಥರನ್ನಾಗಿ ನಿಯೋಜಿಸಲಾಗಿದೆ.


ರಾಜ್ಯದಲ್ಲಿ ಬಿಜೆಪಿ ಹಾಗೂ ಜೆಡಿಎಸ್ ನಡುವೆ ಚುನಾವಣಾ ಮೈತ್ರಿ ಏರ್ಪಟ್ಟಿರುವ ಹಿನ್ನೆಲೆಯಲ್ಲಿ ಕ್ಲಸ್ಟರ್‌ನಲ್ಲಿ ಎರಡೂ ಪಕ್ಷಗಳು ಒಟ್ಟಾಗಿ ಸೇರಿ ಗೆಲುವಿನ ಕಾರ್ಯತಂತ್ರ ರೂಪಿಸಲಿವೆ. ಮೈಸೂರಿನ ಚಾಮರಾಜಪುರಂನಲ್ಲಿರುವ ಬಿಜೆಪಿ ಪ್ರಧಾನ ಕಚೇರಿಯಲ್ಲಿ ತೆರೆದಿರುವ ಲೋಕಸಭಾ ಚುನಾವಣೆಯ ಕಾರ್ಯಾಲಯವನ್ನು ಮಾಜಿ ಉಪ ಮುಖ್ಯಮಂತ್ರಿಗಳೂ ಆದ ● 9ನೇ ಪುಟಕ್ಕೆ




ಮೈಸೂರಿನ ಚಾಮರಾಜಪುರಂನಲ್ಲಿರುವ ಬಿಜೆಪಿ ಪ್ರಧಾನ ಕಚೇರಿಯಲ್ಲಿ ಗುರುವಾರ ಮಾಜಿ ಉಪ ಮುಖ್ಯಮಂತ್ರಿ ಡಾ.ಅಶ್ವಥ್ ನಾರಾಯಣ್, ಸಂಸದ ಪ್ರತಾಪ್ ಸಿಂಹ ಅವರ 10 ವರ್ಷದ ಅಭಿವೃದ್ಧಿ ಕಾರ್ಯಗಳ ರಿಪೋರ್ಟ್ ಕಾರ್ಡ್‌ನ್ನು ಬಿಡುಗಡೆ ಮಾಡಿದರು. ಸಂಸದ ಪ್ರತಾಪ್ ಸಿಂಹ, ಮಾಜಿ ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಅಪ್ಪಚ್ಚು ರಂಜನ್, ಬಿಜೆಪಿ ರಾಜ್ಯ ಉಪಾಧ್ಯಕ್ಷ ರಾಜೇಂದ್ರ, ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಮಾಜಿ ಮೇಯರ್ ಶಿವಕುಮಾರ್, ಮುಖಂಡರಾದ ಸಂದೇಶ್‌ಸ್ವಾಮಿ, ಕವೀಶ್‌ಗೌಡ, ಜಯಪ್ರಕಾಶ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೋದಿ ಮತ್ತೆ ಅಧಿಕಾರಕ್ಕೆ ಬಂದರೆ ಮೈಸೂರಿಗೆ ಮೆಟ್ರೋ

ಕೇಂದ್ರದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಸರ್ಕಾರ ಮತ್ತೊಮ್ಮೆ ಅಧಿಕಾರಕ್ಕೆ ಬಂದರೆ ಮೈಸೂರಿನಲ್ಲಿ ಮೆಟ್ರೋ ರೈಲು ಯೋಜನೆ ಅನುಷ್ಠಾನ ಮಾಡಲಾಗುವುದು ಎಂದು ಸಂಸದ ಪ್ರತಾಪ್ ಸಿಂಹ ಭರವಸೆ ನೀಡಿದರು. ಮೈಸೂರಿಗೆ ಮೆಟ್ರೋ ತರುವ ಬಗ್ಗೆ ಈಗಾಗಲೇ ಪ್ರಧಾನಮಂತ್ರಿ ನರೇಂದ್ರ ಮೋದಿ ಕೂಡ ಹೇಳಿದ್ದಾರೆ. ಮೈಸೂರು–ಬೆಂಗಳೂರು ನಡುವಿನ ರೈಲು ಯೋಜನೆಗೆ ಡಿಪಿಆರ್ ಸಿದ್ಧವಾಗುತ್ತಿದೆ. ಮತ್ತೊಮ್ಮೆ ಮೋದಿ ಸರ್ಕಾರ ಅಧಿಕಾರಕ್ಕೆ ಬಂದರೆ ಇಂತಹ ಹತ್ತು ಹಲವು ಯೋಜನೆ ಸಾಕಾರಗೊಳ್ಳಲಿದೆ ಎಂದು ಆಶ್ವಾಸನೆ ನೀಡಿದರು. ನಾನು ಸಂಸದನಾದ ಮೇಲೆ 2014ರ ನಂತರ ಮೈಸೂರಿಗೆ ಹೊಸದಾಗಿ 11 ರೈಲುಗಳ ಸಂಚಾರ ಆರಂಭಿಸಲಾಯಿತು. ಮುಖ್ಯಮಂತ್ರಿ ಆಗಿದ್ದ ಬಿ.ಎಸ್. ಯಡಿಯೂರಪ್ಪ ಹಾಗೂ ಬಸವರಾಜ ಬೊಮ್ಮಾಯಿ ಮೈಸೂರಿನ ಅಭಿವೃದ್ಧಿಗೆ ಸ್ಮರಣೀಯ ಕೊಡುಗೆ ನೀಡಿದ್ದಾರೆ ಎಂದು ಹೇಳಿದರು. ಮೈಸೂರಿನ ಕೋಚನಹಳ್ಳಿಯಲ್ಲಿ ಸೆಮಿಕಂಡಕ್ಟರ್ ಕಾರ್ಖಾನೆ ಆರಂಭಿಸಲು ಬಿಜೆಪಿ ಸರ್ಕಾರ ಎಲ್ ಅಂಡ್ ಟಿಯಿಂದ ಡಿಪಿಆರ್ ಕೂಡ ಸಿದ್ಧಪಡಿಸಲಾಗಿತ್ತು. ಈ ಮೂಲಕ ಮೈಸೂರಿನಲ್ಲಿ ಕೇನ್ಸ್ ಟೆಕ್ನಾಲಜಿಯವರು ಸೆಮಿ ಕಂಡಕ್ಟರ್ ಕಾರ್ಖಾನೆ ಆರಂಭಿಸಬೇಕಿತ್ತು. ಆದರೆ ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಲೂಟಿ ಸರ್ಕಾರ ಅವರಿಗೆ ಸೂಕ್ತ ಸೌಲಭ್ಯ ಕೊಡದ ಕಾರಣ ಕೇನ್ಸ್‌ನವರು ತೆಲಂಗಾಣಕ್ಕೆ ಸ್ಥಳಾಂತರಗೊಂಡರು ಎಂದು ಪ್ರತಾಪ್ ಸಿಂಹ ದೂರಿದರು.



ನಾಳೆ ವಿಶ್ವಗುರು ಬಸವಣ್ಣನವರ ಭಾವಚಿತ್ರ ಅನಾವರಣ



ಮೈಸೂರು, ಫೆ.15–ಶ್ರೀ ವಿಶ್ವಗುರು ಬಸವಣ್ಣನವರ ಭಾವಚಿತ್ರವನ್ನು ಮುಖ್ಯಮಂತ್ರಿ ಫೆ.13ರಂದು ವಿಧಾನಸೌಧದಲ್ಲಿ ಅನಾವರಣಗೊಳಿಸಿದ್ದು, ಫೆ.17ರಂದು ರಾಜ್ಯಾದ್ಯಂತ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ, ತಾಲೂಕು ಕೇಂದ್ರಗಳಲ್ಲಿ ಸ್ಥಳೀಯ ಶಾಸಕರುಗಳ ನೇತೃತ್ವದಲ್ಲಿ ವಿಶ್ವಗುರು ಬಸವಣ್ಣನವರ ಭಾವಚಿತ್ರವನ್ನು ಅನಾವರಣಗೊಳಿಸುವ ಕಾರ್ಯಕ್ರಮವನ್ನು ಆಯೋಜಿಸಲು ಸೂಚಿಸಲಾಗಿದೆ. ಈ ಹಿನ್ನೆಲೆಯಲ್ಲಿ ಜಿಲ್ಲಾ ಕೇಂದ್ರದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಫೆ.17ರಂದು ಬೆಳಗ್ಗೆ 11 ಗಂಟೆಗೆ ಕಲಾಮಂದಿರದಲ್ಲಿ ಸಮಾರಂಭವನ್ನು ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಜಿಲ್ಲಾ ಮಟ್ಟದ ಇಲಾಖೆಗಳು ಹಾಗೂ ಅಧೀನ ಕಚೇರಿಗಳ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು ಭಾಗವಹಿಸುವಂತೆ ತಿಳಿಸಲಾಗಿದೆ. ತಾಲೂಕು ಕೇಂದ್ರಗಳಲ್ಲಿ ಸ್ಥಳೀಯ ಶಾಸಕರ ನೇತೃತ್ವದಲ್ಲಿ ಸದರಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದ್ದಾರೆ.



ಶ್ರೀ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾ ಸ್ವಾಮೀಜಿ ಫೆ.14ರಂದು ಬೀದರ್ ಚಿದಂಬರಾಶ್ರಮದ ಶ್ರೀ ಶಿವಕುಮಾರ ಸ್ವಾಮಿಗಳವರ ಸಹಸ್ರ ಚಂದ್ರದರ್ಶನ ಕಾರ್ಯಕ್ರಮದಲ್ಲಿ ಭಾಗವಹಿಸುವ ಸಲುವಾಗಿ ತೆರಳುವ ಮಾರ್ಗ ಮಧ್ಯೆ ಭಾಲ್ಕಿಯಲ್ಲಿ ವೀರಶೈವ ಲಿಂಗಾಯತ ಹಿರಿಯ ಮುಖಂಡರಾದ ಭೀಮಣ್ಣ ಖಂಡ್ರೆ ಅವರನ್ನು ಭೇಟಿ ಮಾಡಿ, ಕುಶಲೋಪರಿ ವಿಚಾರಿಸಿ, ಆಯುರಾರೋಗ್ಯಕ್ಕೆ ಹಾರೈಸಿದರು. ಶ್ರೀಮತಿ ಭಾರತಿ ಜತ್ತಿ ಹಾಗೂ ಶ್ರೀಮತಿ ಗೀತಾ ಈಶ್ವರ್ ಖಂಡ್ರೆ ಈ ವೇಳೆ ಉಪಸ್ಥಿತರಿದ್ದರು.

ಬಸವಣ್ಣನವರು ಜಾತಿಗೆ ಸೀಮಿತರಲ್ಲ



ಕಾಡಾ ಕಚೇರಿಯಲ್ಲಿ ಬಸವೇಶ್ವರರ ಭಾವಚಿತ್ರ ನೀಡುವ ಅಭಿಯಾನ ನಡೆಯಿತು.

ಮೈಸೂರು,ಫೆ.15–ವಿಶ್ವಗುರು ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕವೆಂದು ಘೋಷಿಸಿ, ಕಡ್ಡಾಯವಾಗಿ ಎಲ್ಲಾ ಸರ್ಕಾರಿ ಕಚೇರಿಗಳಿಗೆ ಬಸವಣ್ಣನವರ ಭಾವಚಿತ್ರ ಹಾಕಬೇಕೆಂದು ಘೋಷಣೆ ಮಾಡಿದ ಸರ್ಕಾರದ ಕಾರ್ಯಕ್ಕೆ ಕೆಆರ್ ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ ಕೃತಜ್ಞತೆ ಸಲ್ಲಿಸಿದ್ದಾರೆ.

ನಗರದ ಕಾಡಾ ಕಚೇರಿಯಲ್ಲಿ ಕೃಷ್ಣರಾಜ ಯುವ ಬಳಗದ ವತಿಯಿಂದ ಆಯೋಜಿಸಿದ್ದ ಕೃಷ್ಣರಾಜ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸರ್ಕಾರಿ ಕಚೇರಿಗಳಿಗೆ ಹಾಗೂ ಸರ್ಕಾರಿ ಶಾಲೆಗಳಿಗೆ ಸರ್ಕಾರದ ಆದೇಶದಂತೆ ವಿಶ್ವಗುರು ಬಸವೇಶ್ವರರ ಭಾವಚಿತ್ರ ನೀಡುವ ಅಭಿಯಾನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಬಸವಣ್ಣರವರು ಯಾವುದೇ ಜಾತಿ ಮತ ಪಂಥಗಳಿಗೆ ಸೀಮಿತವಾದವರಲ್ಲ ಎಂದು ಹೇಳಿದರು.

ನಗರ ಪ್ರಧಾನ ಕಾರ್ಯದರ್ಶಿ ಶಿವಣ್ಣ, ಬಸವಣ್ಣನವರು 12ನೇ ಶತಮಾನದಲ್ಲಿ ಅನುಭವ ಮಂಟಪವನ್ನು ಕಟ್ಟಿಸಿ ಅಲ್ಲಿ ಎಲ್ಲಾ ಜನಾಂಗದವರನ್ನು ಗೌರವಿಸುವ ವ್ಯಕ್ತಿ ಯಾಗಿದ್ದವರು. ಸರ್ಕಾರವು ಇವರನ್ನು ವಿಶ್ವದ ಸಾಂಸ್ಕೃತಿಕ ನಾಯಕವೆಂದು ಘೋಷಣೆ ಮಾಡಬೇಕು ಎಂದರು.

ಕಾಂಗ್ರೆಸ್ ಮುಖಂಡ ಪ್ರದೀಪ್ ಕುಮಾರ್ ಮಾತನಾಡಿ, ಜೀವನದಲ್ಲಿ ವಿಶ್ವಗುರು ಸಾಂಸ್ಕೃತಿಕ ನಾಯಕ ಬಸವಣ್ಣನವರ ತತ್ವ ಆದರ್ಶಗಳನ್ನು ಪಾಲಿಸಿ ಉತ್ತಮ ಸಮಾಜ ನಿರ್ಮಿಸೋಣ ಎಂದು ಹೇಳಿದರು.

ಕೃಷ್ಣರಾಜ ಯುವ ಬಳಗದ ಅಧ್ಯಕ್ಷ ನವೀನ್ ಕೆಂಪಿ ಮಾತನಾಡಿ, ನಮ್ಮ ಕೃಷ್ಣರಾಜ ಯುವ ಬಳಗದ ವತಿಯಿಂದ ಕೃಷ್ಣರಾಜ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಪ್ರತಿಯೊಂದು ಸರ್ಕಾರಿ ಶಾಲೆ ಹಾಗೂ ಸರ್ಕಾರಿ ಕಚೇರಿಗಳಿಗೆ ಭೇಟಿ ನೀಡಿ ವಿಶ್ವಗುರು ಬಸವಣ್ಣನವರ ಭಾವಚಿತ್ರ ವಿತರಿಸಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಮುಖಂಡ ನಂ.ಸಿದ್ದಪ್ಪ, ಕೆಆರ್ ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ, ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಹಿಂದುಳಿದ ವರ್ಗದ ಜಾಗೃತಿ ವೇದಿಕೆ ರಾಜ್ಯಾಧ್ಯಕ್ಷ ಕೆ.ಶಿವರಾಂ, ಕೃಷ್ಣರಾಜ ಯುವ ಬಳಗದ ಅಧ್ಯಕ್ಷ ನವೀನ್ ಕೆಂಪಿ, ಲೋಕೇಶ್ ಕುಮಾರ್, ಹೆಚ್.ವಿ.ಭಾಸ್ಕರ್, ಕಡಕೊಳ ಶಿವಲಿಂಗ, ಬಿ.ನಾಗರಾಜ್, ಮಂಜು, ವೆಂಕಟೇಶ್, ಪುಟ್ಟಣ್ಣ ಇನ್ನಿತರರಿದ್ದರು.

ಏಷಿಯನ್ ಕ್ರೀಡಾಕೂಟದಲ್ಲಿ ಎಸ್.ಲೂರ್ದ್‌ನಾಥನ್‌ಗೆ ಪದಕ




ಪದಕಗಳೊಂದಿಗೆ ಎಸ್.ಲೂರ್ದ್‌ನಾಥನ್

ಮೈಸೂರು,ಫೆ.15–ಇಂಡೋನೇಷಿಯಾದ ಜಕಾರ್ತದಲ್ಲಿ ನಡೆದ 8ನೇ ಏಷಿಯನ್ ಕ್ರೀಡಾಕೂಟದಲ್ಲಿ ಮೈಸೂರಿನ ನಿವೃತ್ತ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಎಸ್.ಲೂರ್ದ್‌ನಾಥನ್ ಭಾರತವನ್ನು ಪ್ರತಿನಿಧಿಸಿ, ಟ್ರಿಪಲ್ ಜಂಪ್‌ನಲ್ಲಿ ಚಿನ್ನದ ಪದಕ ಹಾಗೂ 200 ಮೀಟರ್ ಓಟದಲ್ಲಿ ಕಂಚಿನ ಪದಕ ಪಡೆದುಕೊಂಡಿದ್ದಾರೆ.

1972ರಿಂದ 1993ರವರೆಗೆ ಮೈಸೂರು ನಗರ ಮತ್ತು ಜಿಲ್ಲಾ ಪೊಲೀಸ್ ಕ್ರೀಡಾಕೂಟದಲ್ಲಿ ಭಾಗವಹಿಸಿ, 100 ಮೀಟರ್, 200 ಮೀಟರ್, 400 ಮೀಟರ್, 800 ಮೀಟರ್, 1500 ಮೀಟರ್ ಉದ್ದ ಜಿಗಿತ, ಟ್ರಿಪಲ್ ಜಂಪ್, ಎತ್ತರ ಜಿಗಿತ, ಬರ್ಜಿ ಎಸೆತ, ಡಿಸ್ಕಸ್ ಎಸೆತ, 100 ಮೀಟರ್ ಹರ್ಡಲ್ಸ್, 400 ಮೀಟರ್ ಹರ್ಡಲ್ಸ್, 100 ಮೀಟರ್ ರಿಲೆ, 400 ಮೀಟರ್ ರಿಲೆಯಲ್ಲಿ ಸತತವಾಗಿ 21 ವರ್ಷ ಚಾಂಪಿಯನ್ ಆಗಿ ಹೊರಹೊಮ್ಮಿದ್ದರು. ಅಲ್ಲದೆ ಮೈಸೂರಿನ ಮಾಸ್ಟರ್ ಕ್ರೀಡಾಕೂಟದಲ್ಲಿ ಭಾಗವಹಿಸಿ ದೆಹಲಿ, ಹರಿಯಾಣ, ಭೋಪಾಲ್, ಕಾನ್ಪುರ್, ತಮಿಳುನಾಡು, ಆಂಧ್ರಪ್ರದೇಶಗಳಲ್ಲಿ ನಡೆದ ಕ್ರೀಡಾಕೂಟದಲ್ಲಿ ಭಾಗವಹಿಸಿ ಚಿನ್ನದ ಪದಕ, ಬೆಳ್ಳಿ ಪದಕ ಹಾಗೂ ಕಂಚಿನ ಪದಕಗಳನ್ನು ಗೆದ್ದಿದ್ದಾರೆ.

ನಿಧನ

ಪಿ.ಎಲ್.ನಾಗರತ್ನ



ಮೈಸೂರು,ಫೆ.15– ಮೈಸೂರಿನ ಮೃಗಾಲಯ ಮುಖ್ಯ ರಸ್ತೆಯ ನಿವಾಸಿ ಪಿ.ಎಲ್.ನಾಗರತ್ನ ಗುರುವಾರ ನಿಧನರಾದರು.

ಮೃತರು ಪುತ್ರ ಸಾಗರ್ ಕುಮಾರ್ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ನಾಳೆ (ಫೆ.16) ವೀರನಗೆರೆ ವೀರಶೈವ ರುದ್ರಭೂಮಿಯಲ್ಲಿ ಬೆಳಗ್ಗೆ 10 ಗಂಟೆಗೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಿಂಗಯ್ಯ (ಮಯೂರಣ್ಣ)

ಮೈಸೂರು: ಮೈಸೂರಿನ ಜನತಾನಗರ 7ನೇ ಕ್ರಾಸ್ ನಿವಾಸಿ ನಿಂಗಯ್ಯ (ಮಯೂರಣ್ಣ) ಬುಧವಾರ ರಾತ್ರಿ ನಿಧನರಾದರು. ಮೃತರಿಗೆ 70 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ, ಓರ್ವ ಪುತ್ರ, ಸೊಸೆ, ಇಬ್ಬರು ಮೊಮ್ಮಕ್ಕಳು ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಗುರುವಾರ ಮಧ್ಯಾಹ್ನ ಜನತಾನಗರದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೃಷಿ ಕ್ಷೇತ್ರದ ಏಳಿಗೆಗಾಗಿ ಕೃಷಿ ಪ್ರವಾಸೋದ್ಯಮಕ್ಕೆ ಆದ್ಯತೆ ನೀಡಬೇಕು

'ಕೃಷಿ ಪ್ರವಾಸೋದ್ಯಮ' ಕಾರ್ಯಾಗಾರದಲ್ಲಿ ಡಾ.ಕೆ.ಸಿ.ಗೊಮ್ಮಗೋಳಮಠ ಅಭಿಮತ



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಗುರುವಾರ ರೇಡಿಯೋ ಕಿಸಾನ್ ದಿನದ ಅಂಗವಾಗಿ ಆಯೋಜಿಸಿದ್ದ 'ಕೃಷಿ ಪ್ರವಾಸೋದ್ಯಮ' ಕಾರ್ಯಾಗಾರದಲ್ಲಿ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ ಅವರು ಕೃಷಿ ಪ್ರವಾಸೋದ್ಯಮ ಕುರಿತ ಪುಸ್ತಕ ಬಿಡುಗಡೆ ಮಾಡಿದರು.

ಮೈಸೂರು,ಫೆ.15(ಎಂಟಿವೈ)–ಬೆಳೆಗಳಿಗೆ ವೈಜ್ಞಾನಿಕ ಬೆಲೆ ಸಿಗದೆ ಸದಾ ನಷ್ಟವನ್ನೇ ಎದುರಿಸುತ್ತಿರುವ ಕೃಷಿ ಕ್ಷೇತ್ರದ ಏಳಿಗೆಗಾಗಿ ರೈತರು ಕೃಷಿ ಪ್ರವಾಸೋದ್ಯಮಕ್ಕೂ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಹೈದರಾಬಾದ್‌ನ ರಾಷ್ಟ್ರೀಯ ಕೃಷಿ ವಿಸ್ತರಣಾ ನಿರ್ವಹಣಾ ಸಂಸ್ಥೆ ನಿರ್ದೇಶಕ (ನಿರ್ವಹಣೆ ಮತ್ತು ವಿಶ್ಲೇಷಣೆ) ಡಾ.ಕೆ.ಸಿ. ಗೊಮ್ಮಗೋಳಮಠ ಸಲಹೆ ನೀಡಿದ್ದಾರೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಗುರುವಾರ ರೇಡಿಯೋ ಕಿಸಾನ್ ದಿನದ ಅಂಗವಾಗಿ ಪ್ರಸಾರ ಭಾರತಿ, ಭಾರತೀಯ ಸಾರ್ವಜನಿಕ ಪ್ರಸಾರ ಸೇವೆ ಇಲಾಖೆ, ಮೈಸೂರು ಆಕಾಶವಾಣಿ ಸಹಯೋಗದಲ್ಲಿ ಆಯೋಜಿಸಿದ್ದ 'ಕೃಷಿ ಪ್ರವಾಸೋದ್ಯಮ' ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ನಷ್ಟದ ಪರಿಣಾಮ ಕೆಲವರು ಉದ್ಯಮ ಬದಲಿಸುವುದಕ್ಕೂ ಮುಂದಾಗುತ್ತಾರೆ. ಆದರೆ, ಕೃಷಿ ಕ್ಷೇತ್ರದಲ್ಲಿ ಎಷ್ಟೇ ನಷ್ಟವಾದರೂ ರೈತರು ಮಾತ್ರ ಕೃಷಿಯನ್ನು ನಿಲ್ಲಿಸಿ, ಬೇರೆ ಕ್ಷೇತ್ರದತ್ತ ಗಮನಹರಿಸದೇ ಕೃಷಿಯನ್ನೇ ಮುಂದುವರೆಸುತ್ತಾರೆ. ದೇಶದ 143 ಕೋಟಿ ಜನಸಂಖ್ಯೆಗೆ ಆಹಾರ ಪೂರೈಕೆಯನ್ನು ರೈತರು ಮಾಡುತ್ತಿರುವುದು ಸಾಮಾನ್ಯ ಕೆಲಸವಲ್ಲ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಕೃಷಿ ಪ್ರವಾಸೋದ್ಯಮ ಹೊಸದಲ್ಲ. ಅದು ಈ ಹಿಂದಿನಿಂದಲೂ ಚಾಲ್ತಿಯಲ್ಲಿದೆ. ಕೃಷಿಕರು ಮತ್ತೊಬ್ಬರ ಹೊಲಗಳಿಗೆ ಹೋಗಿ ಪರಿಶೀಲಿಸುವುದು, ಕೃಷಿ ಕ್ಷೇತ್ರದಲ್ಲೇ ವಿವಿಧ ಪೂಜಾ ಕಾರ್ಯ ಕೈಗೊಳ್ಳುವ ಮೂಲಕ ರೈತರು ಕೃಷಿ ಪ್ರವಾಸೋದ್ಯಮ ಮುಂದುವರಿಸಿಕೊಂಡು ಬಂದಿದ್ದಾರೆ. ಆದರೀಗ, 10 ಸಾವಿರ ವರ್ಷ ಹಿಂದಿನ ಕಸುಬಾಗಿರುವ ಕೃಷಿಯನ್ನು ಹೇಗೆ ಲಾಭದಾಯಕವಾಗಿಸಬೇಕು ಎಂಬ ಬಗ್ಗೆ ಚಿಂತಿಸಬೇಕು ಎಂದು ಅಭಿಪ್ರಾಯಪಟ್ಟರು.

ಮೈಸೂರು ಆಕಾಶವಾಣಿ ಮುಖ್ಯಸ್ಥ ಎಸ್.ಎಸ್. ಉಮೇಶ್ ಮಾತನಾಡಿ, ಕೃಷಿ ಪ್ರವಾಸೋದ್ಯಮದ ಮೂಲಕ ಮಕ್ಕಳು, ಜನರನ್ನು ತಮ್ಮ ಕೃಷಿ ಕ್ಷೇತ್ರದತ್ತ ಆಕರ್ಷಿಸಬೇಕು. ಇದಕ್ಕೆ ಪ್ರವೇಶ ದರ ನಿಗದಿಪಡಿಸಿ ಆರ್ಥಿಕ ಸಂಪನ್ಮೂಲ ಸಂಗ್ರಹಿಸಬೇಕು. ಈಗಿನ ಬಹಳಷ್ಟು ಮಕ್ಕಳಿಗೆ ಕೃಷಿ ಕುರಿತು ತಿಳಿದಿಲ್ಲ. ಬೇಸಾಯ, ಬಿತ್ತನೆ, ಕೃಷಿ ಉಪಕರಣಗಳು, ಸಲಕರಣೆ ಬಗ್ಗೆಯೂ ಗೊತ್ತಿಲ್ಲ. ಆದ್ದರಿಂದ ಕೃಷಿ ಪ್ರವಾಸೋದ್ಯಮದ ಮೂಲಕ ಇವರಿಗೆ ಅರಿವು, ಜಾಗೃತಿ ಮೂಡಿಸಬೇಕು. ಜತೆಗೆ, ಕೆಲಕಾಲ ತಮ್ಮ ಹೊಲದಲ್ಲಿ ಕೆಲಸ ಮಾಡಲು ಅವಕಾಶವನ್ನೂ ಕಲ್ಪಿಸಬೇಕು ಎಂದರು.

ಈ ರೀತಿಯ ಪ್ರಯೋಗದಿಂದ ಕೃಷಿ ಭೂಮಿಯನ್ನು ಉಳಿಸಿಕೊಳ್ಳಬಹುದು. ವಾಣಿಜ್ಯ ಭೂಮಿಯಾಗಿ ಪರಿವರ್ತನೆಯಾಗುವುದನ್ನೂ ತಡೆಯಬಹುದು. ಪ್ರತಿ ವರ್ಷ ಫೆಬ್ರವರಿ 15ರಂದು ರೈತರ ದಿನವನ್ನು ಆಚರಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ 96 ಆಕಾಶವಾಣಿ ಕೇಂದ್ರಗಳಿಂದಲೂ ಕೃಷಿರಂಗ ಬಾನುಲಿ ಕಾರ್ಯಕ್ರಮದ ಮೂಲಕ ಕೃಷಿಗೆ ಸಂಬಂಧಿತ ಮಾಹಿತಿ ನೀಡಲಾಗುತ್ತಿದೆ ಎಂದು ತಿಳಿಸಿದರು.

ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ ಮಾತನಾಡಿ, ರೈತರ ಕೊಡುಗೆ ಅವಿಸ್ಮರಣೀಯ. ಅವರು ಬೆಳೆಯುವ ಹಣ್ಣು, ತರಕಾರಿ, ದವಸಧಾನ್ಯಗಳನ್ನೇ ತಿನ್ನಬೇಕು. ಎಷ್ಟು ದುಡ್ಡಿದ್ದರೂ ಹಣವನ್ನು ತಿನ್ನಲು ಸಾಧ್ಯವಿಲ್ಲ. ಹೀಗಾಗಿ, ಕೃಷಿಕರಿಲ್ಲದೆ ಉಳಿದವರು ಬದುಕಲು ಸಾಧ್ಯವಿಲ್ಲ. ಹೀಗಾಗಿಯೇ, ರೈತರನ್ನು ಅನ್ನದಾತರು ಎಂದು ಬಣ್ಣಿಸಲಾಗುತ್ತದೆ. ಆದ್ದರಿಂದ ರೈತರ ಕುರಿತು ಕಾಳಜಿ ತೋರಬೇಕಾಗಿದೆ. ರೈತರನ್ನು ದೇವರಿಗೆ ಹೋಲಿಸುವುದು ಸಮಂಜಸವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಪ್ರವಾಸೋದ್ಯಮ ಇಲಾಖೆಯ ಜಂಟಿ ನಿರ್ದೇಶಕಿ ಎಂ.ಕೆ.ಸವಿತಾ, ತುಮಕೂರು ಜಿಲ್ಲೆಯ ಗುಬ್ಬಿ ತಾಲೂಕಿನ ಅಮ್ಮನ ಪ್ರಕೃತಿ ಮಡಿಲು ಸಂಸ್ಥೆಯ ಎ.ಎಸ್.ಮಹೇಶ್, ರಾಮನಗರ ಜಿಲ್ಲೆಯ ಮಾಗಡಿ ತಾಲೂಕಿನ ಚಿಗುರು ಎಕೋ ಸ್ಪೇಸ್‌ನ ಶ್ರೀವತ್ಸ ಗೋವಿಂದರಾಜು ವಿಷಯ ಮಂಡಿಸಿದರು. ಕರಾಮುವಿ ಕುಲಸಚಿವ ಪ್ರೊ.ಕೆ.ಎಲ್.ಎನ್.ಮೂರ್ತಿ, ಪ್ರಸಾರಾಂಗದ ಸಂಚಾಲಕ ಡಾ. ಆರ್.ಸಂತೋಷ್ ನಾಯ್ಕ, ಇಂಜಿನಿಯರಿಂಗ್ ವಿಭಾಗದ ಆರ್.ಶ್ರೀನಿವಾಸ್ ಮೂರ್ತಿ ಇನ್ನಿತರರು ಉಪಸ್ಥಿತರಿದ್ದರು.

ಸಿಎ ಫೌಂಡೇಶನ್‌ನಲ್ಲಿ ವಿದ್ಯಾರ್ಥಿಗಳ ಸಾಧನೆ



ಚೇತನಾ



ಸುಮನ್

ಮೈಸೂರು, ಫೆ.15– ಬೋಗಾದಿಯಲ್ಲಿರುವ ಎಸ್‌ವಿಜಿ ಸೆಂಟರ್ ಆಫ್ ಎಕ್ಸಲೆನ್ಸ್‌ನ ವಿದ್ಯಾರ್ಥಿಗಳಾದ ಚೇತನಾ ರೂಪ ಸಿಂಧೂರ ಮತ್ತು ಸುಮನ್ ಅವರು ತಮ್ಮ ಮೊದಲ ಪ್ರಯತ್ನದಲ್ಲಿ ಸಿಎ ಫೌಂಡೇಶನ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾರೆ. ಅವರ ಉತ್ತಮ ಸಾಧನೆಗಾಗಿ ಎಸ್‌ವಿಜಿ ಮ್ಯಾನೇಜ್‌ಮೆಂಟ್ ಮತ್ತು ಸಿಎ ಫೌಂಡೇಶನ್ ಸಿಬ್ಬಂದಿ ಅವರನ್ನು ಅಭಿನಂದಿಸಿದ್ದಾರೆ.



ಮೈಸೂರು ವಿಶ್ವವಿದ್ಯಾನಿಲಯದಿಂದ ಆಯೋಜಿಸಿದ್ದ 2023–24ನೇ ಶೈಕ್ಷಣಿಕ ಸಾಲಿನ ವಿವಿ ಮಟ್ಟದ ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಮೈಸೂರಿನ ಜೆಎಸ್‌ಎಸ್‌ಎಸ್ ಸಿಂಹ ಸುಬ್ಬಮಹಾಲಕ್ಷ್ಮಿ ಪ್ರಥಮ ದರ್ಜೆ ಕಾಲೇಜಿನ ಕೃತಿಕ, ಹರ್ಷವರ್ಧನ್, ತೇಜಸ್, ಭಾನುಪ್ರಕಾಶ್, ಲಿಖಿತ, ಪ್ರೇರಣ, ವಿಜಯಲಕ್ಷ್ಮಿ ಬಹುಮಾನ ಪಡೆದು ಮುಂಬರುವ 37ನೇ ದಕ್ಷಿಣ–ಪೂರ್ವ ವಲಯ ಯುವಜನೋತ್ಸವಕ್ಕೆ ಆಯ್ಕೆಯಾಗಿದ್ದಾರೆ.

ನಾಳೆ ಮೈಸೂರಲ್ಲಿ 'ಇಲ್ಯುಮಿನೇಟ್' 2ನೇ ಆವೃತ್ತಿ



ಸುದ್ದಿಗೋಷ್ಠಿಯಲ್ಲಿ ಹರ್ಷಿತ್ ದಿವಾಕರ್ ಮಾತನಾಡಿದರು.

ಮೈಸೂರು, ಫೆ.15(ಜಿಎ)–ಭಾರತದ ವಿಭಿನ್ನ ಆವಿಷ್ಕಾರ ಮತ್ತು ತಾಂತ್ರಿಕತೆಯ ಕುರಿತು ವಿಶೇಷ ಉಪನ್ಯಾಸ ನೀಡಲು ಎಲ್ ಅಂಡ್ ಟಿ ಟೆಕ್ನಾಲಜಿ ಸರ್ವಿಸಸ್ ಮತ್ತು ದಿ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಕಾಲೇಜಿನ ಸಹಯೋಗದಲ್ಲಿ 'ಇಲ್ಯುಮಿನೇಟ್' 2ನೇ ಆವೃತ್ತಿಯನ್ನು ಫೆ.17ರಂದು ಬೆಳಗ್ಗೆ 9.30ಕ್ಕೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಘಟಿಕೋತ್ಸವ ಭವನದಲ್ಲಿ ಆಯೋಜಿಸಲಾಗಿದೆ ಎಂದು ಎನ್‌ಐಇ ಕಾಲೇಜಿನ ತರಬೇತಿ ಮತ್ತು ಉದ್ಯೋಗ ಅಧಿಕಾರಿ ಹರ್ಷಿತ್ ದಿವಾಕರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಇಲ್ಯುಮಿನೇಟ್'ನಲ್ಲಿ ರಾಷ್ಟ್ರದ ವಿಜ್ಞಾನ ಮತ್ತು ಇಂಜಿನಿಯರಿಂಗ್ ಕ್ಷೇತ್ರದ ಬೆಳವಣಿಗೆಗಳ ಕುರಿತ ಸಾರ್ವಜನಿಕ ಉಪನ್ಯಾಸ ನೀಡಲಿದ್ದು, ಅಂದು ಬೆಳಗ್ಗೆ 10.30ಕ್ಕೆ ಏಥರ್ ಎನರ್ಜಿಯ ಹಿರಿಯ ಉಪಾಧ್ಯಕ್ಷ ಕೆ.ಎಸ್.ರಮೇಶ್, ಏಥರ್ ಎನರ್ಜಿ ಕಂಪನಿಯ ಎಲೆಕ್ಟ್ರಿಕ್ ವಹಿಕಲ್‌ನ ಡಿಸೈನ್ ವಿವರ, ಗುಣಗಳ ಕುರಿತು ಮಾತನಾಡಲಿದ್ದಾರೆ. ಲಾರ್ಸನ್ ಅಂಡ್ ಟುಬ್ರೊ ಕಂಪನಿಯ ಸಲಹಾ ತಜ್ಞ ಮುಖೇಶ್ ರಾವಲ್, ವಿಶ್ವದ ಅತಿ ಎತ್ತರದ ಪ್ರತಿಮೆ ಎಂಬ ಖ್ಯಾತಿ ಹೊಂದಿರುವ ಗುಜರಾತಿನ ಏಕತೆಯ ಪ್ರತಿಮೆಯ ವಿನ್ಯಾಸ ಮತ್ತು ನಿರ್ಮಾಣದ ಹಿಂದಿನ ಕುತೂಹಲಕಾರಿ ವಿಚಾರಗಳನ್ನು ತಿಳಿಸಲಿದ್ದಾರೆ ಎಂದರು.

ನಂತರ ಇಬ್ಬರ ಜೊತೆ ವಿದ್ಯಾರ್ಥಿಗಳು ಮುಕ್ತ ಸಂವಾದ ನಡೆಸಲು ಅವಕಾಶ ಕಲ್ಪಿಸಲಾಗಿದೆ. ಈ ಕಾರ್ಯಕ್ರಮ ಆಧುನಿಕ ಇಂಜಿನಿಯರಿಂಗ್ ಕ್ಷೇತ್ರ ಅಭಿವೃದ್ಧಿ ವಿಚಾರಗಳ ಕುರಿತು ಚರ್ಚೆ ನಡೆಯಲಿದೆ. ಜತೆಗೆ ಉದ್ಯಮ ವಲಯ ಮತ್ತು ಶೈಕ್ಷಣಿಕ ಕ್ಷೇತ್ರದ ಕುರಿತಾದ ಒಳನೋಟಗಳನ್ನು ನೀಡುವ ಗುರಿ ಹೊಂದಿದೆ. ಇದು ಜಾಗತಿಕವಾಗಿ ಇಂಜಿನಿಯರಿಂಗ್ ಕ್ಷೇತ್ರಕ್ಕೆ ಮಹತ್ತರ ಕೊಡುಗೆ ನೀಡಿರುವ ಪ್ರಮುಖ ತಂತ್ರಜ್ಞರು ತಮ್ಮ ತಾಂತ್ರಿಕ ಜ್ಞಾನ ಮತ್ತು ಅನುಭವವನ್ನು ಹಂಚಿಕೊಳ್ಳುವ ವೇದಿಕೆಯಾಗಿದೆ ಎಂದರು.

ಅವಧಿ ವಿಸ್ತರಣೆ

ಮೈಸೂರು: 2023–24ನೇ ಸಾಲಿನ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ವಾರ್ಷಿಕ ವರಮಾನ ರೂ. 2.5 ಲಕ್ಷದೊಳಗಿರುವ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯಗಳಿಗೆ ಹೊಸದಾಗಿ ಪ್ರವೇಶ ಪಡೆಯಲು www.sw.kar. nic.in ಮೂಲಕ ಅರ್ಜಿ ಸಲ್ಲಿಸಲು ಫೆ.20ರವರೆಗೆ ಅವಧಿ ವಿಸ್ತರಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ನಿಗದಿತ ಸಮಯದೊಳಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಿದ ನಂತರ ಅರ್ಜಿಯೊಂದಿಗೆ ಅಗತ್ಯ ದಾಖಲಾತಿಗಳನ್ನು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ಗ್ರೇಡ್–1 ರವರಿಗೆ ಸಲ್ಲಿಸಬೇಕು. ಮಾಹಿತಿಗಾಗಿ ದೂ.ಸಂ:0821–2520910 ಸಂಪರ್ಕಿಸಬಹುದು

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

16.2.2024 ಶುಕ್ರವಾರ, ಮಳೆ ನಕ್ಷತ್ರ: ಧನಿಷ್ಠ 6.2.2024ರಿಂದ 19.02.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ,
ಶುಕ್ಲ ಪಕ್ಷ, ತಿಥಿ: ಸಪ್ತಮಿ, ನಕ್ಷತ್ರ: ಭರಣಿ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಅರ್ಕಧಾಮ:** ಶ್ರೀ ಅರ್ಕ ಮಹಾ ಗಣಪತಿ ಪ್ರತಿಷ್ಠಾಪನೆ ಹಾಗೂ ಬ್ರಹ್ಮ ಕಲಶೋತ್ಸವ, ಬೆಳಗ್ಗೆ 8 ಗಂಟೆಗೆ ದ್ವಾದಶ ನಾರಿಕೇಳ ಗಣಯಾಗ, ಮ. 11.30ಕ್ಕೆ ಪೂರ್ಣಾಹುತಿ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 5.30ಕ್ಕೆ ಚಂಡಿಕಾ ಪಾರಾಯಣ, ಪೂಜೆ, ಮಹಾಮಂಗಳಾರತಿ, ಸ್ಥಳ: ಕಣಿಯನಹುಂಡಿ ಗೇಟ್.

■ **ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ, ವಿಜಯನಗರ ಯೋಗ ವಿದ್ಯಾರ್ಥಿ ಬಳಗ, ವಿಜಯನಗರ 1ನೇ ಹಂತದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ಪುಣ್ಯಕೋಟಿ ಸೇವಾ ಟ್ರಸ್ಟ್ :** ವಿಹಂಗಮ ಯೋಗ ಪರಿಚಯ ಕಾರ್ಯಕ್ರಮ, ಉದ್ಘಾಟನೆ : ವೇದಿಕೆ ಸದಸ್ಯ ಬಿ.ಜೆ. ವಿಜಯ್ ಕುಮಾರ್, ಉಪಸ್ಥಿತರು: ಶೈಲೇಶ್ ಚೌಹಾನ್, ಪುಣ್ಯಕೋಟಿ ಸೇವಾ ಟ್ರಸ್ಟ್ ಅಧ್ಯಕ್ಷ ಹನುಮಂತೇಶ್, ಸ್ಥಳ: ಯೋಗಾ ಮಂಟಪ, ಯೋಗನರಸಿಂಹಸ್ವಾಮಿ ದೇವಸ್ಥಾನ ಎದುರು, ಬೆಳಗ್ಗೆ 7ಕ್ಕೆ.

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್:** ಶ್ರೀ ಶ್ಯಾಮಲಾ ನವರಾತ್ರಿ ಮಹೋತ್ಸವ, ಬೆಳಗ್ಗೆ 8.30ಕ್ಕೆ ಪುಣ್ಯಾಹ, ನಾಂದಿ, ಗಣಪತಿ ಪೂಜಾ, ಮಹಾಸಂಕಲ್ಪ, ಕಲಶ ಸ್ಥಾಪನಾ, ಸಪ್ತಶತಿ ಪಾರಾಯಣ, ಶ್ರೀಚಕ್ರಾರ್ಚನೆ, ನವಾವರಣ ಪೂಜಾ, ಸಂಜೆ 5.30ಕ್ಕೆ ಶ್ರೀ ದ್ವಾದಶ ಸರಸ್ವತಿ ಹೋಮ, ಶ್ರೀ ಮಹಾಗಣಪತಿ, ಶ್ರೀ ಬಾಲಾ ತ್ರಿಪುರಸುಂದರಿ, ಶ್ರೀ ತಾರಾ, ಶ್ರೀ ತಾರಿಣಿ, ಶ್ರೀನೀಲಸರಸ್ವತಿ, ಶ್ರೀ ವಿದ್ಯಾರಾಜ್ಞಿ, ಶ್ರೀಘಟ ಸರಸ್ವತಿ, ಶ್ರೀ ಚಿಂತಾಮಣಿ ಸರಸ್ವತಿ, ಶ್ರೀ ಅಂತರಿಕ್ಷ ಸರಸ್ವತಿ, ಶ್ರೀ ವಾಗ್ವಾದಿನಿ ಸರಸ್ವತಿ, ಶ್ರೀ ಮಹಾ ಸರಸ್ವತಿ, ಶ್ರೀ ಪಾರಿಜಾತ ಸರಸ್ವತಿ, ಶ್ರೀ ಚಿತ್ರೇಶ್ವರಿ ಸರಸ್ವತಿ, ಶ್ರೀ ಕುಲಜ ಸರಸ್ವತಿ, ಶ್ರೀ ಕೀರ್ತೇಶ್ವರಿ ಸರಸ್ವತಿ ಮೂಲಮಂತ್ರ ಹೋಮ, ಪೂರ್ಣಾಹುತಿ, ಪ್ರಸಾದ ವಿನಿಯೋಗ, ಸ್ಥಳ: ತ್ರಯೀನ್ಯಾಸ್ ಫೌಂಡೇಷನ್ ಆವರಣ, ಜಯಲಕ್ಷ್ಮಿಪುರಂ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಉಚಿತ ಮೂಳೆ ಖನಿಜ ಸಾಂದ್ರತಾ ಪರೀಕ್ಷಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9.30 ರಿಂದ.

■ **ರಾಮಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ವ್ಯವಸ್ಥಾಪಕರು :** 'ಮೈಸೂರು ಫ್ಯಾಷನ್ ವೀಕ್' ಏಳನೇ ಆವೃತ್ತಿ, ಉಪಸ್ಥಿತರು : ನಟಿ ಮಧುರಿಮಾ ತುಳಿ, ನಟ ದಿಗಂತ್ ಮಂಚಾಲೆ, ಐಂದ್ರಿತಾ ರೈ, ರಮೇಶ್ ಡೆಂಬ್ಲಾ, ಪಂಕಜ್ ಸೋನಿ, ಚೈತನ್ಯ ರಾವ್, ಮೇಘಾ ಕಪೂರ್, ರೇಷ್ಮಾ ಕುನ್ಹಿ, ಕಿಂಗ್ ಶುಕ್ ಭದುರಿ, ನಜೀಮ್ ಅಲಿ ಖಾನ್, ಸಂತೋಷ್‌ಕುಮಾರ್, ಡ್ರೀಮ್ ಝೋನ್ ಎಜುಕೇಶನ್, ರಾಣಿ ಪಿಂಕ್, ರೆಹಾನ್ ಶಾ ಸೇರಿದಂತೆ ಪ್ರತಿಭಾವಂತ ವಿನ್ಯಾಸಕರು, ಸ್ಥಳ: ಮೈಸೂರು ಯೂನಿಯನ್ ಆವರಣ, ಸಂಜೆ 4 ರಿಂದ.

■ **ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘ:** ದತ್ತಿ ಕಾರ್ಯಕ್ರಮ, ವಚನ ಸಾಹಿತ್ಯ–ಸಂವಹನ ಹಾಗೂ ಸಂವಾದ, ಉದ್ಘಾಟನೆ: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಜೆಎಸ್‌ಎಸ್ ಮಹಿಳಾ ಕಾಲೇಜು ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥರಾದ ಡಾ.ಸುಕನ್ಯಾ ಮಲ್ಲೋಳಿ ಅವರಿಂದ ವಚನ ಸಾಹಿತ್ಯ ಮತ್ತು ಸಂವಹನ ಕುರಿತು ಉಪನ್ಯಾಸ, ಸಂವಾದ: ಆಹ್ವಾನಿತ ಶ್ರೋತೃಗಳ ಜೊತೆ, ಮುಖ್ಯ ಅತಿಥಿಗಳು: ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಅಧ್ಯಕ್ಷತೆ: ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ ಅಧ್ಯಕ್ಷ ಮ.ಗು.ಸದಾನಂದಯ್ಯ, ಸ್ಥಳ: ಪತ್ರಕರ್ತರ ಭವನ, ಅಗ್ರಹಾರ, ಬೆಳಗ್ಗೆ 11ಕ್ಕೆ.

■ **ಕನ್ನಡ ಮತ್ತು ಸಂಸ್ಕೃತಿ ಇಲಾಖೆ:** ಶ್ರೀ ಸವಿತಾ ಮಹರ್ಷಿ ಜಯಂತಿ ಆಚರಣೆ, ಉದ್ಘಾಟನೆ: ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಮುಖ್ಯ ಅತಿಥಿಗಳು: ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ್‌ಪ್ರಸಾದ್, ಸುಮಲತಾ ಅಂಬರೀಷ್, ಸಚಿವ ಕೆ.ವೆಂಕಟೇಶ್, ಶಾಸಕರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ಅನಿಲ್ ಚಿಕ್ಕಮಾದು, ಟಿ.ಎಸ್.ಶ್ರೀವತ್ಸ, ವಿಧಾನಪರಿಷತ್ ಸದಸ್ಯರಾದ ಎಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮರಿತಿಬ್ಬೇಗೌಡ, ಲೇಖಕ ಮೈನ ಲೋಕೇಶ್, ಅಧ್ಯಕ್ಷತೆ: ಶಾಸಕ ಕೆ.ಹರೀಶ್‌ಗೌಡ, ಸ್ಥಳ: ಕಲಾಮಂದಿರದ ಕಿರು ರಂಗಮಂದಿರ, ಬೆಳಗ್ಗೆ 11.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿದ್ಯಾರ್ಥಿಗಳ ಸಂಘ :** ಸಂಪನ್ಮೂಲ ವ್ಯಕ್ತಿ ಡಾ. ಎಂ. ಡ್ಯಾನಿಯಲ್ ಅವರಿಂದ ಶಿಕ್ಷಣ ಮತ್ತು ನೈತಿಕತೆ ಕುರಿತು ವಿಶೇಷ ಉಪನ್ಯಾಸ, ಅಧ್ಯಕ್ಷತೆ : ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಅಧ್ಯಕ್ಷ ಪ್ರೊ. ಎಂ. ಚಂದ್ರಶೇಖರ, ಸ್ಥಳ: ಡಾ. ಎಸ್.ಆರ್. ರಂಗನಾಥನ್ ಸಭಾಂಗಣ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ, ಮ. 3.30ಕ್ಕೆ

■ **ಅದಮ್ಯ ರಂಗ ಶಾಲೆ, ಸ್ಪಂದನಾ ಸಾಂಸ್ಕೃತಿಕ ಪರಿಷತ್ತು ಹಾಗೂ ದಕ್ಷ ಪದವಿಪೂರ್ವ ಕಾಲೇಜು :** ಪಿಯುಸಿ ಪಠ್ಯಾಧಾರಿತ ನಾಟಕ ಪ್ರದರ್ಶನ'ದ ಸಮಾರೋಪ ಸಮಾರಂಭ, ಚಾಲನೆ : ಮಂಗಳೂರು ವಲಯದ ಆಂತರಿಕ ವಿಭಾಗದ ಪೊಲೀಸ್ ಅಧೀಕ್ಷಕ ಡಾ.ಎ.ಎನ್.ಪ್ರಕಾಶ್‌ಗೌಡ, ಅಧ್ಯಕ್ಷತೆ : ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕಿ ಎಂ.ಕೆ.ಸವಿತಾ, ಸಮಾರೋಪ ನುಡಿ : ಸ್ಪಂದನಾ ಸಾಂಸ್ಕೃತಿಕ ಪರಿಷತ್ತಿನ ಸಂಸ್ಥಾಪಕ ಅಧ್ಯಕ್ಷ ಟಿ.ಸತೀಶ್ ಜವರೇಗೌಡ, ಮುಖ್ಯ ಅತಿಥಿಗಳು : ದಕ್ಷ ಪಿಯು ಕಾಲೇಜಿನ ಅಧ್ಯಕ್ಷ ಡಾ.ಬಿ. ಜಯಚಂದ್ರ ರಾಜು, ಪಿಯು ಕಾಲೇಜಿನ ಪ್ರಾಂಶುಪಾಲ ರತ್ನಾಕರ್ ಶ್ಯಾನಭೋಗ್, ಖ್ಯಾತ ಕಥೆಗಾರ ಪಿ. ಲಂಕೇಶ್ 'ಮುಟ್ಟಿಸಿಕೊಂಡವನು' ಹಾಗೂ ಡಾ.ಹೆಚ್. ನಾಗವೇಣಿ ಅವರ 'ಧಣಿಗಳ ಬೆಳ್ಳಿಲೋಟ' ಕಥೆಗಳ ರಂಗ ರೂಪ ಪ್ರದರ್ಶನ, ಸ್ಥಳ: ದಕ್ಷ ಪಿಯು ಕಾಲೇಜು ಸಭಾಂಗಣ, ಹೂಟಗಳ್ಳಿ, ಸಂಜೆ 5.30ಕ್ಕೆ.

■ **ಎನ್.ಆರ್.ಮೊಹಲ್ಲಾ ಸಂಗೀತ ಸಭಾ ಚಾರಿಟೆಬಲ್ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ:** ಶ್ರೀ ತ್ಯಾಗರಾಜರ ಹಾಗೂ ಶ್ರೀ ಪುರಂದರದಾಸರ ಆರಾಧನಾ ಮಹೋತ್ಸವ, ವಿದುಷಿ ಕೃತಿ ವಿಠಲ್ ಅವರಿಂದ ಗಾಯನ, ವಿದ್ವಾನ್ ಕೇಶವ್‌ಮೋಹನ್–ಪಿಟೀಲು, ವಿದ್ವಾನ್ ಹೆಚ್.ಎಲ್.ಶಿವಶಂಕರಸ್ವಾಮಿ–ಮೃದಂಗ, ವಿದ್ವಾನ್ ಶರತ್ ಕೌಶಿಕ–ಘಟಂ, ಸ್ಥಳ: ಶ್ರೀ ಪ್ರಸನ್ನ ಗಣಪತಿ ದೇವಸ್ಥಾನ, ಎನ್.ಆರ್.ಮೊಹಲ್ಲಾ, ಸಂಜೆ 6.30ಕ್ಕೆ.

■ **ಸಂಚಲನ ಮೈಸೂರು, ಪ್ರವಾಸೋದ್ಯಮ ಇಲಾಖೆ (ಬೆಂಗಳೂರು), ಡ್ರೀಮ್ ಬಜ್ಡ್ ಫೌಂಡೇಷನ್, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ (ಬೆಂಗಳೂರು):** ಸಂಚಲನ ಮಕ್ಕಳ ನಾಟಕೋತ್ಸವ, ಜಾನಪದ ಉತ್ಸವದ ಸಮಾರೋಪ ಸಮಾರಂಭ, ಉಪಸ್ಥಿತರು: ಹಿರಿಯ ರಂಗಕರ್ಮಿ ರಾಜಶೇಖರ ಕದಂಬ, ಸಾರ್ವಜನಿಕ ಶಿಕ್ಷಣ ಇಲಾಖೆ ನಿವೃತ್ತ ಉಪನಿರ್ದೇಶಕಿ ಮಂಜುಳ, ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಹೆಚ್.ಕೆ.ಪಾಂಡು, ಕನ್ನಡ–ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಡ್ರೀಮ್ ಬಜ್ಡ್ ಫೌಂಡೇಷನ್ ಉಪಾಧ್ಯಕ್ಷ ಸುರೇಶ್, ಸಂಚಲನ ಮಕ್ಕಳ ನಾಟಕೋತ್ಸವ ಸಂಯೋಜಕ ತ್ಯಾಗರಾಜು ದೇವರಹಳ್ಳಿ, ಪ್ರಾಸ್ತಾವಿಕ ನುಡಿ: ಸಂಚಲನ ಅಧ್ಯಕ್ಷ ದೀಪಕ್ ಮೈಸೂರು, ಶಕ್ತಿಧಾಮ ವಿದ್ಯಾಶಾಲೆಯ ಮಕ್ಕಳಿಂದ ಪುಷ್ಪರಾಣಿ ನಾಟಕ ಪ್ರದರ್ಶನ, ರಚನೆ: ಡಾ. ಚಂದ್ರಶೇಖರ ಕಂಬಾರ, ಸಹ ನಿರ್ದೇಶನ: ಭಾವನ, ನಿರ್ದೇಶನ: ದೀಪಕ್ ಮೈಸೂರು, ಸ್ಥಳ: ಕಿರುರಂಗಮಂದಿರ, ಕಲಾಮಂದಿರ ಆವರಣ, ಸಂಜೆ 6.30ಕ್ಕೆ

■ **ಧಾರ್ಮಿಕ ದತ್ತಿ ಇಲಾಖೆ :** ಮೈಸೂರು ಅರಮನೆ ಕೋಟೆ ಆವರಣದಲ್ಲಿರುವ ಶ್ರೀ ತ್ರಿಣೇಶ್ವರಸ್ವಾಮಿಯವರ ಬ್ರಹ್ಮೋತ್ಸವ, ರಾತ್ರಿ 7ಕ್ಕೆ ಮೂಷಕ ವಾಹನೋತ್ಸವ ನಂತರ ಅಂಕುರಾರ್ಪಣ, ಸ್ಥಳ: ಶ್ರೀ ತ್ರಿಣೇಶ್ವರಸ್ವಾಮಿ ದೇವಸ್ಥಾನ, ಅರಮನೆ ಆವರಣ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ.ಕೆ.ಸಿ.ಶಿವಪ್ಪ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಬಣ್ಣದ ಬಾನಾಡಿಗಳು–ಬಾನುಲಿ ಸರಣಿ, ರಚನೆ–ಲೀಲಾ ಅಪ್ಪಾಜಿ, ಪ್ರಸ್ತುತಿ–ಜಿ.ಶಾಂತಕುಮಾರ್, 6.40 KSOU ಮುಕ್ತವಾಣಿ–ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗವಹಿಸುತ್ತಾರೆ: ಪ್ರೊ.ಕೆ.ಬಿ. ಪ್ರವೀಣ್, ಕುಲಸಚಿವರು. ಪ್ರಸ್ತುತಿ–ಎನ್.ಕೇಶವಮೂರ್ತಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 9.00 ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 10.00 ಕೇಶವಚಂದ್ರ–ವೇಣುವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 12.45 ಕಾದಂಬರಿ ವಿಹಾರ–ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ ಎಸ್.ಎಸ್., 1.20 ಭಾವಗೀತೆ–ಆರ್.ವಿ.ಅನುಪಮಾ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಎಂ.ನಾರಾಯಣ ಶರ್ಮ–ಹಾಡುಗಾರಿಕೆ, 4.00 ಮಹಿಳಾರಂಗ–ಸಖೀ ಸಾಹಿತ್ಯ, ಭಾಗವಹಿಸುವವರು–ಕವಯಿತ್ರಿ ಮಾಲತಿ ರಾಮಕೃಷ್ಣ, ಪ್ರಸ್ತುತಿ–ಅಬ್ದುಲ್ ರಶೀದ್, 4.30 ವೃತ್ತಿ ಮಾರ್ಗದರ್ಶನ–ಸಮಾಜಶಾಸ್ತ್ರ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ.ಸಂತೋಷ್‌ನಾಯಕ್ ಆರ್. ಅವರೊಂದಿಗೆ ಮಾತುಕತೆ, 5.45 KSOU ಮುಕ್ತವಾಣಿ–ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ, 6.50ಕೃಷಿರಂಗ– ಕೃಷಿಲೋಕ, ಪ್ರಸುತಿ–ಆರ್.ಲೋಕೇಶ್ವರಿ, 8.00 ರಸಮಂಜರಿ–ಕಾರ್ಯಕ್ರಮ ವೈವಿಧ್ಯ, 9.30 ಮಲ್ಲಾಡಿ ಸೂರಿ ಬಾಬು –ಹಾಡುಗಾರಿಕೆ, 10.00 ಹಳ್ಳಿ ಹಾಡು, ಪ್ರಸ್ತುತಿ–ಡಾ.ಮೈಸೂರು ಉಮೇಶ್, 10.30 ಸವಿನೆನಪು

ಅಪಾಯಕಾರಿ ರಸ್ತೆ ವಿಭಜಕಕ್ಕೆ ಸೂಚನಾ ಫಲಕ ಅಳವಡಿಕೆ

'ಮೈಸೂರು ಮಿತ್ರ' ವರದಿ ಫಲಶ್ರುತಿ



ಬೋಗಾದಿ ರಸ್ತೆ, ಕುಕ್ಕರಹಳ್ಳಿ ಕೆರೆ ಜಂಕ್ಷನ್ ಬಳಿಯ ಕಾಂಕ್ರೀಟ್ ವಿಭಜಕಕ್ಕೆ ಕೃಷ್ಣರಾಜ ಸಂಚಾರ ಠಾಣೆ ಇನ್ಸ್‌ಪೆಕ್ಟರ್ ಮೊಹಮ್ಮದ್ ಇರ್ಷಾದ್, ಎಸ್‌ಐ ಹಾಗೂ ಸಿಬ್ಬಂದಿ ಪ್ರತಿಫಲಿಸುವ ಸೂಚನಾ ಫಲಕ ಅಳವಡಿಸಿದರು.

ಮೈಸೂರು, ಫೆ.15(ಎಸ್‌ಬಿಡಿ)– ಅಪಾಯಕಾರಿಯಾಗಿ ಪರಿಣಮಿಸಿದ್ದ ಬೋಗಾದಿ ರಸ್ತೆಯ ಕಾಂಕ್ರೀಟ್ ವಿಭಜಕಕ್ಕೆ ಕೃಷ್ಣರಾಜ ಸಂಚಾರ ಠಾಣೆ ಪೊಲೀಸರು ಗುರುವಾರ ರಾತ್ರಿ ಪ್ರತಿಫಲಿಸುವ ಸೂಚನಾ ಫಲಕ ಅಳವಡಿಸಿದ್ದಾರೆ.

ಬೋಗಾದಿ ರಸ್ತೆ ಕುಕ್ಕರಹಳ್ಳಿ ಕೆರೆ ಜಂಕ್ಷನ್‌ನ ಡಾ. ಎಂ.ಬಿ. ಪದ್ಮಾ ವೃತ್ತದ ಬಳಿ ಅಡ್ಡಾದಿಡ್ಡಿ ವಾಹನ ಸಂಚಾರ ತಪ್ಪಿಸುವ ಉದ್ದೇಶದಿಂದ ಕಾಂಕ್ರೀಟ್ ವಿಭಜಕವನ್ನು ಅಳವಡಿಸಿದ್ದರು. ಆದರೆ ಅದರ ಬಳಿ ಯಾವುದೇ ರೀತಿಯ ಪ್ರತಿಫಲಿಸುವ ಉಪಕರಣ ಅಳವಡಿಸದ ಕಾರಣ ಅಪಾಯಕಾರಿ ಸ್ಥಳವಾಗಿ ಪರಿಣಮಿಸಿತ್ತು.

ಇದೇ ಕಾರಣಕ್ಕೆ ಫೆ.13ರಂದು ರಾತ್ರಿ 9.30ರ ವೇಳೆಗೆ ಕಾರೊಂದು ಕಾಂಕ್ರೀಟ್ ವಿಭಜಕಕ್ಕೆ ಡಿಕ್ಕಿ ಹೊಡೆದು, ವಾಹನದ ಮುಂಭಾಗ ಸಂಪೂರ್ಣವಾಗಿ ಜಖಂ ಆಗಿತ್ತಲ್ಲದೆ, ಚಾಲಕನ ತಲೆಗೂ ಪೆಟ್ಟು ಬಿದ್ದು ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಬಗ್ಗೆ 'ಮೈಸೂರು ಮಿತ್ರ' ಫೆ.15ರ ಸಂಚಿಕೆಯಲ್ಲಿ 'ಅಪಾಯಕಾರಿಯಾಗಿ ಪರಿಣಮಿಸಿರುವ ಬೋಗಾದಿ ರಸ್ತೆಯ ಕಾಂಕ್ರೀಟ್ ವಿಭಜಕ' ಶೀರ್ಷಿಕೆಯಲ್ಲಿ ಸಚಿತ್ರ ವರದಿ ಪ್ರಕಟಿಸಲಾಗಿತ್ತು. ಇದರಿಂದ ಎಚ್ಚೆತ್ತ ಸಂಚಾರ ವಿಭಾಗದ ಪೊಲೀಸರು, ಗುರುವಾರ ರಾತ್ರಿ ಪ್ರತಿಫಲಿಸುವ ಸೂಚನಾ ಫಲಕವನ್ನು ಅಳವಡಿಸಿದ್ದಾರೆ.

ಮೈಸೂರು ಫ್ಯಾಷನ್ ವೀಕ್ 7ನೇ ಆವೃತ್ತಿಗೆ ಸಂಭ್ರಮದ ಚಾಲನೆ



ಮೈಸೂರು ಫ್ಯಾಷನ್ ವೀಕ್ 7ನೇ ಆವೃತ್ತಿಯಲ್ಲಿ ಹೆಜ್ಜೆ ಹಾಕಿದ ಸುಂದರಿಯರು.

ಮೈಸೂರು, ಫೆ.15(ಎಂಕೆ)– ಕಣ್ಮನ ಸೆಳೆಯುವ ವಸ್ತ್ರ ವಿನ್ಯಾಸಕ್ಕೆ ಜೀವಕಳೆ ತುಂಬಿದ ಸುರ–ಸುಂದರಿಯರ ಬೆಕ್ಕಿನ ನಡಿಗೆಯೊಂದಿಗೆ 'ಮೈಸೂರು ಫ್ಯಾಷನ್ ವೀಕ್' 7ನೇ ಆವೃತ್ತಿಗೆ ಭವ್ಯ ಚಾಲನೆ ದೊರೆಯಿತು.

ಖ್ಯಾತ ವಸ್ತ್ರವಿನ್ಯಾಸಕಿ ಜಯಂತಿ ಬಲ್ಲಾಳ್ ನೇತೃತ್ವದಲ್ಲಿ ಮೈಸೂರಿನ ಕೈಗಾರಿಕಾ ಪ್ರದೇಶದಲ್ಲಿರುವ ಮೈಸೂರು ಯೂನಿಯನ್ ಆವರಣದಲ್ಲಿ ಆಯೋಜಿಸಿರುವ ಎರಡು ದಿನಗಳ ದಕ್ಷಿಣ ಭಾರತ ಅತೀ ದೊಡ್ಡ ಫ್ಯಾಷನ್ ಶೋಗೆ ಗುರುವಾರ ವರ್ಣರಂಜಿತ ಚಾಲನೆ ದೊರೆಯಿತು.

ರಮೇಶ್ ಡೆಂಬ್ಲಾ, ಪಂಕಜ್ ಸೋನಿ, ಚೈತನ್ಯ ರಾವ್, ಮೇಘಾ ಕಪೂರ್, ರೇಷ್ಮಾ ಕುನ್ಹಿ, ಕಿಂಗ್‌ಶುಕ್ ಭದುರಿ, ನಜೀಮ್ ಅಲಿ ಖಾನ್, ಸಂತೋಷ್ ಕುಮಾರ್, ರಾಣಿ ಪಿಂಕ್, ರೆಹಾನ್ ಶಾ ಸೇರಿದಂತೆ 13 ಮಂದಿ ಪ್ರತಿಭಾನ್ವಿತ ವಸ್ತ್ರವಿನ್ಯಾಸಕರು, 18 ಮಂದಿ ಮೇಕಪ್ ಕಲಾವಿದರ ಕೈ ಚಳಕದಲ್ಲಿ ಶಿಂಗಾರಗೊಂಡು ಹೆಜ್ಜೆ ಹಾಕಿದ 50ಕ್ಕೂ ಹೆಚ್ಚು ಸುಂದರಿಯರು ನೋಡುಗರ ಎದೆಯಲ್ಲಿ ಮಿಂಚು ಹರಿಸಿದರು.

ನಟಿ ಮಧುರಿಮಾ ತುಳಿ, ನಟ ದಿಗಂತ್ ಮೊದಲ ದಿನದ ಫ್ಯಾಷನ್ ಶೋನ ವಿಶೇಷ ಆಕರ್ಷಣೆಯಾಗಿದ್ದರು. ಆರಂಭದಲ್ಲಿ ಕಪ್ಪು ಬಣ್ಣದ ವಸ್ತ್ರವಿನ್ಯಾಸದೊಂದಿಗೆ ಪ್ರೇಕ್ಷಕರತ್ತ ಕೈ, ಕಿರುನಗೆ ಚೆಲ್ಲಿದ ಬೆಡಗಿರುವ ಶೃಂಗಾರ ಪ್ರಿಯರ ಹೃದಯ ಗೆದ್ದರು. ಮಾಡ್ರನ್ ಡಿಸೈನ್ ವಸ್ತ್ರವಿನ್ಯಾಸದೊಂದಿಗೆ ಸರತಿ ಸಾಲಿನಲ್ಲಿ ಹೆಜ್ಜೆ ಹಾಕಿದ ಬೆಡಗಿರ ಬೆಕ್ಕಿನ ನಡಿಗೆ, ನಡಿಗೆಗೆ ಅನುಗುಣವಾಗಿ ಹಿನ್ನಲೆ ಸಂಗೀತ, ಬೆಳಕಿನ ವರ್ಣ ಚಿತ್ತಾರದಿಂದ ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿ ಫ್ಯಾಷನ್ ಲೋಕ ಸೃಷ್ಟಿಯಾಗಿತ್ತು.

ಇಂದು ಬ್ರಾಂಡ್ ಮೈಸೂರು ಪರಿಕಲ್ಪನೆ: ಬಾಲಿವುಡ್ ನಟಿ ನಿವ್ರುತ್ ಕೌರ್, ಬ್ರಾಂಡ್ ಮೈಸೂರು ಲೋಗೋದಲ್ಲಿರುವ ಅಂಶಗಳನ್ನು ಇಟ್ಟುಕೊಂಡು ಡಿಸೈನ್ ಮಾಡಿರುವ ವಸ್ತ್ರವನ್ನು ಧರಿಸಿಕೊಂಡು ವಾಕ್ ಮಾಡಲಿದ್ದಾರೆ. ಅವರೊಂದಿಗೆ ಸಾಂಪ್ರದಾಯಿಕ ಉಡುಗೆಯಲ್ಲಿ ಸುಂದರಿಯರು ಹೆಜ್ಜೆ ಹಾಕಲಿದ್ದಾರೆ.

ಮುಂಬರುವ ಲೋಕಸಭಾ ಸಾರ್ವತ್ರಿಕ ಚುನಾವಣೆಗೆ

ಮೈಲ್ಯಾಕ್‌ನಿಂದ ದಾಖಲೆಯ 26.55 ಲಕ್ಷ ಬಾಟಲ್ ಅಳಿಸಲಾಗದ ಶಾಯಿ ಪೂರೈಕೆ

ಮೈಸೂರು, ಫೆ.15(ಆರ್‌ಕೆ)– ಮುಂಬರುವ ಲೋಕಸಭಾ ಸಾರ್ವತ್ರಿಕ ಚುನಾವಣೆಗೆ ಮೈಸೂರು ಪೇಂಟ್ಸ್ ಅಂಡ್ ವಾರ್ನಿಷ್ ಲಿಮಿಟೆಡ್ (ಮೈಲ್ಯಾಕ್) ನಿಂದ ಈ ಬಾರಿ 26.55 ಲಕ್ಷ ಅಳಿಸಲಾಗದ ಶಾಯಿ ಬಾಟಲುಗಳು ಪೂರೈಕೆಯಾಗುತ್ತಿವೆ.

ಮೈಲ್ಯಾಕ್‌ನ ಅಳಿಸಲಾಗದ ಶಾಯಿ (ಇಂಡೆಲಿಬಲ್ ಇಂಕ್)ಗೆ ದೇಶವಲ್ಲದೇ ವಿಶ್ವದ ಹಲವು ರಾಷ್ಟ್ರಗಳಿಂದ ಭಾರೀ ಬೇಡಿಕೆ ಇದೆ. ಪ್ರಜಾಪ್ರಭುತ್ವ ವ್ಯವಸ್ಥೆಯ ಪ್ರಮುಖ ಪ್ರಕ್ರಿಯೆ ಚುನಾವಣಾ ಪದ್ಧತಿಯಲ್ಲಿ ತಮ್ಮ ಹಕ್ಕು ಚಲಾಯಿಸುವ ಪ್ರಜೆಗಳ ಬೆರಳಿಗೆ ಈ ಶಾಯಿ ಹಾಕಿ ಮತದಾನದ ಪಾವಿತ್ರ್ಯತೆ ಕಾಪಾಡಿ ಕೊಳ್ಳುವ ವ್ಯವಸ್ಥೆ ಇರುವ ಕಾರಣ ಮತದಾನ ಮಾಡಿದ್ದಕ್ಕೆ ಪುರಾವೆಯಾಗಿ ಬಳಸುತ್ತಿರುವ ಈ ಶಾಯಿ ಮೈಸೂರಲ್ಲಿ ಮಾತ್ರ ತಯಾರಾಗುತ್ತಿರುವುದು ಹೆಮ್ಮೆಯ ವಿಷಯ.

ಸಾರ್ವಜನಿಕ ಸ್ವಾಮ್ಯದ ಮೈಲ್ಯಾಕ್‌ನಿಂದ ತಯಾರಾಗುತ್ತಿರುವ ಅಳಿಸಲಾರದ ಶಾಯಿಗೆ 2024ರ ಲೋಕಸಭಾ ಸಾರ್ವತ್ರಿಕ ಚುನಾವಣೆಗೆ 10 ಎಂಎಲ್ ಪ್ರಮಾಣದ 26.55 ಲಕ್ಷ ಬಾಟಲ್ ಇಂಕ್ ಅನ್ನು ಪೂರೈಸುವಂತೆ ಭಾರತ ಚುನಾವಣಾ ಆಯೋಗ (ಇಸಿಐ)ದಿಂದ ಬೇಡಿಕೆ ಬಂದಿದೆ.

ಮಾರ್ಚ್ 15ರೊಳಗಾಗಿ ದೇಶದ ಎಲ್ಲಾ ರಾಜ್ಯಗಳ ಚುನಾವಣಾ ಆಯುಕ್ತರ ಕಚೇರಿಗಳ ಬೇಡಿಕೆ ಪ್ರಮಾಣದಷ್ಟು ಶಾಯಿ ಬಾಟಲ್ ಪೂರೈಸುವಂತೆ ಲಿಖಿತ ಆದೇಶ ನೀಡಿದ್ದ ಹಿನ್ನೆಲೆಯಲ್ಲಿ ಈಗಾ ಗಲೇ ಮೈಸೂರು ಪೇಂಟ್ಸ್ ಅಂಡ್ ವಾರ್ನಿಷ್ ಲಿಮಿಟೆಡ್ ಅಧಿಕಾರಿಗಳು ದೂರದ ಉತ್ತರ ಪ್ರದೇಶ, ಪಶ್ಚಿಮ ಬಂಗಾಳ ಸೇರಿದಂತೆ ಉತ್ತರ ಭಾರತದ ಬಹುತೇಕ ರಾಜ್ಯಗಳಿಗೆ ಇಂಕ್ ಬಾಟಲುಗಳನ್ನು ಈಗಾಗಲೇ ಪೂರೈಸಿದ್ದಾರೆ.

10 ಎಂಎಲ್ ಬಾಟಲಿಯಿಂದ 700 ಮಂದಿ ಮತದಾರರ ಬೆರಳಿಗೆ ಶಾಯಿಯ ಗುರುತು ಹಾಕಬಹುದಾಗಿದೆ. ಭಾರತ ಚುನಾವಣಾ ಆಯೋಗವು 2023ರ ಡಿಸೆಂಬರ್ ತಿಂಗಳಲ್ಲಿ ಬೇಡಿಕೆ ಆರ್ಡರ್ ನೀಡಿದ್ದ 26.55 ಲಕ್ಷ ಬಾಟಲ್‌ಗಳಿಂದ ಕಾರ್ಖಾನೆಗೆ ಸುಮಾರು 55 ಕೋಟಿ ರೂ. ಆದಾಯ ಬಂದಿದೆ. ಮೈಸೂರಿನ ಬನ್ನಿಮಂಟಪದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು 1937ರಲ್ಲಿ ಸ್ಥಾಪಿಸಿದ್ದ ಮೈಲ್ಯಾಕ್, 1947ರಲ್ಲಿ ಮೈಸೂರು ಸರ್ಕಾರದ ಸ್ವಾಧೀನಕ್ಕೆ ಬಂದಿತಲ್ಲದೆ, ಮೈಸೂರು ಲ್ಯಾಕ್ ಅಂಡ್ ಪೇಂಟ್ಸ್ ಲಿಮಿಟೆಡ್ ಎಂದು ಮರು ನಾಮಕರಣಗೊಂಡಿತ್ತು. 1989ರಲ್ಲಿ ವಾರ್ನಿಷ್ ಉತ್ಪಾದಿಸಲು ಆರಂಭಿಸಿದ್ದರಿಂದ ಅದಕ್ಕೆ ಮೈಸೂರು ಪೇಂಟ್ಸ್ ಅಂಡ್ ವಾರ್ನಿಷ್ ಲಿಮಿಟೆಡ್ ಎಂದು ಹೆಸರಿಸಲಾಯಿತು. ವರ್ಷಗಳು ಉರುಳಿದಂತೆ ಈ ಕಾರ್ಖಾನೆಯಲ್ಲಿ ಅಳಿಸಲಾಗದ ಶಾಯಿ ತಯಾರಿಕೆ ಆರಂಭಿಸಲಾಯಿತು.



ಮೈಸೂರು ಪೇಂಟ್ಸ್ ಅಂಡ್ ವಾರ್ನಿಷ್ ಲಿಮಿಟೆಡ್ (ಮೈಲ್ಯಾಕ್) ಮಾರ್ಕೆಟಿಂಗ್ ಮ್ಯಾನೇಜರ್ ಕೆ.ಎ.ಅಶ್ವಥ್ ಅಪ್ಪಣ್ಣ (ಕುಳಿತಿರುವವರು) ಈಗಾಗಲೇ ಸಿದ್ಧಪಡಿಸಲಾಗಿರುವ ಅಳಿಸಲಾಗದ ಶಾಯಿ ಬಾಟಲಿ ಪ್ರದರ್ಶಿಸಿದರು. ಕಾರ್ಖಾನೆ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ಚಿತ್ರದಲ್ಲಿ ಕಾಣಬಹುದು.

ಮನೆ ಅಲಂಕಾರಿಕ ಪೇಂಟ್ ಉತ್ಪಾದನೆಗೂ ಸಿದ್ಧತೆ

ಮೈಸೂರು,ಫೆ15(ಆರ್‌ಕೆ)– ಕಾರ್ಖಾನೆ, ವಾಹನಗಳು, ಸರ್ಕಾರಿ ಕಟ್ಟಡಗಳ ಬಣ್ಣಕ್ಕಷ್ಟೇ ಸೀಮಿತವಾಗಿದ್ದ ಮೈಸೂರು ಪೇಂಟ್ಸ್ ಅಂಡ್ ವಾರ್ನಿಷ್ ಲಿಮಿಟೆಡ್(MPVL) ಕಾರ್ಖಾನೆಯು ಮುಂದೆ ವೈವಿಧ್ಯಮಯ ಪೇಂಟ್ಸ್ ತಯಾರಿಸಲು ಮುಂದಾಗಿದೆ. ಖಾಸಗಿ ವಸತಿ ಗೃಹ, ಡೆಕೊರೇಷನ್ ಪೇಂಟ್ ತಯಾರಿಸಲು ಸಿದ್ಧತೆ ಮಾಡಲಾಗುತ್ತಿದ್ದು, ಕಾರ್ಖಾನೆಯ ಕಾರ್ಯವೈಖರಿ ವ್ಯಾಪ್ತಿ ವಿಸ್ತರಿಸಲು ಚಿಂತನೆ ಮಾಡುತ್ತಿದ್ದೇವೆ ಎಂದು ಎಂಪಿವಿಎಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಮೊಹಮದ್ ಇರ್ಫಾನ್ ತಿಳಿಸಿದ್ದಾರೆ.

ಆಟೋಮೊಬೈಲ್ ವಲಯ, ಕೈಗಾರಿಕೆಗಳು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ(KSRTC) ಸೇರಿದಂತೆ ಇನ್ನಿತರ ಸಾರ್ವಜನಿಕ ಸಂಸ್ಥೆಗಳಿಗೆ ನಿಗದಿತ ಅವಧಿಯಲ್ಲಿ ಗುಣಮಟ್ಟದ ಬಣ್ಣ ತಯಾರಿಸಿ ಪೂರೈಸುವ ಇತಿಹಾಸ ಹೊಂದಿರುವ ಕಾರ್ಖಾನೆಯು, ಇದೀಗ ಮನೆ ಡೆಕೊರೇಷನ್ ಉದ್ದೇಶಗಳಿಗೂ ಗ್ರಾಹಕರ ಬೇಡಿಕೆಗನುಗುಣವಾಗಿ ಪೇಂಟ್ ಪೂರೈಸಲು ಸಿದ್ಧತೆ ಮಾಡುತ್ತಿದ್ದೇವೆ ಎಂದರು.

ಅತ್ಯಾಧುನಿಕ ಪ್ರಯೋಗಾಲಯ, ಉತ್ಪಾದನಾ ಘಟಕ ವಿಸ್ತರಣೆ, ನೂತನ ತಂತ್ರಜ್ಞಾನದ ಯಂತ್ರೋಪಕರಣಗಳ ಅಳವಡಿಕೆ, ಆಧುನೀಕರಣಗೊಳಿಸಿ ಪೇಂಟ್ಸ್ ಅಂಡ್ ವಾರ್ನಿಷ್ ಉತ್ಪಾದನಾ ಸಾಮರ್ಥ್ಯದೊಟ್ಟಿಗೆ ಖಾಸಗಿ ಕಂಪನಿಗಳಿಗೆ ಸ್ಪರ್ಧೆ ನೀಡಿ ಗ್ರಾಹಕರಿಗೆ ಉತ್ತಮ ಗುಣಮಟ್ಟ ಹಾಗೂ ಅಧಿಕ ಬಾಳಿಕೆ ಬರುವ ಬಣ್ಣ ತಯಾರಿಸಿ ಪೂರೈಸುವುದು ನಮ್ಮ ಉದ್ದೇಶವಾಗಿದೆ ಎಂದು ನುಡಿದರು.

ಈಗಾಗಲೇ ಕೆಲ ರಾಜ್ಯಗಳಿಗೆ ಶಾಯಿ ಪೂರೈಕೆ ಆಗಿದೆ

ಭಾರತ ಚುನಾವಣಾ ಆಯೋಗದ ಕೋರಿಕೆಯಂತೆ ನಾವು ಅಳಿಸಲಾಗದ ಶಾಯಿ ಪೂರೈಸಲು ಸರ್ವ ರೀತಿಯ ಸಿದ್ಧತೆ ಮಾಡಿಕೊಂಡು ಮಿಜೋರಾಂ, ತ್ರಿಪುರ, ನಾಗಾಲ್ಯಾಂಡ್, ಅರುಣಾಚಲ ಪ್ರದೇಶ ಸೇರಿ 19 ರಾಜ್ಯಗಳಿಗೆ ಈಗಾಗಲೇ ಶಾಯಿ ಬಾಟಲುಗಳನ್ನು ತಲುಪಿಸಿದ್ದೇವೆ ಎಂದು ಎಂಪಿವಿಎಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಮೊಹಮದ್ ಇರ್ಫಾನ್ ತಿಳಿಸಿದ್ದಾರೆ.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಉತ್ತರ ಪ್ರದೇಶ, ಮಧ್ಯ ಪ್ರದೇಶ, ಮಹಾರಾಷ್ಟ್ರ, ಗೋವಾ, ತಮಿಳುನಾಡು ರಾಜ್ಯಗಳಿಗೂ ರವಾನೆ ಮಾಡಿದ್ದೇವೆ. ಆ ಪೈಕಿ ಉತ್ತರ ಪ್ರದೇಶ ಅತೀ ಹೆಚ್ಚು 3.58 ಲಕ್ಷ ವಯಲ್ಸ್ ಹಾಗೂ ಲಕ್ಷ ದ್ವೀಪಕ್ಕೆ ಅತೀ ಕಡಿಮೆ 125 ವಯಲ್ಸ್ ಶಾಯಿಯನ್ನು ಕಳುಹಿಸಲಾಗಿದೆ ಎಂದು ತಿಳಿಸಿದರು.

ಅಧಿಕಾರಿಗಳ ಭೇಟಿ: ಬೇಡಿಕೆ ಆರ್ಡರ್ ನೀಡುವ ಮೊದಲು ಚುನಾವಣಾ ಆಯೋಗದ ಅಧಿಕಾರಿಗಳು ಮೈಸೂರಿಗೆ ಬಂದು ಕಾರ್ಖಾನೆಯಲ್ಲಿ ತಯಾರಾಗುವ ಅಳಿಸಲಾಗದ ಶಾಯಿ ಪ್ರಯೋಗಾಲಯ, ಬಳಸುವ ಕಚ್ಚಾ ಪದಾರ್ಥ ಉತ್ಪಾದನಾ ಪ್ರಕ್ರಿಯೆ, ಪ್ಯಾಕಿಂಗ್ ಮುಂತಾದವುಗಳ ಬಗ್ಗೆ ಪರಿಶೀಲಿಸಿ ತೃಪ್ತಿಕರ ಎನಿಸಿದ ನಂತರವಷ್ಟೇ ನಮಗೆ ಇಂಕ್ ಪೂರೈಸಲು ಆದೇಶ ನೀಡಿದ್ದರು ಎಂದು ಮೊಹಮದ್ ಇರ್ಫಾನ್ ತಿಳಿಸಿದರು.

ನಮ್ಮ ಅಧಿಕಾರಿಗಳನ್ನೂ ದೆಹಲಿಗೆ ಎರಡು ಭಾರಿ ಕರೆಸಿಕೊಂಡು ಸಭೆ ನಡೆಸಿ ಕೆಲ ಸಲಹೆ–ಸೂಚನೆ ನೀಡಿದ್ದರಲ್ಲದೆ, ಚುನಾವಣಾ ಹಿತದೃಷ್ಟಿಯಿಂದ ಗೌಪ್ಯತೆ ಕಾಪಾಡುವ ಬಗ್ಗೆಯೂ ಕೆಲ ಸೂಚನೆಗಳನ್ನೂ ನೀಡಿದ್ದರು. ಅವುಗಳನ್ನು ನಾವು ಚಾಚೂ ತಪ್ಪದೇ ಪಾಲನೆ ಮಾಡುತ್ತಿದ್ದೇವೆ ಎಂದು ನುಡಿದರು.

ಕೇವಲ ದೇಶದಲ್ಲೇ ಅಲ್ಲದೆ, ಕಾಂಬೋಡಿಯಾ, ಬರ್ಕಿನಾ, ಫಾಸೋ, ಸಿಯೆರಾ ಲಿಯನ್, ಫಿಜಿ ಐಲ್ಯಾಂಡ್ಸ್, ಪಾಪುವ ನ್ಯೂಗುನ್ನಿಯಾ, ಟರ್ಕಿ, ಸೌತ್ ಆಫ್ರಿಕಾ, ಮಂಗೋಲಿಯಾ ಸೇರಿದಂತೆ ಪ್ರಪಂಚದ 30ಕ್ಕೂ ಹೆಚ್ಚು ರಾಷ್ಟ್ರಗಳಿಗೆ ಅಳಿಸಲಾಗದ ಶಾಯಿಯನ್ನು ನಮ್ಮ ಕಾರ್ಖಾನೆಯಿಂದ ಪೂರೈಸುತ್ತಿದ್ದೇವೆ ಎಂದು ಇರ್ಫಾನ್ ತಿಳಿಸಿದರು.

ನಾಳೆ ಆಯ-ವ್ಯಯ ಪೂರ್ವಭಾವಿ ಸಭೆ

ಮೈಸೂರು,ಫೆ.15–ಹೂಟಗಳ್ಳಿ ನಗರಸಭೆಯ 2024–25ನೇ ಸಾಲಿನ ಆಯ–ವ್ಯಯವನ್ನು ಸಿದ್ಧಡಿಸುವ ಸಂಬಂಧ ನಗರಸಭೆ ಕಛೇರಿಯಲ್ಲಿ ಫೆ.17 ರಂದು ಮಧ್ಯಾಹ್ನ 3 ಗಂಟೆಗೆ ಪೂರ್ವಭಾವಿ ಸಭೆಯನ್ನು ಕರೆಯಲಾಗಿದೆ. ಹೂಟಗಳ್ಳಿ ನಗರಸಭೆ ವ್ಯಾಪ್ತಿಯ ಹಿರಿಯ ನಾಗರಿಕರು, ಸಾರ್ವಜನಿಕರು, ವಿವಿಧ ಸಂಘ ಸಂಸ್ಥೆಯ ಅಧ್ಯಕ್ಷರು ಅಥವಾ ಉಪಾಧ್ಯಕ್ಷರು ಅಥವಾ ಪದಾಧಿಕಾರಿಗಳು ಹಾಗೂ ಕೈಗಾರಿಕಾ ಪ್ರತಿನಿಧಿಗಳು ಸಭೆಗೆ ಆಗಮಿಸಿ ಅಯ–ವ್ಯಯಕ್ಕೆ ಸಂಬಂಧಿಸಿದಂತೆ ತಮ್ಮ ಅಮೂಲ್ಯವಾದ ಸಲಹೆಗಳನ್ನು ನೀಡಬಹುದಾಗಿದೆ ಎಂದು ಹೂಟಗಳ್ಳಿ ನಗರಸಭೆ ಪೌರಾಯುಕ್ತ ಟಿ.ಎನ್.ನರಸಿಂಹ ಮೂರ್ತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್.ಡಿ.ಕೋಟೆ ತಾಲೂಕು ಕಚೇರಿಗೆ ಡಿಸಿ ಭೇಟಿ; ಪರಿಶೀಲನೆ



ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಹೆಚ್.ಡಿ.ಕೋಟೆ ತಾಲೂಕು ಕಚೇರಿ ಹಾಗೂ ಸರಗೂರಿನ ಹಂಪಾಪುರ ನಾಡ ಕಚೇರಿಗೆ ದಿಢೀರ್ ಭೇಟಿ ನೀಡಿದರು.

ಮೈಸೂರು,ಫೆ.15–ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಇಂದು ಹೆಚ್.ಡಿ.ಕೋಟೆ ತಾಲೂಕು ಕಚೇರಿ ಹಾಗೂ ಸರಗೂರಿನ ಹಂಪಾಪುರ ನಾಡ ಕಚೇರಿಗೆ ದಿಢೀರ್ ಭೇಟಿ ನೀಡಿ ಕಚೇರಿಯ ಸಮಸ್ಯೆ, ಆಡಳಿತ ಕಾರ್ಯಗಳ ಪ್ರಗತಿ ಪರಿಶೀಲಿಸಿ, ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಿದರು.

ಈ ಸಂದರ್ಭದಲ್ಲಿ ಪೌತಿ ಖಾತೆ ಆಂದೋಲನವನ್ನು ಯಶಸ್ವಿಗೊಳಿಸುವಂತೆ, ಕೆರೆ ಒತ್ತುವರಿ ತೆರವುಗೊಳಿಸುವಂತೆ, ಬಗರ್ ಹುಕುಂ ಮಂಜೂರಾತಿ ಕೋರಿ ಬಂದಿರುವ ಅರ್ಜಿಗಳ ವಿಲೇವಾರಿ ಬಗ್ಗೆ ಆಪ್ ಮೂಲಕ ಕ್ರಮ ವಹಿಸುವಂತೆ ಕಚೇರಿಯ ಅಧಿಕಾರಿಗಳಿಗೆ ಸೂಚಿಸಿದರು. ಸಕಾಲ ಅರ್ಜಿಗಳ ವಿಲೇವಾರಿ ಬಗ್ಗೆ ಕ್ರಮ ವಹಿಸಿ, ಭೂಮಿ ತಂತ್ರಾಂಶದಲ್ಲಿ ಖಾತೆ ಕಡತಗಳ ವಿಲೇವಾರಿಯನ್ನು ವಿಳಂಬ ಮಾಡದೆ ತ್ವರಿತವಾಗಿ ಮಾಡುವಂತೆ ಜಿಲ್ಲಾಧಿಕಾರಿಗಳು ತಿಳಿಸಿದರು. ಚುನಾವಣೆಗೆ ಸಂಬಂಧಿಸಿದಂತೆ ಮತಗಟ್ಟೆಗಳನ್ನು ಪರಿಶೀಲಿಸಿಕೊಂಡು ವರದಿ ಮಾಡುವಂತೆ, ಇ–ಆಫೀಸ್ ತೆರೆದು ಕಂಪ್ಯೂಟರ್ ಮೂಲಕ ಕಡತಗಳ ವಿಲೇವಾರಿ ಮಾಡುವಂತೆ ಉಪತಹಶಿಲ್ದಾರ್ ಅವರಿಗೆ ಮತ್ತು ರಾಜಸ್ವ ನಿರೀಕ್ಷಕರಿಗೆ ತಿಳಿಸಿದರು.

ಗೃಹಲಕ್ಷ್ಮಿ ಯೋಜನೆಯೂ ಗ್ರಾಮದಲ್ಲಿ ಎಲ್ಲರಿಗೂ ತಲುಪಿದೆ ಎಂಬುದರ ಬಗ್ಗೆ ಪರಿಶೀಲಿಸಲು ಅಧಿಕಾರಿಗಳಿಗೆ ನಿರ್ದೇಶನಗಳನ್ನು ನೀಡಿದರು. ಈ ಸಂದರ್ಭದಲ್ಲಿ ಹೆಚ್.ಡಿ.ಕೋಟೆ ತಹಶೀಲ್ದಾರ್ ಶ್ರೀನಿವಾಸ್ ಹಾಗೂ ಉಪತಹಶೀಲ್ದಾರ್ ಮತ್ತು ರಾಜಸ್ವ ನಿರೀಕ್ಷಕರು ಉಪಸ್ಥಿತರಿದ್ದರು.

ಅರ್ಕಧಾಮದಲ್ಲಿ ಯಕ್ಷಗಾನ

ಮೈಸೂರು, ಫೆ.15– ಶ್ರೀ ಅರ್ಕ ಮಹಾಗಣಪತಿ ಪ್ರತಿಷ್ಠಾಪನ ಪ್ರಯುಕ್ತ ಬೋಗಾದಿ–ಗದ್ದಿಗೆ ರಸ್ತೆಯ ಕಣಿಯನಹುಂಡಿ ಗೇಟ್ ಬಳಿಯ ಅರ್ಕಧಾಮದಲ್ಲಿ ಶುಕ್ರವಾರ ಸಂಜೆ 4ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಉಡುಪಿಯ ಸದಾನಂದ ತಂಡದವರು ಯಕ್ಷಗಾನ ಪ್ರದರ್ಶಿಸಲಿದ್ದಾರೆ. ಶ್ರೀ ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರು ಕಾರ್ಯಕ್ರಮ ಉದ್ಘಾಟಿಸಲಿದ್ದು, ಅರ್ಕಧಾಮದ ಸಂಸ್ಥಾಪಕ ಶ್ರೀನಿವಾಸ್ ಅರ್ಕ ಅಧ್ಯಕ್ಷತೆ ವಹಿಸಲಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಭಾಗವಹಿಸಬೇಕೆಂದು ಸಮಿತಿಯ ಸದಸ್ಯ ಸಿದ್ದೇಗೌಡ ಜಿಬಿಎಸ್ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಲೋಕಸಭಾ ಚುನಾವಣೆಗೆ ರಾಜ್ಯದ ಅರ್ಧದಷ್ಟು ಹಾಲಿ ಬಿಜೆಪಿ ಸಂಸದರಿಗೆ ಕೊಕ್ ಸಾಧ್ಯತೆ

ಸಮೀಕ್ಷಾ ವರದಿ ಆದರಿಸಿ ಬಿಜೆಪಿ ವರಿಷ್ಠರ ಗಂಭೀರ ಚಿಂತನೆ; ತಿಂಗಳಾಂತ್ಯಕ್ಕೆ ಪಟ್ಟಿ ಬಿಡುಗಡೆ ಸಾಧ್ಯತೆ

- ಎರಡನೇ ಸಾಲಿನ ಹೊಸ ಮುಖಗಳಿಗೆ ಮಣೆ
- ಅಚ್ಚರಿ ಅಭ್ಯರ್ಥಿಗಳಿಗೆ ಟಿಕೆಟ್ ಭಾಗ್ಯ!
- ಕಾಂಗ್ರೆಸ್‌ಗೆ ಮಾಸ್ಟರ್ ಸ್ಟ್ರೋಕ್ ನೀಡಲು ಕಾರ್ಯತಂತ್ರ
- ಮೋದಿ, ಅಮಿತ್ ಶಾ, ನಡ್ಡಾ ಗಂಭೀರ ಚರ್ಚೆ
- ವಯಸ್ಸಾದ, ವಿವಾದಿತ ಸಂಸದರಿಗೆ ಟಿಕೆಟ್ ಮರೀಚಿಕೆ

ಬಾಪುಲಿಂಗರಾಜ್ ಅರಸ್

ಮೈಸೂರು, ಫೆ.15– ಮಹತ್ವದ ರಾಜಕೀಯ ಬೆಳವಣಿಗೆಯಲ್ಲಿ ಕರ್ನಾಟಕದ 25 ಲೋಕಸಭಾ ಕ್ಷೇತ್ರಗಳಲ್ಲಿ ಬಿಜೆಪಿಯ ಅರ್ಧದಷ್ಟು ಸಂಸದರಿಗೆ ಆ ಪಕ್ಷದ ಹೈಕಮಾಂಡ್ ಟಿಕೆಟ್ ನಿರಾಕರಿಸಲಿದೆ ಎಂದು ಉನ್ನತ ಮೂಲಗಳು ಖಚಿತಪಡಿಸಿವೆ. ಸಂಸದರು ಮಾಡಿರುವ ಅಭಿವೃದ್ಧಿ ಕಾರ್ಯ, ಜನಮನ್ನಣೆ, ವಯಸ್ಸು ಹಾಗೂ ನಾನಾ ರಾಜಕೀಯ ಕಾರಣಗಳಿಂದ ಕೆಲವು ಹಾಲಿ ಸಂಸದರಿಗೆ ಕೊಕ್ ನೀಡಿ, ಗೆಲ್ಲುವ ಅಭ್ಯರ್ಥಿಗೆ ಮಣೆ ಹಾಕಲು ವರಿಷ್ಠರು ಗಂಭೀರ ಚಿಂತನೆ ನಡೆಸಿದ್ದಾರೆ ಎಂದು ಹೇಳಲಾಗಿದೆ.

ಲೋಕಸಭಾ ಚುನಾವಣೆ ಘೋಷಣೆಗೆ ಇನ್ನು ಕೆಲವೆ ದಿನಗಳು ಬಾಕಿ ಇದ್ದು, ಬಿಜೆಪಿ ಎಲ್ಲಾ ತಯಾರಿ ಮಾಡಿಕೊಂಡಿದೆ. ಈ ಬಾರಿಯ ಲೋಕಸಭಾ ಚುನಾವಣೆಯ ಟಿಕೆಟ್ ಹಂಚಿಕೆಯಲ್ಲಿ ಬಿಜೆಪಿ ಹೈಕಮಾಂಡ್ ಹೊಸ ಫಾರ್ಮುಲಾ ಕೈಗೆತ್ತಿಗೊಳ್ಳಲಿದೆಯಂತೆ.

ಕರ್ನಾಟಕದ 28 ಲೋಕಸಭಾ ಕ್ಷೇತ್ರಗಳಲ್ಲಿ ಈಗಾಗಲೇ ಬಿಜೆಪಿ ಹೈಕಮಾಂಡ್ ರಹಸ್ಯ ಸಮೀಕ್ಷೆ ನಡೆಸಿದೆ. ಯಾರಿಂದ, ಹೇಗೆ ಸಮೀಕ್ಷೆ ನಡೆಸಲಾಗಿದೆ ಎಂಬ ಸಣ್ಣ ಮಾಹಿತಿಯು ಯಾವ ಬಿಜೆಪಿ ನಾಯಕರಿಗೂ ಇಲ್ಲ.

ಕರ್ನಾಟಕದ 28 ಲೋಕಸಭಾ ಕ್ಷೇತ್ರಗಳ ಸರ್ವೆ ವರದಿ ಈಗಾಗಲೇ ಬಿಜೆಪಿ ಹೈಕಮಾಂಡ್ ಕೈ ಸೇರಿದೆ. ಜನವಿರೋಧಿ, ಅಭಿವೃದ್ಧಿ ಕಾರ್ಯ ಮಾಡದ, ವಯಸ್ಸಾಗಿರುವ ಹಾಗೂ ನಾನಾ ರಾಜಕೀಯ ಕಾರಣಕ್ಕಾಗಿ ಹಾಲಿ 25 ಸಂಸದರಲ್ಲಿ ಬಹುತೇಕರಿಗೆ ಬಿಜೆಪಿ ವರಿಷ್ಠರು ಟಿಕೆಟ್ ನಿರಾಕರಿಸಬಹುದು. ಈ ಸಂಬಂಧ ಬಿಜೆಪಿಯ ಹಾಲಿ ಸಂಸದರ ಶಾರ್ಟ್ ಲೀಸ್ಟ್ ಕೂಡ ಮಾಡಲಾಗಿದೆಯಂತೆ. ಬಿಜೆಪಿ ವರಿಷ್ಠರ ಈ ನಡೆ ಹಾಲಿ ಸಂಸದರಲ್ಲಿ ತಳಮಳ ಉಂಟುಮಾಡಿದೆ.

ಹಾಲಿ ಕೆಲವು ಸಂಸದರಿಗೆ ಟಿಕೆಟ್ ನಿರಾಕರಿಸಿ, ಎರಡನೆ ಸಾಲಿನ ನಾಯಕರಿಗೆ ಆದ್ಯತೆ ನೀಡಲು ಬಿಜೆಪಿ ವರಿಷ್ಠರು ತೀರ್ಮಾನ ಮಾಡಿದ್ದಾರೆ. ಇದರಿಂದ ಟಿಕೆಟ್ ನಿರೀಕ್ಷೆಯಲ್ಲಿರುವ ಕೆಲವು ಬಿಜೆಪಿ ನಾಯಕರು ಸಂಸತ್ತಿಗೆ ಕಾಲಿಡುವ ಕನಸು ಕಾಣುತ್ತಿದ್ದಾರೆ.

ಹಾಲಿ ಸಂಸದರಲ್ಲಿ ಚಾಮರಾಜನಗರ ಸಂಸದ ವಿ. ಶ್ರೀನಿವಾಸ ಪ್ರಸಾದ್, ಚಿಕ್ಕಬಳ್ಳಾಪುರ ಸಂಸದ ಬಿ.ಎನ್.ಬಚ್ಚೇಗೌಡ, ಬೆಂಗಳೂರು ಉತ್ತರ ಸಂಸದ ಡಿ.ವಿ. ಸದಾನಂದಗೌಡ, ದಾವಣಗೆರೆ ಸಂಸದ ಜಿ.ಎಂ. ಸಿದ್ದೇಶ್ವರ, ಹಾವೇರಿ–ಗದಗ ಸಂಸದ ಎಂ.ಪಿ. ಶಿವಕುಮಾರ್ ಉದಾಸಿ ಈಗಾಗಲೇ ರಾಜಕೀಯ ನಿವೃತ್ತಿ ಘೋಷಿಸಿದ್ದಾರೆ. ಈ ಐವರನ್ನು ಹೊರತುಪಡಿಸಿ ಉಳಿದ 20 ಹಾಲಿ ಸಂಸದರಲ್ಲಿ ಬಹಳಷ್ಟು ಸಂಸದರನ್ನು ಕೈ ಬಿಟ್ಟು ಗೆಲ್ಲುವ ಹೊಸಬರಿಗೆ ಟಿಕೆಟ್ ನೀಡಲು ಬಿಜೆಪಿ ಹೈಕಮಾಂಡ್ ತೀರ್ಮಾನ ಮಾಡಿದೆ ಎನ್ನಲಾಗಿದೆ.

ಐದು ವರ್ಷದ ಅವಧಿಯಲ್ಲಿ ಕರ್ನಾಟಕದ ನಾಲ್ವರು ಸಂಸದರು ಲೋಕಸಭೆಯಲ್ಲಿ ಬಾಯಿ ಬಿಟ್ಟು ಒಂದು ಪ್ರಶ್ನೆ ಕೇಳಿಲ್ಲ. ಕೆಲವರು ಲೋಕಸಭಾ ಅಧಿವೇಶನಕ್ಕೆ ಬೆರಳಣಿಕೆಯಷ್ಟು ದಿನ ಹಾಜರಾಗಿದ್ದಾರೆ. ಮತ್ತೆ ಕೆಲವರು ವಿವಾದಿತ ಹೇಳಿಕೆಗಳನ್ನು ನೀಡಿ, ಜನರ ವಕ್ರದೃಷ್ಟಿಗೆ ಗುರಿಯಾಗಿದ್ದಾರೆ. ಮತ್ತೆ ಕೆಲವರಿಗೆ ವಯಸ್ಸು ಮೀರಿದೆ. ಇಂತಹ ಸಂಸದರಿಗೆ ಟಿಕೆಟ್ ನೀಡದಿರಲು ತೀರ್ಮಾನ ಕೈಗೊಳ್ಳಲಾಗಿದೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಇದೇ ರೀತಿ ಸಮೀಕ್ಷೆ ಮಾಡಿಸಿ ಹೊಸಬರಿಗೆ ಟಿಕೆಟ್ ನೀಡುವ ಮೂಲಕ ಬಿಜೆಪಿ ವರಿಷ್ಠರು ಕೈ ಸುಟ್ಟುಕೊಂಡಿದ್ದಾರೆ. ಆದರೆ ಈ ಬಾರಿ ತಮ್ಮ ಕಾರ್ಯತಂತ್ರ ವಿಫಲವಾಗದಂತೆ ಎಚ್ಚರಿಕೆ ಹೆಜ್ಜೆ ಇಡಲು ತೀರ್ಮಾನ ಮಾಡಿದ್ದಾರೆ.

ಸದ್ಯದ ಪರಿಸ್ಥಿತಿಯಲ್ಲಿ ಕರ್ನಾಟಕದಲ್ಲಿ ಕಾಂಗ್ರೆಸ್ ಪ್ರಬಲ ಸ್ಪರ್ಧೆಗೆ ಅಣಿಯಾಗಿದೆ. ಕಾಂಗ್ರೆಸ್ ಹೆಚ್ಚು ಸ್ಥಾನ ಗೆಲ್ಲುವ ರಾಜ್ಯಗಳಲ್ಲಿ ಕರ್ನಾಟಕವೇ ಅಗ್ರ ಸ್ಥಾನದಲ್ಲಿದೆ ಎಂದು ವಿಶ್ಲೇಷಿಸಲಾಗಿದೆ. ಒಂದು ವೇಳೆ ಕಾಂಗ್ರೆಸ್ ಕರ್ನಾಟಕದಲ್ಲಿ ಹೆಚ್ಚು ಸ್ಥಾನ ಗೆದ್ದರೆ ಕೈ ಪಾಳೆಯಕ್ಕೆ ಬೂಸ್ಟರ್ ಸಿಕ್ಕಂತೆ. ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ಬಗ್ಗುಬಡಿಯಲು ಬಿಜೆಪಿ ಪರಿಣಾಮಕಾರಿ ಕಾರ್ಯತಂತ್ರ ರೂಪಿಸಿದ್ದು, ಸ್ವತಃ ಪ್ರಧಾನಮಂತ್ರಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ರಣತಂತ್ರ ರೂಪಿಸಿದ್ದಾರೆ ಎಂದು ತಿಳಿದು ಬಂದಿದೆ. ಈ ಮಹಾತಂತ್ರದಲ್ಲಿ ಜೆಡಿಎಸ್ ಮೈತ್ರಿಯೂ ಸೇರಿದೆ.

ಯಾರೂ ಕೂಡ ನಿರೀಕ್ಷಿಸದ ಗೆಲ್ಲುವ ಹೊಸ ಮುಖಕ್ಕೆ ಟಿಕೆಟ್ ನೀಡಿ ಕಾಂಗ್ರೆಸ್‌ಗೆ ಮಾಸ್ಟರ್ ಸ್ಟ್ರೋಕ್ ನೀಡಲು ಬಿಜೆಪಿ ಹೈಕಮಾಂಡ್ ತೀರ್ಮಾನಿಸಿದೆ ಎಂದೂ ಹೇಳಲಾಗುತ್ತಿದೆ. ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಹಾಗೂ ಜೆಡಿಎಸ್ ನಡುವೆ ಮೈತ್ರಿ ಏರ್ಪಟ್ಟಿದೆ. ಮಂಡ್ಯ, ಹಾಸನ, ಬೆಂಗಳೂರು ಗ್ರಾಮಾಂತರ, ಕೋಲಾರ, ತುಮಕೂರು, ಚಿಕ್ಕಬಳ್ಳಾಪುರ ಕ್ಷೇತ್ರಗಳಿಗೆ ಜೆಡಿಎಸ್ ಪಟ್ಟು ಹಿಡಿದರೆ, ಹಳೆ ಮೈಸೂರು ಭಾಗದ ನಾಲ್ಕು ಕ್ಷೇತ್ರ ಬಿಟ್ಟು ಕೊಡಲು ಬಿಜೆಪಿ ಸಮ್ಮತಿ ಸೂಚಿಸಿದೆ ಎನ್ನಲಾಗಿದೆ.

ಹಾಸನ, ಮಂಡ್ಯ ಜೆಡಿಎಸ್ ಭದ್ರಕೋಟೆ, ಬೆಂಗಳೂರು ಗ್ರಾಮಾಂತರದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಹೋದರ ಡಿ.ಕೆ.ಸುರೇಶ್ ಪ್ರಬಲ ಸ್ಪರ್ಧಿ. ಈ ಹಿನ್ನೆಲೆಯಲ್ಲಿ ಮೂರು ಕ್ಷೇತ್ರಗಳನ್ನು ಜೆಡಿಎಸ್‌ಗೆ ಬಿಟ್ಟು ಕೊಡಲು ಬಿಜೆಪಿ ತೀರ್ಮಾನ ಮಾಡಿದೆ ಎನ್ನಲಾಗಿದ್ದು, ಶತಾಯ ಗತಾಯ ಈ ಬಾರಿ ಡಿ.ಕೆ.ಸುರೇಶ್ ಮಣಿಸಲು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಅಳಿಯ, ಜಯದೇವ ಹೃದ್ರೋಗ ಸಂಸ್ಥೆಯ ಮಾಜಿ ನಿರ್ದೇಶಕರಾದ ಡಾ. ಸಿ.ಎನ್. ಮಂಜುನಾಥ್ ಅವರನ್ನು ಕಣಕ್ಕಿಳಿಸಲು ಬಿಜೆಪಿ ವರಿಷ್ಠರು ನಿರ್ಧರಿಸಿದ್ದಾರೆ ಎನ್ನಲಾಗಿದೆ.

ಸಮೀಕ್ಷಾ ವರದಿ ಆಧರಿಸಿ ಹಾಲಿ ಯಾವ ಸಂಸದರಿಗೆ ಟಿಕೆಟ್ ನಿರಾಕರಿಸಬೇಕು, ಹೊಸ ಮುಖಗಳಲ್ಲಿ ಯಾರಿಗೆ ಟಿಕೆಟ್ ನೀಡಬೇಕು, ಜೆಡಿಎಸ್‌ಗೆ ಯಾವ ಕ್ಷೇತ್ರ ಬಿಟ್ಟುಕೊಡಬೇಕು ಎಂಬಿವೇ ಹಲವು ವಿಷಯಗಳ ಆಧಾರದ ಮೇಲೆ ಈಗಾಗಲೇ ಬಿಜೆಪಿ ಹೈಕಮಾಂಡ್ ಕರ್ನಾಟಕದ 28 ಕ್ಷೇತ್ರಗಳ ಪಟ್ಟಿಯನ್ನು ಸಿದ್ಧ ಮಾಡಿದ್ದು, ಈ ತಿಂಗಳಾಂತ್ಯಕ್ಕೆ ಎರಡು ಹಂತದಲ್ಲಿ ಪಟ್ಟಿ ಬಿಡುಗಡೆ ಮಾಡಲಿದೆ ಎಂದು ಬಿಜೆಪಿ ಉನ್ನತ ಮೂಲಗಳು ತಿಳಿಸಿವೆ.

ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದು, ಲೋಕಸಭಾ ಚುನಾವಣೆಯಲ್ಲಿ ಹೆಚ್ಚು ಸ್ಥಾನ ಗೆಲ್ಲುವುದು ಕಾಂಗ್ರೆಸ್ ಗೆ ಪ್ರತಿಷ್ಠೆಯ ವಿಚಾರವಾಗಿದೆ. ಈ ಹಿನ್ನೆಲೆಯಲ್ಲಿ ಹಾಲಿ ಕನಿಷ್ಟ 8 ಸಚಿವರನ್ನು ಲೋಕಸಭಾ ಚುನಾವಣಾ ಕಣಕ್ಕಿಳಿಸಲು ನಿರ್ಧಾರ ಮಾಡಿದೆ ಎನ್ನಲಾಗಿದೆ. ಈಗ ಗೆದ್ದಿರುವ 25 ಕ್ಷೇತ್ರಗಳಲ್ಲಿ ಮತ್ತೆ ವಿಜಯ ಪತಾಕೆ ಹಾರಿಸುವುದು ಬಿಜೆಪಿಗೆ ಪ್ರತಿಷ್ಠೆಯಾಗಿದ್ದರೆ, ಇನ್ನು ತನ್ನ ಬುನಾದಿ ಬಲಪಡಿಸಿಕೊಳ್ಳುವುದು ಜೆಡಿಎಸ್‌ಗೆ ಮಾಡು ಇಲ್ಲವೆ ಮಡಿ ಹೋರಾಟವಾಗಿದೆ. ಇದರಿಂದ ಕರ್ನಾಟಕದ ಲೋಕಸಭಾ ಚುನಾವಣೆ ಯಲ್ಲಿ ಮೂರೂ ಪಕ್ಷಗಳ ಸೆಣಸಾಟ ರೋಚಕತೆ ಪಡೆಯಲಿದೆ.

ನಕ್ಕರೆ ಅದೇ ಸ್ವರ್ಗ

ಆತ : ನನಗೆ ಹೆಂಡ್ತಿ ಮೇಲೆ ಸಿಟ್ಟು ಬಂದ್ರೆ ಊಟ ಮಾಡೋದೇ ಇಲ್ಲ, ಹೋಟೆಲ್‌ಗೆ ಹೋಗ್ತೀನಿ

ಈತ : ನಾನೂ ಅಷ್ಟೇ, ನನ್ನ ಹೆಂಡ್ತಿ ಮೇಲೆ ಸಿಟ್ಟು ಬಂದರೆ ನಾನು ಅಡುಗೆ ಮಾಡೋದೇ ಇಲ್ಲ. ಹೋಟೆಲ್‌ಗೆ ಹೋಗಿ ಬಿಡ್ತೀನಿ!

ಮೈಸೂರು ಮಿತ್ರ

ಶುಕ್ರವಾರ, 16 ಫೆಬ್ರವರಿ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಗಂಡಾಂತರ ಅನಿರೀಕ್ಷಿತವಾಗಿ ಅನಿರೀಕ್ಷಿತ ಸ್ಥಳಗಳಲ್ಲಿ ನಮ್ಮನ್ನೇ ಕಾದಿರುತ್ತದೆ. ಆದ್ದರಿಂದ ನಾವು ಪ್ರತಿ ಹೆಜ್ಜೆಯನ್ನು ಎಚ್ಚರದಿಂದ ಇಡಬೇಕು. –ಗಯಟೆ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಧರ್ಮ ಮಾಡಿದರೂ ಮರ್ಮ ತಿಳಿಯಬೇಕು

ನಿಮ್ಮ ಪತ್ರಗಳು

ಸ್ಟಾಂಪ್ ಶುಲ್ಕ ಏರಿಕೆ ಸರಿಯಲ್ಲ

ಮಾನ್ಯರೆ,

ರಾಜ್ಯ ಸರ್ಕಾರವು ಇತ್ತೀಚೆಗೆ ಸ್ಟಾಂಪ್ ಶುಲ್ಕಗಳನ್ನು ಹೆಚ್ಚಿಸಿ ಆದೇಶ ಹೊರಡಿಸಿದೆ. ಈ ಹಿಂದೆ ಪ್ರಮಾಣ ಪತ್ರಗಳಿಗೆ ತೆಗೆದುಕೊಳ್ಳುವ ಛಾಪಾ ಕಾಗದದ ಬೆಲೆಯನ್ನು 20 ರೂಗಳಿಂದ 100 ರೂಪಾಯಿಗಳಿಗೆ ಹೆಚ್ಚಿಸಿದೆ. ಈ ಹಿಂದೆ 200 ರೂಪಾಯಿಗಳಿದ್ದ ಸಾಮಾನ್ಯ ಅಧಿಕಾರದ ಪತ್ರದ ಸ್ಟಾಂಪ್ ಶುಲ್ಕವನ್ನು 1000 ರೂ.ಗೆ ಏರಿಸಲಾಗಿದೆ. ಇನ್ನೂ ಹಲವಾರು ರೀತಿಯ ಸ್ಟಾಂಪ್ ಶುಲ್ಕಗಳನ್ನು ಏರಿಸಲಾಗಿದ್ದು, ಇದು ಶ್ರೀಸಾಮಾನ್ಯರಿಗೆ ಹೊರೆಯಾಗಿದೆ. ಬೊಕ್ಕಸವನ್ನು ತುಂಬಿಸುವ ಹಲವಾರು ವಿಧಾನಗಳಲ್ಲಿ ಇದೂ ಸಹ ಒಂದು ಎಂದು ಹೇಳಬಹುದು.

ಬೊಕ್ಕಸದ ಹೊರೆಯನ್ನು ತಗ್ಗಿಸಲು ರಾಜ್ಯ ಸರ್ಕಾರಕ್ಕೆ ಇನ್ನೂ ಹಲವಾರು ಮಾರ್ಗಗಳಿವೆ. ಅನಗತ್ಯ ಹುದ್ದೆಗಳನ್ನು ರದ್ದು ಪಡಿಸುವುದು, ಅನಗತ್ಯ ನಿಗಮ ಮತ್ತು ಮಂಡಳಿಗಳನ್ನು ರದ್ದುಗೊಳಿಸುವುದು, ಸರ್ಕಾರಿ ವೆಚ್ಚವನ್ನು ತಗ್ಗಿಸುವುದು, ಆರ್ಥಿಕ ಶಿಸ್ತನ್ನು ಪಾಲಿಸುವುದು ಇನ್ನೂ ಮುಂತಾದ ಕ್ರಮಗಳು ಬೊಕ್ಕಸದ ಹೊರೆಯನ್ನು ತಗ್ಗಿಸಬಲ್ಲವು. ಅವುಗಳ ಬದಲು, ಸ್ಟಾಂಪ್ ಶುಲ್ಕಗಳನ್ನು ಏರಿಸಿರುವ ಕ್ರಮ ಸಮರ್ಥನೀಯವಲ್ಲ.

ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಯೋಜನೆಗಳಿಗೆ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ, ಅರ್ಜಿದಾರರು ಪ್ರಮಾಣ ಪತ್ರ ಸಲ್ಲಿಸುವುದು ಕಡ್ಡಾಯ. ಅದೇ ರೀತಿ ಬೇರೆ ಬೇರೆಯ ಸರ್ಕಾರಿ ಮತ್ತು ಇತರ ಕೆಲಸಗಳಿಗೆ ಪ್ರಮಾಣ ಪತ್ರ ಸಲ್ಲಿಸುವುದು ಕಡ್ಡಾಯ. ಸಾಮಾನ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುವ ಬಡ ಜನರಿಗೆ ಇದು ಖಂಡಿತಾ ಹೊರೆಯೇ ಸರಿ. 100 ರೂ.ನಿಂದ 150 ರೂಪಾಯಿಗಳಿಗೆ ಆಗುತ್ತಿದ್ದ ಪ್ರಮಾಣ ಪತ್ರಗಳಿಗೆ ಈ ಬಡ ಬೋರೇಗೌಡ ಕನಿಷ್ಠ ಪಕ್ಷ 200 ರೂ.ಗಳನ್ನಾದರೂ ಪಾವತಿಸಬೇಕು. (ನೋಟರಿ ಶುಲ್ಕ ಮತ್ತು ಬೆರಳಚ್ಚು ಸೇರಿ). ಈ ಹಿನ್ನೆಲೆಯಲ್ಲಿ, ರಾಜ್ಯ ಸರ್ಕಾರ ಸ್ಟಾಂಪ್ ಮೇಲೆ ವಿಧಿಸಿ ಹೊರಡಿಸಿರುವ ತನ್ನ ಆದೇಶವನ್ನು ಪುನರ್ ಪರಿಶೀಲಿಸುವುದು ಅಗತ್ಯವಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಕೇಂದ್ರದ ರೈತ ವಿರೋಧಿ ಧೋರಣೆ ಸರಿಯಲ್ಲ

ಮಾನ್ಯರೆ,

ಪ್ರತಿ ಬಾರಿ ರೈತರು ತಮ್ಮ ಹಕ್ಕುಗಳಿಗಾಗಿ ಹೋರಾಟಕ್ಕೆ ಇಳಿದಾಗ ಹೋರಾಟವನ್ನು ಹತ್ತಿಕ್ಕುವ ಕೆಲಸ ಮಾಡುವ ಕೇಂದ್ರ ಸರ್ಕಾರ ಯಾಕೆ ಅವರ ಬೇಡಿಕೆಗಳಿಗೆ ಸ್ಪಂದಿಸುವ, ವಿಚಾರಗಳನ್ನು ಚರ್ಚಿಸುವ ಗೋಜಿಗೆ ಹೋಗುತ್ತಿಲ್ಲ. ಪ್ರಧಾನ ಮಂತ್ರಿಗಳು ರೈತರ ಬಗ್ಗೆ ದೊಡ್ಡ ದೊಡ್ಡ ಭಾಷಣ ಬಿಗಿಯುತ್ತಾರೆ. ಅನ್ನದಾತ, ದೇಶದ ಬೆನ್ನೆಲುಬು ಎನ್ನುತ್ತಾರೆ. ಬೇಡಿಕೆಗೆ ಆಗ್ರಹಿಸಿ ಪ್ರತಿಭಟನೆ ಮಾಡಿದರೆ ಪೊಲೀಸರು ರೈತರ ಮೇಲೆ ಗುಂಡು ಹಾರಿಸುತ್ತಾರೆ. ಇಂತಹ ದ್ವಿಮುಖ ನೀತಿ ಬಿಟ್ಟು ರೈತರ ನ್ಯಾಯಯುತ ಬೇಡಿಕೆಯಾದ ಬೆಂಬಲ ಬೆಲೆಗೆ ಕಾನೂನು ಸ್ಪರ್ಶ ನೀಡಿ ಸ್ವಾವಲಂಬಿ ಬದುಕು ನಡೆಸಲು ಬಿಡಿ. ನೀವು ನೀಡುವ ಎರಡು ಸಾವಿರ ಭಿಕ್ಷೆಗೆ ಕಾಯುವ ಪರಿಸ್ಥಿತಿಯನ್ನು ಯಾಕೆ ಮುಂದುವರಿಸುತ್ತೀರಿ. ಅಲ್ಲದೆ ಕೇಂದ್ರ ಕೃಷಿ ಸಚಿವರು ಇದು ನಮಗೆ ಸಂಬಂಧಿಸಿದ್ದಲ್ಲ. ಆಯಾ ರಾಜ್ಯಕ್ಕೆ ಸಂಬಂಧಿಸಿದ ವಿಷಯ ಎಂದಾದರೆ ಕೇಂದ್ರದಲ್ಲಿ ಈ ಕೃಷಿ ಖಾತೆಯ ಕೆಲಸ ಏನು? ದಯಮಾಡಿ ಕನಿಷ್ಠ ಬೆಂಬಲ ಬೆಲೆಯನ್ನಾದರು ನಿಗದಿಗೊಳಿಸಿದರೆ ದೇಶದಲ್ಲಿ ಅನ್ನದಾತ ಉಳಿಯಲು ಸಾಧ್ಯ. ಇಲ್ಲದಿದ್ದರೆ ಜನರ ಬಳಿ ಹಣವಿರುತ್ತದೆ. ಉಣ್ಣಲು ಅನ್ನವಿರದು. ರೈತಾಪಿ ವರ್ಗಕ್ಕೆ ಇಂದು ಮದುವೆಯಾಗಲು ಹೆಣ್ಣು ಸಿಗದ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಆದ್ದರಿಂದ ರೈತರ ಬೇಡಿಕೆಗಳನ್ನು ಗಂಭೀರವಾಗಿ ಪರಿಗಣಿಸಬೇಕು.

–ದಡದಹಳ್ಳಿ ರಮೇಶ್, ಚಂದಕವಾಡಿ ಹೋಬಳಿ, ಚಾಮರಾಜನಗರ ಜಿಲ್ಲೆ.

ಶೌಚಾಲಯ ಬದಲು ಶಿಕ್ಷಣದ ಪೈಪೋಟಿಯಾಗಲಿ

ಮಾನ್ಯರೆ,

ಗಂಡ ಹೆಂಡತಿ ಜಗಳ ನಡುವೆ ಮಗು ಅನಾಥವಾಯಿತು ಎನ್ನುವಂತೆ, ಇತ್ತೀಚೆಗೆ ದಾವಣಗೆರೆ ತಾಲೂಕು ಮೆಳ್ಳೆಕಟ್ಟೆ ಸರ್ಕಾರಿ ಮುಖ್ಯ ಶಿಕ್ಷಕಿ ಸಿಲುಕಿಸಲು ಶಾಲಾ ಮಕ್ಕಳಿಂದ ಶೌಚ ತೊಳೆಸಿದ ಶಿಕ್ಷಕಿ ಕ್ರಮ ಬೇಸರದ ಸಂಗತಿ. ವಿದ್ಯಾ ಮಂದಿರದಲ್ಲಿ ಶಿಕ್ಷಕ ವೃಂದದ ನಡುವೆ ಪೈಪೋಟಿಯಿಂದ ಹಾಳಾಗುವುದು ವಿದ್ಯಾರ್ಥಿಗಳ ಭವಿಷ್ಯ. ಇದರ ಬದಲು ಮಕ್ಕಳಿಗೆ ವಿವಿಧ ರೀತಿಯ ಪ್ರಯೋಗಗಳು, ಉತ್ತಮ ಶಿಕ್ಷಣದ ಆಲೋಚನೆಗಳಿಂದ, ಸರ್ಕಾರಿ ಶಾಲೆಗಳು ಖಾಸಗಿ ಶಾಲೆಗಳಿಗೆ ಪೈಪೋಟಿ ನೀಡಬಹುದು. ಇದರಿಂದ ಪಾಲಕರು ತಮ್ಮ ಮಕ್ಕಳಿಗೆ ಸರ್ಕಾರಿ ಶಾಲೆಗಳತ್ತ ಸೇರಿಸಲು ಮೊದಲ ಆದ್ಯತೆ ನೀಡುತ್ತಾರೆ.

ಮನಸ್ಸಿದ್ದರೆ ಮಾರ್ಗ ಎನ್ನುವಂತೆ, ಸರ್ಕಾರಿ ಶಾಲೆ ಮುಖ್ಯ ಶಿಕ್ಷಕರು, ಮಕ್ಕಳಿಗೆ ಉಚಿತ ವಿಮಾನ ಪ್ರಯಾಣದ ಪ್ರವಾಸದ ಸುದ್ದಿ ಗೊತ್ತಿರುವ ವಿಚಾರ. ಹಾಗೆಯೇ ಕೆಲ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳಿಂದ ಶೌಚಾಲಯ ಸ್ವಚ್ಛಗೊಳಿಸುವ ಬದಲು ಶಿಕ್ಷಕ ವೃಂದ ಸಹಕಾರದಿಂದ ಶಾಲೆಗೊಬ್ಬರನ್ನು ನೇಮಕ ಮಾಡಿಕೊಳ್ಳುವುದು ಒಳ್ಳೆಯ ವಿಚಾರ ಅಲ್ವಾ?

– ಆನಂದ ಜೇವೂರ್, ಕಲಬುರಗಿ

ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಿ



ಮಾನ್ಯರೆ,

ಮೈಸೂರು ನಗರದ ಅಶೋಕಪುರಂ ಮುಖ್ಯರಸ್ತೆಯ NIE ಕಾಲೇಜಿನ ಪುರುಷರ ವಿದ್ಯಾರ್ಥಿನಿಲಯದ ಮುಂಭಾಗದಲ್ಲಿ ಮರಬಿದ್ದಿದ್ದು, ಅದನ್ನು ನಗರ ಪಾಲಿಕೆಯವರು ತೋರಿಕೆಗೆ ತುಂಡರಿಸಿ, ಅರ್ಧ ಭಾಗದಲ್ಲಿ ರಾಶಿ ಹಾಕಿದ್ದಾರೆ. ಇದರಿಂದ ವಾಹನ ಸವಾರರಿಗೆ ಅಡಚಣೆಯುಂಟಾಗುತ್ತಿದೆ. ಕೂಡಲೇ ರಸ್ತೆಯಲ್ಲಿರುವ ಮರದ ತುಂಡುಗಳನ್ನು ತೆರವುಗೊಳಿಸಿ, ಮುಕ್ತ ಸಂಚಾರಕ್ಕೆ ಅನುವು ಮಾಡಿಕೊಡಲಿ. –ಪಡುವಾರಹಳ್ಳಿ ಎಂ.ರಾಮಕೃಷ್ಣ, ವಕೀಲರು.



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು,
ರಾಮಕೃಷ್ಣ ವಿದ್ಯಾಶಾಲೆ,
ಮೈಸೂರು. ಮೊ.: 9036389640

ಈ ಜೀವನ...

ನಿಂದಕರೇ ನಿಜವಾದ ಬಂಧುಗಳು...!?



ಮನುಷ್ಯ ಸಂಘಜೀವಿ. ಬಾಂಧವ್ಯದೊಂದಿಗೆ ಬದುಕು ಸಾಗಿಸಲು ಬಯಸುವಂತಹ ಸ್ನೇಹಜೀವಿಯೂ ಹೌದು. ಅನಿವಾರ್ಯತೆ ಅರಿತು–ಬೆರೆತು ಬದುಕುವ ಜೊತೆಗೆ ವಿಶಾಲ ಜೀವಕೋಶದಲ್ಲಿ ಭಾವಕೋಶವನ್ನು ಇರಿಸಿಕೊಂಡೇ ಜೀವನ ಸಾಗಿಸುವ ಸಹ ಜೀವಿ. ಈ ಅರ್ಥವ್ಯಾಪ್ತಿಗೆ ಮಸಿ ಬಳಿಯುವ ಕೆಲಸ ಕೆಲವು ಸಂಕುಚಿತ ಮನೋಭಾವವಿರುವ ಮನುಷ್ಯರಿಂದ ಎದುರಾದಾಗ ಪುರಂದರದಾಸರು ಹಾಡಿದ ನಿಂದಕರಿರಬೇಕು?. ಎಂಬ ಕೀರ್ತನೆ ಕಿವಿಯಲ್ಲಿ ಅನುರಣಿಸುತ್ತದೆ.

ಈಗಿನ ಕಾಲದಲ್ಲಿ ಗಂಡ, ಹೆಂಡತಿ, ಮಗು ಇಷ್ಟಿದ್ದರೆ ಸಾಕು ಉಳಿದವರ ಬಗ್ಗೆ ಕಾಳಜಿಯೂ ಇಲ್ಲ. ಬಂಧು ಬಳಗ, ಸಂಬಂಧ ಯಾವುದು ಬೇಡ ಇನ್ನು ಕೆಲವರಿಗೆ......

ನೇರ ಹಾಗೂ ಪರೋಕ್ಷವಾಗಿ ಹೇಳಿದ ಈ ಸಂಭಾಷಣೆ ಕೇಳಿ ಕ್ಷಣ ಕಾಲ ಮೌನ ಆವರಿಸುವುದು ಸಹಜ. ನಿಜತನದಲ್ಲಿ ಸತ್ಯದ ಬಗೆಯನ್ನು ಅರಿಯಬೇಕಿದೆ ಮನುಜ. ಸಂಬಂಧದ ಬಗ್ಗೆ, ಕಾಲದ ಬಗ್ಗೆ ಮಾತಾಡಿದವರು ಹಣದ ವಿಚಾರವಾಗಿ ಸಂಬಂಧಕ್ಕೆ ಎಷ್ಟರ ಮಟ್ಟಿಗೆ ಬೆಲೆ ಕೊಟ್ಟರೆಂಬುದು ಅನುಭವಕ್ಕೆ ಬಂದಿತ್ತು. ಬೆರಳು ಮಾಡಿ ತೋರಿಸಿ ನೀನು ಸರಿಯಿಲ್ಲ ಎಂದು ಸಾರಾಸಗಟಾಗಿ ಮುಖಕ್ಕೆ ರಾಚುವಂತೆ ಮಾತನಾಡುವ ಮಂದಿ ಹಂದಿಗಿಂತಲೂ ಕಡೆಯಾಗಿ ವರ್ತಿಸುವ ಮನೋಭಾವವನ್ನು ರೂಢಿಸಿಕೊಂಡು ಕೊಂಕು ಮಾತುಗಳಿಗೆ ಸೂಜಿದಾರವ ಪೋಣಿಸುತ್ತಲೇ ಇರುತ್ತಾರೆ. ಇವರಿಗೆ ಮತ್ತೊಬ್ಬರ ಹುಳುಕುಗಳನ್ನು ಹುಡುಕುವ, ಆ ಹುಳುಕುಗಳನ್ನೇ ದಿನದ ಮೂರು ಹೊತ್ತು ಊಟಕ್ಕೆ ಉಪ್ಪಿನಕಾಯಿಯಂತೆ ನಂಚಿಕೊಳ್ಳುವ ಇಲ್ಲವೇ ಆ ಹುಳುಕನ್ನೇ ಊಟದ ರೀತಿಯಲ್ಲಿ ಬಾಯಿಚಪ್ಪರಿಸಿ ಸೇವಿಸುವ ಮಂದಿಯ ಬುದ್ಧಿ ಮೊಣಕಾಲ ಕೆಳಗೆ. ಹೀಗೆ ತಮ್ಮಲ್ಲಿಯೇ ಹುಳುಕು ಇಟ್ಟುಕೊಂಡು ಇತರರ ಮೇಲೆ ತಪ್ಪು ಹೊರಿಸುವಂತಹ ನಿಂದಕರು ಎಲ್ಲೆಡೆ ಕಾಣ ಸಿಗುತ್ತಾರೆ.

ನಮ್ಮ ಪ್ರತಿ ಹೆಜ್ಜೆಯನ್ನು ಗಮನವಿಟ್ಟು ನೋಡುತ್ತಾ, ಪ್ರತಿ ಹಂತದಲ್ಲೂ ಸದಾ ಜಾಗೃತಿಯನ್ನು ಮೂಡಿಸುವ ಜವಾಬ್ದಾರಿ ನಿಂದಕರಿಗೆ ಸಲ್ಲುತ್ತದೆ. ಯಾವುದೇ ಬಗೆಯ ಸಂಬಳದ ನಿರೀಕ್ಷೆಯಿಲ್ಲದೆ, ಪ್ರತಿಫಲದ ಅಪೇಕ್ಷೆ ಇಲ್ಲದೆ ಅತ್ಯಂತ ಪ್ರಾಮಾಣಿಕರಾಗಿ ತಮ್ಮ ಕೆಲಸವನ್ನು ಚಾಚು ತಪ್ಪದೆ ನಿರ್ವಹಿಸುವ ನಿಂದಕ ಮಹಾಶಯರಿಗೆ ಎಷ್ಟು ಧನ್ಯವಾದಗಳನ್ನು ಸಮರ್ಪಿಸಿದರು ಸಾಲದು. ತಮ್ಮ ನಿಂದನೆಯ ಮಾತುಗಳಿಂದ ಉಳಿದವರ ಮನಸ್ಸಿನ ಮೇಲೆ, ಅದು ಬೀರುವ ಪರಿಣಾಮವನ್ನು ಅರಿಯದೆ ಕೆಲವೊಮ್ಮೆ ಅರಿತಿದ್ದರೂ ಕಲಿತ್ತಿದ್ದು ಬುಡೆ ಕಲಕೇತಿ ಅಂದ್ರೆ ಊರು ಬಿಟ್ರು ಬಿಡಲ್ಲ ಅನ್ನುವಂತೆ...! ಮನಸ್ಸಿನ ಮೇಲೆ–ಹೃದಯವನ್ನು ಕೊಡಲಿಯಿಂದ ಸೀಳುತ್ತಿರುತ್ತಾರೆ ಹಾಗೂ ತಮ್ಮ ಬತ್ತಳಿಕೆಯಲ್ಲಿ ಅಡಗಿರುವ ಬಾಣಗಳನ್ನು ಪ್ರಯೋಗಿಸುವಂತಹ ಮಹಾನ್ ಚತುರರು ಎಲ್ಲ ಕ್ಷೇತ್ರಗಳಲ್ಲೂ ಕಂಡುಬರುತ್ತಾರೆ.

ಒಬ್ಬ ಮನುಷ್ಯ ಯಶಸ್ಸನ್ನು ಪಡೆಯಲು ನಿಂದಕರ ಪಾತ್ರ ಅತೀ ಮುಖ್ಯವಾಗಿರುತ್ತದೆ. ಏಕೆಂದರೆ ನಿಂದಕರೇ ಇಲ್ಲ ಎಂಬ ಪಕ್ಷದಲ್ಲಿ ವ್ಯಕ್ತಿಗೆ ತನ್ನ ನಿಜ ಸಾಮರ್ಥ್ಯದ ಅರಿವು ಅಷ್ಟು ಸುಲಭವಾಗಿ ತಿಳಿಯುವುದಿಲ್ಲ (ಏಕಸ್ವಾಮ್ಯ ವ್ಯಾಪಾರದ ದಬ್ಬಾಳಿಕೆ, ಪರಮಾಧಿಕಾರ ಆಡಳಿತ). ಇದನ್ನು ತಿಳಿದೇ ಕನ್ನಡ ದಾಸ ಸಾಹಿತ್ಯದ ಅಶ್ವಿನಿ ದೇವತೆಗಳಲ್ಲಿ ಒಬ್ಬರಾಗಿರುವ ಪುರಂದರದಾಸರು ತಮ್ಮ ಕೀರ್ತನೆಯೊಂದರಲ್ಲಿ ನಿಂದಕರ ಬಗ್ಗೆ ತುಂಬಾ ಅರ್ಥಪೂರ್ಣವಾದ ಸಂದೇಶವನ್ನು ಸಾರಿದ್ದಾರೆ.

ನಿಂದಕರಿರಬೇಕು
ಹಂದಿಯಿದ್ದರೆ ಕೇರಿ ಹೇಗೆ, ಶುದ್ಧಿಯೋ ಹಾಗೆ
ಅಂದಂದು ಮಾಡಿದ ಪಾಪವೆಂಬ
ಮಲ ತಿಂದು ಹೋಗುವರಯ್ಯ ನಿಂದಕರು
ವಂದಿಸಿ ಸ್ತುತಿಸುವ ಜನರೆಲ್ಲರು
ನಮ್ಮ ಪೊಂದಿಹ ಪುಣ್ಯವನು ಒಯ್ಯುವರಯ್ಯ
ದುಷ್ಟಜನರು ಈ ಸೃಷ್ಟಿಯೊಳಿದ್ದರೆ
ಶಿಷ್ಟ ಜನರಿಗೆಲ್ಲ ಕೀರ್ತಿಗಳು
ಇಷ್ಟಪ್ರದ ಶ್ರೀಕೃಷ್ಣ ನಿನ್ನೊಳು
ಇಷ್ಟೇ ವರವನು ಬೇಡುವೆನಯ್ಯ
ದುರಳ ಜನಂಗಳು ಚಿರಕಾಲವಿರುವಂತೆ
ಕರವ ಮುಗಿದು ವರ ಬೇಡುವೆನು
ಪರಿಪರಿ ತಮಸಿಗೆ ಗುರಿಯಹರಲ್ಲದೆ
ಪರಮ ದಯಾನಿಧೆ ಪುರಂದರವಿಠ್ಠಲ

ಬಹುಶಃ ನಿಂದಕರ ಬಗ್ಗೆ ಇದಕ್ಕಿಂತ ಅದ್ಭುತವಾಗಿ ಮತ್ಯಾರು ವರ್ಣಿಸಲು ಸಾಧ್ಯವಿಲ್ಲವೆನ್ನುವಷ್ಟರ ಮಟ್ಟಿಗೆ ಪುರಂದರದಾಸರು ಈ ಕೀರ್ತನೆಯಲ್ಲಿ ನಿಂದಕರು ಇರಬೇಕು. ಇದ್ದರೆ ಒಳ್ಳೆಯದು,ಹೇಗೆ ಹಂದಿ ಇದ್ದರೆ ಕೇರಿ ಶುದ್ಧಿಯಾಗುತ್ತದೋ ಹಾಗೆಯೇ ನಿಂದಕರಿದ್ದರೆ ನಮ್ಮ ಅವಗುಣಗಳನ್ನು ಹೋಗಲಾಡಿಸಿ ಸದ್ಗುಣಗಳು ಗೋಚರಿಸುವಂತೆ ಮಾಡಬಲ್ಲರು. ಇಂತಹ ದುಷ್ಟ ಜನರು ಇರುವುದರಿಂದಲೇ ಶಿಷ್ಟ ಜನರ ಕೀರ್ತಿ ಚಿರಕಾಲ ಉಳಿಯುವುದೆಂದು ಇಂತಹ ನಿಂದಕರು ಬಹುಕಾಲ ಉಳಿಯಬೇಕೆಂದು ಕೈ ಮುಗಿದು ಬೇಡುವೆನೆಂದು ಬೇಡಿಕೊಳ್ಳುವ ಮೂಲಕ ನಿಂದಕರಿಂದ ಸಜ್ಜನರಿಗಾಗುವ ಒಳಿತನ್ನು ತಿಳಿಸುವ ಕೆಲಸ ಪುರಂದರದಾಸರ ಈ ಕೀರ್ತನೆಯಲ್ಲಿ ವ್ಯಕ್ತವಾಗಿದೆ.

ಪಂದ್ಯ ನೋಡದೇ ವೀಕ್ಷಣೆ ಕೊಡುವವರು (ಮ್ಯಾಚ್ ನೋಡದೇ ಕಾಮಿಟ್ರಿ ಕೊಡುವವರು), ಸಿನಿಮಾ ನೋಡದೇ ಚಿತ್ರದ ಬಗ್ಗೆ ಮಾತನಾಡುವವರಿಗೇನು ಕಡಿಮೆ ಇಲ್ಲ. ಕೆಲವೊಮ್ಮೆ ಇಂತಹವರು ಇರುವುದರಿಂದಲೇ ನಮ್ಮ ಆತ್ಮವಿಶ್ವಾಸ ಮತ್ತಷ್ಟು, ಮಗದಷ್ಟು ಹೆಚ್ಚಾಗಬಲ್ಲದು.

ಉದಾಹರಣೆಗೆ: ಸಚಿನ್ ತೆಂಡೂಲ್ಕರ್ ಯಶಸ್ಸಿನ ಉತ್ತುಂಗ ಶಿಖರದಲ್ಲಿದ್ದಾಗ ಈ ಸಾಧನೆಗೆ ಕಾರಣವೇನು ಎಂಬ ಪತ್ರಕರ್ತರ ಪ್ರಶ್ನೆಗೆ ಕೊಟ್ಟ ಉತ್ತರ ಗಮನಾರ್ಹವಾದುದು. ಅವರೇ ಹೇಳಿಕೊಂಡಿರುವಂತೆ 'ನನ್ನ ಆರಂಭದ ದಿನಗಳಲ್ಲಿ ಉತ್ತಮ ಬ್ಯಾಟಿಂಗ್ ಮಾಡಲು ಕಷ್ಟಪಡುತ್ತಿದ್ದುದನ್ನು ನೋಡಿ ಕೆಲವರು ತಮ್ಮ ಮೇಲೆ ಮನಬಂದಂತೆ ಟೀಕೆಯ ಕಲ್ಲುಗಳನ್ನು ಎಸೆಯುತ್ತಿದ್ದರು. ನನ್ನ ತಪ್ಪುಗಳನ್ನು ಅರಿತುಕೊಂಡು ಟೀಕಾಕಾರರು ಎಸೆದ ಕಲ್ಲುಗಳನ್ನೇ ರಸ್ತೆಯನ್ನಾಗಿ ಮಾಡಿಕೊಂಡು ಹೆದ್ದಾರಿಯನ್ನಾಗಿ ಮಾಡಿಕೊಂಡೆ' ಎಂದುತ್ತರ ನೀಡಿದರು.

ಎಷ್ಟು ಅರ್ಥಗರ್ಭಿತವಾದ ಉತ್ತರ ಅಲ್ವಾ? ನಾವು ಯಾವಾಗಲೂ ಹೀಗೆ ನಿಂದಕರ ಮಾತಿಗೆ ತಲೆಕೆಡಿಸಿಕೊಳ್ಳದೇ ನಮ್ಮ ಕೆಲಸವನ್ನು ಸರಿಯಾದ ಕ್ರಮದಲ್ಲಿ ಮಾಡಿಕೊಂಡು ಹೋಗಿದ್ದಲ್ಲಿ ಖಂಡಿತವಾಗಿಯು ನಮ್ಮ ನಮ್ಮ ಕ್ಷೇತ್ರದಲ್ಲಿ ಯಶಸ್ಸನ್ನು ಪಡೆಯಲು ಸಾಧ್ಯವಿದೆ.

ನನಗೆ ನಿಂದಕರ ಬಗ್ಗೆ ಮಾತನಾಡುವಾಗ ಹಿಂದೊಮ್ಮೆ ಎಲ್ಲೋ ಓದಿದ ಪ್ರಸಂಗವೊಂದು ನೆನಪಿಗೆ ಬರುತ್ತದೆ.

ಘಟನೆ : ಒಂದಾನೊಂದು ಪ್ರಾಂತ್ಯದಲ್ಲಿ ಸಣ್ಣದೊಂದು ಹಳ್ಳಿ ಇತ್ತು. ಆ ಪ್ರಾಂತ್ಯವನ್ನು ಆಳುತ್ತಿದ್ದ ರಾಜನಿಗೆ ಆ ಹಳ್ಳಿಯನ್ನು ಕಂಡರೆ ಅದೇನೋ ವಿಶೇಷವಾದ ಅಭಿಮಾನ. ಒಮ್ಮೆ ಅವನಿಗೆ ತಮ್ಮ ಹಳ್ಳಿಯ ಜನರಿಗೆ ಭೋಜನವನ್ನು ಏರ್ಪಡಿಸಬೇಕೆಂಬ ಆಸೆ ಉಂಟಾಯಿತು, ಅದಕ್ಕೆ ತಯಾರಿ ನಡೆಸಿದ ಸುತ್ತಮುತ್ತಲಿನ ಊರಿನಲ್ಲಿ ಪ್ರಸಿದ್ಧಿ ಪಡೆದಿದ್ದ ಅಡುಗೆ ಭಟ್ಟರನ್ನು ಕರೆಸಿ, ಊರ ಬಯಲಲ್ಲಿ ಅಡುಗೆಯನ್ನು ಸಿದ್ಧಪಡಿಸಲು ತಿಳಿಸಿದ. ಉತ್ತಮ ರುಚಿಯ ಅಡುಗೆ ಸಿದ್ಧವಾಯಿತು ಆದರೆ ಇಲ್ಲಿ ಒಂದು ಸಣ್ಣ ಪ್ರಮಾದ ಜರುಗಿತು. ಅಡುಗೆ ತಯಾರಿಸಿದ ಅಡುಗೆ ಭಟ್ಟ ಸಾಂಬಾರಿಗೆ ಉಪ್ಪನ್ನು ಹಾಕಲು ಉಪ್ಪು ತರಲು ಹೋದ. ಇದೇ ಸಮಯಕ್ಕೆ ಸರಿಯಾಗಿ ಗರುಡ ಪಕ್ಷಿಯೊಂದು ಹಾವನ್ನು ಕಚ್ಚಿಕೊಂಡು ಆಕಾಶದಲ್ಲಿ ಹಾರಿಕೊಂಡು ಹೋಗುವಾಗ ಅರೆಜೀವವಾಗಿದ್ದ ಹಾವಿನ ಹಲ್ಲಿನಲ್ಲಿದ್ದ ವಿಷ ಅಡುಗೆ ಭಟ್ಟ ತಯಾರಿಸಿ, ಮುಚ್ಚದೇ ಹಾಗೇ ಬಿಟ್ಟಿದ್ದ ಊಟವನ್ನು ಬಡಿಸಲಾಯಿತು. ಈ ಪ್ರಮಾದದಿಂದ ಹಲವರು ಪ್ರಾಣವನ್ನು ಕಳೆದುಕೊಂಡರು, ರಾಜನಿಗೆ ಇದರಿಂದ ಬೇಸರ, ದುಃಖ ಉಂಟಾಯಿತು. ಈ ಪ್ರಮಾದಕ್ಕೆ ಹೊಣೆ ಯಾರು ಎಂಬ ಚರ್ಚೆ ಆರಂಭವಾಯಿತು. ಇದರ ಜೊತೆಗೆ ನಮ್ಮ ಭಾರತೀಯರಲ್ಲಿ ನಂಬಿಕೆ ಇರುವ ಹಾಗೆ ಭೂಲೋಕದಲ್ಲಿ ನಾವು ಮಾಡಿದ ಪಾಪ ಹಾಗೂ ಪುಣ್ಯದ ಕೆಲಸಗಳನ್ನು ಯಮಲೋಕದಲ್ಲಿರುವ ಚಿತ್ರಗುಪ್ತನೆಂಬುವವ ಲೆಕ್ಕ ಹಾಕಿ ದಾಖಲಿಸಿಕೊಳ್ಳುತ್ತಾನೆ. ಭೂಲೋಕದಲ್ಲಿ ನಡೆದ ಈ ಪ್ರಮಾದವನ್ನು ಯಾರ ಹೆಸರಲ್ಲಿ ನೋಂದಾಯಿಸಿಕೊಳ್ಳಬೇಕು ಎಂಬ ಗೊಂದಲ ಉಂಟಾಯಿತು. ರಾಜನ ತಪ್ಪು ಎಂದುಕೊಂಡರೆ ಜನರ ಮೇಲೆ ಅವನಿಟ್ಟಿದ್ದ ಪ್ರೀತಿ, ತನ್ನ ಪ್ರಜೆಗಳಿಗೆ ಸಂತೃಪ್ತಿಯ ಭೋಜನವನ್ನು ಹಾಕಿಸಬೇಕೆಂಬ ಅವನ ಒಳ್ಳೆಯತನ ಅಡ್ಡ ಬರುತ್ತದೆ.ಅಡುಗೆ ಭಟ್ಟನ ಖಾತೆಗೆ ಈ ತಪ್ಪನ್ನು ಸೇರಿಸಲಾಗದು. ಏಕೆಂದರೆ ಅವನ ಗಮನಕ್ಕೆ ಬಾರದ ಕೆಲಸವದು. ಹಾಗಾಗಿ ಅವನ ಲೆಕ್ಕದಲ್ಲೂ ಇದನ್ನು ಸೇರಿಸಲಾಗಲಿಲ್ಲ. ಇನ್ನೂ ಉಳಿದಂತೆ ಹದ್ದು, ಅದರ ಲೆಕ್ಕದಲ್ಲಿಯೂ ಸೇರಿಸಲಾಗದು. ಅದು ಅದರ ಆಹಾರ ಪದ್ಧತಿ. ಇನ್ನೂ ಹಾವಿನ ಲೆಕ್ಕದಲ್ಲೂ ಇದನ್ನು ಸೇರಿಸಲು ಆಗುವುದಿಲ್ಲ. ಯಾರ ಖಾತೆಗೆ ತಪ್ಪಿನ ಲೆಕ್ಕ ಸೇರಿಸಬೇಕೆಂಬ ಗೊಂದಲ ಹಾಗೆಯೇ ಚಿತ್ರಗುಪ್ತನಲ್ಲಿಯೇ ಉಳಿಯಿತು.

ಈ ಘಟನೆ ನಡೆದ ವಾರದ ನಂತರ ಆ ಹಳ್ಳಿಗೆ ಅಪರಿಚಿತನೊಬ್ಬನು ಬಂದನು. ಹೊಸಬನಾದ ಕಾರಣ ಆ ವ್ಯಕ್ತಿಯನ್ನು ಆ ಊರಿನ ಬಗ್ಗೆ, ರಾಜನ ಬಗ್ಗೆ ವಿಚಾರಿಸಿದಾಗ ಆತ ಊರು ಸರಿಯಿಲ್ಲವೆಂದು, ಈ ಊರಿನ ರಾಜ ಆಹಾರದಲ್ಲಿ ವಿಷವನ್ನು ಬೆರೆಸಿ ಪ್ರಜೆಗಳನ್ನು ಕೊಲ್ಲುವವನು ಎಂದು ತನಗೆ ತಿಳಿದ ವಿಷಯದೊಂದಿಗೆ ತಿಳಿಯದಿದ್ದ ಸಂಗತಿಗಳನ್ನು ಸೇರಿಸಿ ಅಸತ್ಯವನ್ನು ನುಡಿದನು. ಇದನ್ನು ಗಮನಿಸಿದ ಚಿತ್ರಗುಪ್ತನಿಗೆ ಸತ್ಯದರ್ಶನವಾಯಿತು. ಒಂದು ಕ್ಷಣವು ಚಿಂತಿಸದೆ ಆ ಪ್ರಮಾದದ ಲೆಕ್ಕವನ್ನು ವ್ಯಕ್ತಿಯ ಖಾತೆಗೆ ಸೇರಿಸಿದ. ಏಕೆಂದರೆ ಪೂರ್ಣ ವಿಷಯವನ್ನು ತಿಳಿಯದೆ ತನಗೆ ತಿಳಿದ ಅಲ್ಪ ಮಾಹಿತಿಗೆ ಮತ್ತಷ್ಟು ವಿಷಯವನ್ನು ಸೇರಿಸಿ ಹೇಳಿದ್ದು ಆ ವ್ಯಕ್ತಿಯಾದ ಕಾರಣ ಅವನ ಖಾತೆಗೆ ಈ ತಪ್ಪನ್ನು ಸೇರಿಸಿದ.

ಈ ಘಟನೆ ನಿಜವಾಗಲೂ ನಡೆದಿತ್ತೇ, ಹಾಗಾದರೆ ಆ ರಾಜ ಯಾರು, ಆ ಊರು ಯಾವುದು, ಆ ವ್ಯಕ್ತಿ ಯಾರು ಎಂಬ ಸಂಗತಿಗಳು ನಗಣ್ಯ. ಘಟನೆಯ ಸತ್ಯಾಸತ್ಯತೆ ಕೂಡ ಪ್ರಮುಖವಲ್ಲ. ಮುಖ್ಯವಾಗಿ ಈ ಘಟನೆ ತಿಳಿಸುವಂಥದ್ದು ನಮಗೆ ತಿಳಿಯದ ವಿಚಾರಗಳ ಬಗ್ಗೆ ಅಥವಾ ನಮಗೆ ಸಂಬಂಧಪಟ್ಟ ಸಂಗತಿಗಳ ಬಗ್ಗೆ ಅನವಶ್ಯಕವಾಗಿ ಮೂಗನ್ನು ತೂರಿಸಬಾರದು, ಮಾತನಾಡಬಾರದು ಎಂಬ ಅಂಶ ಗೋಚರಿಸುತ್ತದೆ. ನಿಂದನೆ, ಅನವಶ್ಯಕವಾಗಿ ಟೀಕೆಗಳನ್ನು ಮಾಡುವ ಜನರಿಗೆ ಮುಟ್ಟಿಕೊಳ್ಳುವ ರೀತಿಯಲ್ಲಿ ಪಾಠ ಕಲಿಸಬಲ್ಲ ಘಟನೆ ಇದಾಗಿದೆ.

ಉತ್ತಮ ವಿಗ್ರಹವಾಗಿ ರೂಪುಗೊಳ್ಳಬೇಕಾದರೆ ಉಳಿ ಪೆಟ್ಟು ತಿನ್ನಬೇಕಾದದ್ದು ಸಹಜ ಮತ್ತು ಅನಿವಾರ್ಯ. ಹಾಗೆಯೇ ಉತ್ತಮ ಬದುಕನ್ನು ರೂಪಿಸಿಕೊಳ್ಳಬೇಕು ಎಂಬುವಂಥಾದರೆ ನಮ್ಮ ಸುತ್ತಮುತ್ತ ನಿಂದನೆ ಮಾಡುವವರು, ನಾವೇನೇ ಮಾಡಿದರು ಮಾಡದಿದ್ದರೂ ಮಾತನಾಡುವವರು ಇರಲೇಬೇಕು. ಆಗಲೇ ನಾವು ಹೆಚ್ಚು ಚಟುವಟಿಕೆಯಿಂದ ಇರಲು ಸಾಧ್ಯ. ಎಲ್ಲರೂ ನಮ್ಮನ್ನು ಪ್ರೀತಿಸಿದರೆ ಆ ಜೀವನ ಸಪ್ಪೆ ಆಗುತ್ತದೆ. ನಿಂದಿಸುವವರು ಇದ್ದಾಗಲೇ ಜೀವನಕ್ಕೊಂದು ಸ್ಪಷ್ಟ ಗುರಿ ಬರುತ್ತದೆ. ನಿಂದಿಸುವವರ ಎದುರಿನಲ್ಲಿ ಗೆದ್ದುನಿಲ್ಲಬೇಕೆಂಬ ಜಿದ್ದು ಬರುತ್ತದೆ. ಹಠ, ಛಲ ಮೂಡಿಸಿ ಗುರಿ ಮುಟ್ಟಬಲ್ಲ ಶಕ್ತಿ ನಿಂದಕರ ಮಾತಿನಿಂದ ಹೊರಹೊಮ್ಮುತ್ತದೆ. ಬೆಳೆದು ನಿಲ್ಲಲೇಬೇಕೆಂಬ ಆತ್ಮವಿಶ್ವಾಸ ಬರುತ್ತದೆ.

ಆದ್ದರಿಂದ ನಿಂದಕರಿಗೆ ಹೆದರಿಕೊಳ್ಳದೇ ನಿಂದಕರು ಎಸೆದ ಕಲ್ಲುಗಳಿಂದ ವಿಶಾಲವಾದ, ಸೌಂದರ್ಯವಾದ, ಮರೆಯಲಾಗದ ಉತ್ತಮ ಭವಿಷ್ಯವನ್ನು ಕಟ್ಟಿಕೊಂಡು ನಮ್ಮತನವನ್ನು ಬಿಡದೆ ಭದ್ರವಾಗಿ ನೆಲೆ ನಿಲ್ಲೋಣ.

ನಿಂದಕರಿಂದ ಆದ ಅನುಕೂಲಗಳು

- ಸದಾ ನಾವು ಜಾಗೃತರಾಗಿರುವಂತೆ ನೋಡಿಕೊಳ್ಳುತ್ತಾರೆ. ಚಟುವಟಿಕೆಯಿಂದ ಕಾರ್ಯನಿರ್ವಹಿಸಲು ಕಾರಣಕರ್ತರಾಗುತ್ತಾರೆ. ಹಾವಾಡಿಗರ ದೇಶ, ಮೂಢನಂಬಿಕೆಯ ಜನರು ವಾಸ ಮಾಡಿಕೊಂಡಿರುವ ದೇಶ ಎಂಬ ನಿಂದನೆ ಮಾಡಿದ್ದಿದ್ದರಿಂದಲೇ ಜಗತ್ತಿನ ದೊಡ್ಡಣ್ಣನೆಂದು ಕರೆಸಿಕೊಂಡ ದೇಶದವರು ಹುಬ್ಬೇರಿಸುವಂತಹ ಭಾಷಣವನ್ನು ವೀರ ಸನ್ಯಾಸಿ ಸ್ವಾಮಿ ವಿವೇಕಾನಂದರು ಮಾಡಿ ಇಡೀ ಪ್ರಪಂಚವೇ ಭಾರತದತ್ತ ಮುಖ ಮಾಡುವಂತಾಗಿದ್ದು, ದೇಶದ ಸಂಸ್ಕೃತಿಯನ್ನು ಪ್ರಪಂಚಕ್ಕೆ ಸಾರುವಂತೆ ಮಾಡಿದ್ದು.
- ನಮ್ಮಲ್ಲೇ ಅಡಗಿರುವ, ನಮಗೆ ಗೋಚರವಾಗದ ಶಕ್ತಿಯನ್ನು ಪರಿಚಯಿಸಿ ಯಶಸ್ಸಿಗೆ ಕಾರಣರಾಗುತ್ತಾರೆ. ಇಂತಹ ನಿಂದಕರಿಂದಲೇ ಇಡೀ ದೇಶವೇ ಮೆಚ್ಚುವಂತಹ ಅದ್ಭುತ ಅಭಿಯಂತರ (ಇಂಜಿನಿಯರ್) ಸರ್ ಎಂ.ವಿಶ್ವೇಶ್ವರಯ್ಯ ಪರಿಚಯವಾದದ್ದು.
- ತುಳಿಯಬೇಕೆಂಬ ಬಯಕೆ ಅವರಿಗಿದ್ದರೆ ತುಳಿದವರ ಎದುರಿನಲ್ಲೇ ಮತ್ತಷ್ಟು ಚಿಗುರಿ ಬೆಳೆದು ನಿಲ್ಲಬೇಕೆಂಬ ಹಠ ಮೂಡುವಂತೆ ಮಾಡಬಲ್ಲ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ರೂಪುಗೊಂಡದ್ದು.
- ನಿಂದಕರು ಇದ್ದಿದ್ದರಿಂದಲೇ ಎಂದು ಹೀಯ್ಯಾಳಿಸಿದವರೇ ಕೈ ಕೈ ಹಿಸುಕಿ ನೋಡಿಕೊಳ್ಳುವಂತಹ ವರನಟ ಡಾ.ರಾಜ್ ಕುಮಾರ್ ರೂಪುಗೊಂಡದ್ದು.
- ನಿಂದಕರು ಇದ್ದಿದ್ದರಿಂದಲೇ ರಗಳೆ ಕವಿ ಎನಿಸಿಕೊಂಡ ಹರಿಹರ ಚಂಪೂಕಾವ್ಯವನ್ನು ಬರೆಯಬಲ್ಲೇ ಎಂದು ತೋರಿಸಲು ಸಾಧ್ಯವಾದದ್ದು.
- ನಿಂದಕರು ಇದ್ದಿದ್ದರಿಂದಲೇ ಮಗನ ಹೆಸರಲ್ಲಿ ತಂದೆ ಕೃತಿ ರಚನೆ ಮಾಡುತ್ತಿದ್ದರೆಂಬ ಭಾವನೆ ಅಳಿದು ಸ್ವಂತಿಕೆಯಿಂದ ಪೂರ್ಣಚಂದ್ರ ತೇಜಸ್ವಿ ಕೃತಿ ರಚನೆಯಲ್ಲಿ ತೊಡಗಿಸಿಕೊಂಡು ತಂದೆ–ಮಕ್ಕಳಿಬ್ಬರಿಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದುಕೊಂಡದ್ದು.
- ನಿಂದನೆ ಮಾಡಿದ್ದರಿಂದಲೇ ಆರು ಚೆಂಡುಗಳಲ್ಲಿ ಆರು ಸಿಕ್ಸರ್ ಬಾರಿಸಿ ಯುವರಾಜ್ ಸಿಂಗ್ ವಿಶ್ವದಾಖಲೆ ನಿರ್ಮಿಸಿದ್ದು.
- ನಿಂದನೆ ಮಾಡಿದ್ದರಿಂದಲೇ 87–88ರ ದಶಕದಲ್ಲಿ ಹೊಸ ಸಾಧನೆಗಳನ್ನು ಮಾಡಿ ಇಡೀ ಚಲನಚಿತ್ರ ರಂಗವೇ ಕನ್ನಡ ಚಲನಚಿತ್ರ ರಂಗದತ್ತ ಮೋರೆ ಮಾಡುವಂತಹ ಟೆಕ್ನಿಷನ್ ರೂಪುಗೊಂಡದ್ದು.
- ನಿಂದನೆ ಮಾಡಿದ್ದರಿಂದಲೇ ವಿಭಿನ್ನ, ವಿಶಿಷ್ಟ ಬಗೆಯ ಆಲೋಚನೆ ಉಳ್ಳ ನಿರ್ದೇಶಕ, ನಟನೊಬ್ಬ ಪ್ರಖ್ಯಾತನಾಗಿ ಬೆಳೆದು ಉಪೇಂದ್ರ ಇತಿಹಾಸ ನಿರ್ಮಿಸಿದ್ದು.
- ನಿಂದನೆ ಮಾಡಿದ್ದರಿಂದಲೇ ಜನರಾಡುವಂತಹ ಭಾಷೆಯಲ್ಲಿ ಸಾಹಿತ್ಯ ಮೊಳಕೆಯೊಡೆದು ಪ್ರವರ್ಧಮಾನಕ್ಕೆ ಬಂದದ್ದು. ಸಾಮಾನ್ಯನು ಕೂಡ ಬರವಣಿಗೆಯಲ್ಲಿ ತೊಡಗಿಕೊಳ್ಳುವಂತಾದದ್ದು. ವಚನ, ದಲಿತ, ಬಂಡಾಯ ಸಾಹಿತ್ಯ ಪ್ರಕಾರಗಳು ಪರಿಚಯವಾದದ್ದು.

ಇವೆಲ್ಲ ಕೇವಲ ಬೆರಳೆಣಿಕೆಯ ಉದಾಹರಣೆಗಳಷ್ಟೇ. ಹೇಳಲು ಯತ್ನಿಸಿದರೆ ಭೂಮಿಯನ್ನು ಅಗೆದು ನಿಧಿ ಶೋಧಿಸಿದಂತೆ ಅಸಂಖ್ಯಾತ ಕಣ್ಣಿಗೆ ಕಾಣದಂತಹ, ಕಲ್ಪನೆಗೂ ಸಿಗದಂತಹ ಅನೇಕ ಮಹನೀಯರ ಸಾಹಸ ಕಥೆಗಳು ಕಂಡುಬರಬಲ್ಲದು. ಆದ್ದರಿಂದಲೇ ನಿಂದಕರು ಇರಲೇಬೇಕು. ಅವರಿದ್ದರೆ ಬದುಕಿಗೊಂದು ಬೆಲೆ, ಬಾಳಿಗೊಂದು ನೆಲೆ.ಸ್ಫೂರ್ತಿಗೊಂದು ಸೆಲೆ. ಸಾಧನೆಯ ಪಥದಲ್ಲಿ ಸಾಗಲು ಸಹಾಯ ಮಾಡಬಲ್ಲ ಶಕ್ತಿ ನಿಂದಕರ ಮಾತಿಗಿದೆ.

ನೀನು ನೀನಾಗಿರು ಸಾಕು
ಮೆಚ್ಚಿಸಿ ಬಾಳಲಾಗದು,
ಓಲೈಸಿ ಬದುಕಲಾಗದು
ನೀನು ಏನೇ ಮಾಡಿದರೂ, ಮಾಡದಿದ್ದರೂ
ಎಲ್ಲದರಲ್ಲೂ ಕೊಂಕು ಹುಡುಕುವರು
ಮೆಚ್ಚಿಸಿ ಬದುಕುವ ಆಸೆ ಬೇಡ,
ಓಲೈಸಿ ಬಾಳುವ ನಿರೀಕ್ಷೆ ಬೇಡ
ನಿನಗೊಪ್ಪುವುದನ್ನು ಮಾಡು
ಸರಿ ಎನಿಸಿದ ಹಾಗೆ ಬದುಕುವುದನ್ನು ಕಲಿ,
ನಿನ್ನ ಹಾಗೇ ನೀನು ಬದುಕು,
ನಿನ್ನನ್ನು ಯಾರೊಂದಿಗೂ
ಹೋಲಿಕೆ ಮಾಡಿಕೊಂಡು ಬದುಕುವ ಅವಶ್ಯಕತೆ ನಿನಗಿಲ್ಲ
ಚುಚ್ಚಿ ಮಾತನಾಡುವವರು ಕೂಡ
ಮೆಚ್ಚಿ ಮಾತನಾಡುವ ಸಮಯ ಬರುವುದು
ಕಾಯುವ ತಾಳ್ಮೆ ನಿನಗಿರಲಿ
ನೀನು ನೀನಾಗಿರು ಸಾಕು!!


ಈ ಎಲ್ಲಾ ಬಗೆಯ ನಿಂದಕರ ಸವಾಲುಗಳು, ಹಾದಿಗೆ ಎಸೆದ ಕಲ್ಲು–ಮುಳ್ಳುಗಳು, ಮನಸ್ಸಿಗೆ ಮಾಡಿದ ಗಾಯದ ಗುರುತು, ನೋವಿನ ಕಲ್ಲೇಟಿನ ಮಾತುಗಳು, ಕುಚೋದ್ಯದ ನುಡಿಗಳು, ಕುಚೇಷ್ಟೆಯ ನಡೆ ಇನ್ನೂ ಏನೇ ನಿಂದಕರಿಂದ ಎದುರಾದರು ಆನೆ ನಡೆದದ್ದೆ ದಾರಿ, ನಾಯಿ ಬೊಗಳಿದರೆ ಭೂಲೋಕ ಹಾಳಾಗಲು ಸಾಧ್ಯವಾ ಎನ್ನುತ್ತಾ ನಿಂದಕರ ನುಡಿಗಳು ಬದುಕಿಗೆ ಒಳಿತಾಗಿದ್ದರೆ ಸ್ವೀಕರಿಸಬೇಕು. ಅಂತಹ ಮಾತುಗಳು ಉರಿಯ ಚಪ್ಪರವಾಗುತ್ತವೆ ಎನ್ನುವುದಾದರೆ ಅವುಗಳ ನೆರಳನ್ನು ಸಹ ಅಂಟಿಸಿಕೊಳ್ಳದೆ ಪಕ್ಕಕ್ಕೆ ಸರಿಯುವ ಮನೋದಾರ್ಢ್ಯತೆಯನ್ನು ಬೆಳೆಸಿಕೊಂಡದ್ದೇ ಆದರೆ ಉತ್ತಮ ವ್ಯಕ್ತಿತ್ವದ ಬದುಕು ನಮ್ಮದಾಗುತ್ತದೆ.

ಫೆ.18, ಡಾ.ಎಸ್.ಪಿ.ಬಿ ಗಾನ ರಸಾಯನ–2

ಮೈಸೂರು,ಫೆ.15(ಜಿಎ)–ಗಾನ ಚಂದನ ಕಲಾ ಬಳಗದ ವತಿಯಿಂದ ಫೆ.18ರಂದು ಸಂಜೆ 5ಕ್ಕೆ ಡಾ.ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರ 70, 80 ಮತ್ತು 90ರ ದಶಕದ ಗೀತೆಗಳ ರಸಸಂಜೆ ಡಾ.ಎಸ್.ಪಿ.ಬಿ. ಗಾನ ರಸಾಯನ –2 ಕಾರ್ಯಕ್ರಮವನ್ನು ಜೆ.ಎಲ್.ಬಿ. ರಸ್ತೆಯ ನಾದಬ್ರಹ್ಮ ಸಂಗೀತ ಸಭಾದಲ್ಲಿ ಏರ್ಪಡಿಸಲಾಗಿದೆ ಎಂದು ಬಳಗದ ಅಧ್ಯಕ್ಷ ಆರ್.ಸುಧೀಂದ್ರ ತಿಳಿಸಿದರು.

70ರಿಂದ 90ರ ದಶಕದ ಗೀತೆಗಳ ಗಾಯನ

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮವನ್ನು ಜಿಎಲ್‌ಎನ್ ಕನ್ವೆನ್ಷನ್ ಹಾಲ್, ಕಬಾನಾ ಗಾರ್ಡನ್‌ನ ಮಾಲೀಕ ದೇವಪ್ರಕಾಶ್ ಉದ್ಘಾಟಿಸುವರು. ವಿದ್ಯಾವಿಕಾಸ ಸಂಸ್ಥೆಯ ಅಧ್ಯಕ್ಷ ವಿಕಾಸ್‌ಗೌಡ ಅಧ್ಯಕ್ಷತೆ ವಹಿಸುವರು. ನಗರಪಾಲಿಕೆ ಮಾಜಿ ಸದಸ್ಯ ಜೆ.ಎಸ್. ಜಗದೀಶ್ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಡಾ.ಎಸ್.ಪಿ.ಬಾಲಸುಬ್ರಹ್ಮಣ್ಯಂ ಅವರು ನಡೆದು ಬಂದ ಹಾದಿಯ ವಿಶ್ಲೇಷಣೆ ಹಾಗೂ ಅವರ ಹಾಡುಗಳನ್ನು ಹಾಡುವುದರ ಮೂಲಕ ಅವರನ್ನು ಸ್ಮರಿಸಲಾಗುವುದು. ಕಾರ್ಯಕ್ರಮದಲ್ಲಿ ಗಾಯಕರಾದ ಎಸ್.ವಿಶ್ವನಾಥ್, ಆರ್.ನಟರಾಜ್, ಶಶಿಕಲಾ, ಶ್ರೀನಿವಾಸ್, ನಾಗರಾಜ್, ಗೋಪಾಲಕೃಷ್ಣ, ಧನ್ಯಶ್ರೀ, ಪುಟ್ಟಣ್ಣ, ನಾಗಲಕ್ಷ್ಮಿ ಅವರು ಗಾಯನದ ಮೂಲಕ ರಂಜಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಡಾ.ರಾಜ್‌ಕುಮಾರ್ ಕಲಾ ಸೇವಾ ಟ್ರಸ್ಟ್‌ನ ಅಧ್ಯಕ್ಷ ಮೈಸೂರು ಜಯರಾಮ್, ಗಾಯಕರಾದ ಆರ್.ನಟರಾಜ್, ಶಶಿಕಲಾ, ಗೋಪಾಲಕೃಷ್ಣ, ವಿಶ್ವನಾಥ್ ಶಾಸ್ತ್ರಿ ಉಪಸ್ಥಿತರಿದ್ದರು.




ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಆರ್.ಸುಧೀಂದ್ರ ಮಾತನಾಡಿದರು.



ಮೈಸೂರಿನ ಮಹರ್ಷಿ ಪಬ್ಲಿಕ್ ಶಾಲೆ ಮಕ್ಕಳು ತಮ್ಮ ತಮ್ಮ ಪೋಷಕರಿಗೆ ಪಾದಪೂಜೆ ಮಾಡುವ ಮೂಲಕ ಪ್ರೇಮಿಗಳ ದಿನಾಚರಣೆ ಬದಲು ನಮ್ಮ ಹಿಂದುತ್ವದ ಸಂಸ್ಕಾರ ಸಂಸ್ಕೃತಿ ಹಿರಿಯರನ್ನು ಪ್ರೀತಿಸೋಣ ಎನ್ನುವ ಘೋಷವಾಕ್ಯದೊಂದಿಗೆ ಪೋಷಕರ ಪಾದ ತೊಳೆದು, ಅರಿಶಿನ ಕುಂಕುಮ ಹಚ್ಚಿ, ಮಂಗಳಾರತಿ ಮಾಡಿ ವಿಶೇಷವಾಗಿ ಮಕ್ಕಳು ಆಶೀರ್ವಾದ ಪಡೆದರು. ಶಾಲೆಯ ವ್ಯವಸ್ಥಾಪಕ ಅಧ್ಯಕ್ಷ ಭವಾನಿ ಶಂಕರ್, ಮುಖ್ಯಸ್ಥ ತೇಜಸ್ ಶಂಕರ್, ರಾಘವೇಂದ್ರ, ಅನಿತಾ, ಶೈಲಜಾ, ಪ್ರಿಯಾಂಕ, ಅಂಕಿತ ಇತರರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ವಿವಿ ಮಹಿಳೆಯರ ಕ್ರಿಕೆಟ್ ತಂಡಕ್ಕೆ ತೃತೀಯ ಸ್ಥಾನ



ಅಂತರ ವಿಶ್ವವಿದ್ಯಾನಿಲಯ ಮಹಿಳೆಯರ ಕ್ರಿಕೆಟ್ ಪಂದ್ಯಾವಳಿಯಲ್ಲಿ ಮೈಸೂರು ವಿವಿ ಮಹಿಳೆಯರ ಕ್ರಿಕೆಟ್ ತಂಡ ತೃತೀಯ ಸ್ಥಾನ ಗಳಿಸಿದೆ.

ಮೈಸೂರು, ಫೆ. 15–ಅಂತರ ವಿಶ್ವವಿದ್ಯಾನಿಲಯ ಮಹಿಳೆಯರ ಕ್ರಿಕೆಟ್ ಪಂದ್ಯಾವಳಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಮಹಿಳೆಯರ ಕ್ರಿಕೆಟ್ ತಂಡವು ತೃತೀಯ ಸ್ಥಾನಗಳಿಸಿದೆ.

ತಮಿಳುನಾಡಿನ ಹಲಗಪ್ಪ ವಿಶ್ವವಿದ್ಯಾನಿಲಯ ಆಯೋಜಿಸಿದ್ದ, ಮಹಿಳೆಯರ ಅಂತರ ವಿಶ್ವವಿದ್ಯಾನಿಲಯ ಮಟ್ಟದ ಕ್ರಿಕೆಟ್ ಪಂದ್ಯಾವಳಿಯಲ್ಲಿ, ಮೈಸೂರು ವಿಶ್ವವಿದ್ಯಾನಿಲಯ ಮಹಿಳೆಯರ ಕ್ರಿಕೆಟ್ ತಂಡವು ತೃತೀಯ ಸ್ಥಾನ ಪಡೆದಿದ್ದು, ಅಖಿಲ ಭಾರತ ಅಂತರ ವಿಶ್ವವಿದ್ಯಾನಿಲಯದಲ್ಲಿ ಭಾಗವಹಿಸಲು ಅರ್ಹತೆಯನ್ನು ಪಡೆದಿದೆ. ಇದರಲ್ಲಿ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಮೂವರು ವಿದ್ಯಾರ್ಥಿಗಳು ಭಾಗವಹಿಸುತ್ತಾರೆ. ಅವರಿಗೆ ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು ಹಾಗೂ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ಅಭಿನಂದಿಸಲಾಯಿತು.

ದೈಹಿಕ ಶಿಕ್ಷಣ ನಿರ್ದೇಶಕ ಪಿ.ಎಸ್. ಮಧುಸೂಧನ, ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ಟಿ.ವಿಜಯಲಕ್ಷ್ಮಿ ಮುರಳೀಧರ್, ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ದೈಹಿಕ ಶಿಕ್ಷಣ ನಿರ್ದೇಶಕ ಡಾ.ಹೆಚ್.ಎನ್. ಭಾಸ್ಕರ್ ಇತರರು ಉಪಸ್ಥಿತರಿದ್ದರು.

32 ವರ್ಷದ ಹಿಂದೆ ಸ್ವೀಡನ್ ದಂಪತಿ ದತ್ತು ಪಡೆದಿದ್ದ ಬಾಲಕಿ! ಈಗ ತನ್ನ ಪರಿವಾರದ ಶೋಧನೆಗಿಳಿದ ಮಹಿಳೆ!

ಮೈಸೂರು, ಫೆ.15–ಎಂಟು ವರ್ಷದ ಬಾಲಕಿಯಾಗಿದ್ದಾಗ ಸ್ವೀಡನ್ ದಂಪತಿ ತನ್ನನ್ನು ದತ್ತು ಪಡೆದಿದ್ದ ಮೂಲತಃ ಮಂಡ್ಯ ಜಿಲ್ಲೆಯ ಮಹಿಳೆಯೋರ್ವರು ತನ್ನ ಪರಿವಾರಕ್ಕಾಗಿ ಕಳೆದ 7 ವರ್ಷಗಳಿಂದ ಕರ್ನಾಟಕದಲ್ಲಿ ಹುಡುಕಾಟ ನಡೆಸುತ್ತಿದ್ದಾರೆ.

ಹಾಲಿ ಸ್ವೀಡನ್‌ನಲ್ಲಿ ವಾಸವಿರುವ ಜೋಲಿ ಸ್ಯಾಂಡ್‌ಬರ್ಗ್, ಈಗ ತನ್ನ ಕುಟುಂಬದವರ ಹುಡುಕುತ್ತಿದ್ದಾರೆ. ಇವರು ಪುಣೆ ಮೂಲದ 'ಅಗೇನೆಸ್ಟ್ ಚೈಲ್ಡ್ ಟ್ರಾಫಿಕಿಂಗ್' ಎನ್‌ಜಿಓಗೆ ಸೇರಿದ ವಕೀಲೆ ಅಂಜಲಿ ಪವಾರ್ ಒಡಗೂಡಿ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ, ತನ್ನ ಕುಟುಂಬದವರ ಬಗ್ಗೆ ಯಾರಿಗಾದರೂ ಮಾಹಿತಿ ಇದ್ದರೆ ತಿಳಿಸಬೇಕೆಂದು ಕೋರಿದರು.



ವಕೀಲೆ ಅಂಜಲಿ ಪವಾರ್ ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವುದು.

ಹಾಲಿ ಸ್ವೀಡನ್‌ನಲ್ಲಿರುವ ತನ್ನನ್ನು ದತ್ತು ಪಡೆಯಲಾಗಿತ್ತು. ಈಗ ನನ್ನ ಕುಟುಂಬದವರ ಬಗ್ಗೆ ಕುತೂಹಲದಿಂದ ವಿಷಯಗಳನ್ನು ಕಲೆ ಹಾಕಿದಾಗ ತಾನು 1985ರ ಜೂನ್ 3ರಂದು ಜನಿಸಿರುವುದಾಗಿ ದಾಖಲೆಗಳು ದೊರೆತಿವೆ. ಮಂಡ್ಯ ಜಿಲ್ಲೆಯ ಮದ್ದೂರಿನ ವಸಂತಮ್ಮ ಎಂಬುವರ ಪುತ್ರಿ ನಾನಾಗಿದ್ದು, ನನ್ನ ಮೂಲ ಹೆಸರು ಜಾನು. ನಮ್ಮ ಪಕ್ಕದ ಮನೆಯ ಬೋರೇಗೌಡ ಎಂಬುವರ ಪತ್ನಿ ಜಯಮ್ಮ ಎಂಬುವರು ನನ್ನನ್ನು ಬೆಂಗಳೂರಿನ ಸೇಂಟ್ ಮೇರೀಸ್ ಕಾನ್ವೆಂಟ್‌ಗೆ ಸೇರಿಸಿದ್ದು, ನಂತರ ನನ್ನನ್ನು ಆಶ್ರಯ ಚಿಲ್ಡ್ರನ್ಸ್ ಹೋಂಗೆ ದಾಖಲಿಸಲಾಗಿದೆ. ಆ ಸಂಸ್ಥೆಯು 1992ರಲ್ಲಿ ನನ್ನನ್ನು ಸ್ವೀಡನ್‌ನ ದಂಪತಿ ದತ್ತು ಪಡೆದರು ಎಂಬ ದಾಖಲೆಗಳು ದೊರೆತಿವೆ.

ಕುಟುಂಬದವರನ್ನು ಹುಡುಕಿಕೊಂಡು ಮದ್ದೂರಿಗೆ ತೆರಳಿದಾಗ ನನ್ನ ತಂದೆ ಆತ್ಮಹತ್ಯೆ ಮಾಡಿಕೊಂಡಿದ್ದು, ತಾಯಿ ವಸಂತಮ್ಮ ಚನ್ನಪಟ್ಟಣದ ಕಾಯಿಸೊಪ್ಪು ಬೀದಿಯ ವ್ಯಕ್ತಿಯನ್ನು ವಿವಾಹವಾಗಿದ್ದಾರೆ. ನಂತರ ಆಕೆಯೂ ಕೂಡ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂಬುದು ಗೊತ್ತಾಗಿದೆ. ಆದರೆ ನನ್ನ ತಾಯಿಯ ಎರಡನೇ ಪತಿ ಪತ್ತೆಯಾಗಿಲ್ಲ. ನನ್ನ ಕುಟುಂಬದವರು ಯಾರಾದರೂ ಮೈಸೂರು ಸುತ್ತಮುತ್ತ ಇರಬಹುದು ಎಂದು ಭಾವಿಸಿದ್ದೇನೆ ಎಂದು ತಿಳಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಜೋಲಿ ಸ್ಯಾಂಡ್‌ಬರ್ಗ್ ಪತಿ ಎಡ್ವಿನ್, ವಕೀಲೆ ಅಂಜಲಿ ಪವಾರ್ ಉಪಸ್ಥಿತರಿದ್ದರು.

ಪ್ರೋತ್ಸಾಹಧನಕ್ಕೆ ಅರ್ಜಿ ಹಾಕಲು ಅವಧಿ ವಿಸ್ತರಣೆ

ಮೈಸೂರು: ಸಮಾಜ ಕಲ್ಯಾಣ ಇಲಾಖಾ ವತಿಯಿಂದ 2023–24ನೇ ಶೈಕ್ಷಣಿಕ ಸಾಲಿನಲ್ಲಿ ಮೆಟ್ರಿಕ್ ನಂತರದ ದ್ವಿತೀಯ ಪಿಯುಸಿ, 3 ವರ್ಷದ ಪಾಲಿಟೆಕ್ನಿಕ್ ಡಿಪ್ಲೊಮಾ, ಪದವಿ, ಸ್ನಾತಕೋತ್ತರ ಪದವಿ ಹಾಗೂ ವೃತ್ತಿಪರ ಕೋರ್ಸ್‌ಗಳನ್ನು ಪೂರ್ಣಗೊಳಿಸಿ ಪ್ರಥಮ ಪ್ರಯತ್ನದಲ್ಲಿ, ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ. ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ www.sw.kar.nic.in ಮೆಟ್ರಿಕ್ ನಂತರದ ಪ್ರೋತ್ಸಾಹಧನದಲ್ಲಿ ಅರ್ಜಿ ಸಲ್ಲಿಸಲು ಫೆ.29ರವರೆಗೆ ಅವಧಿಯನ್ನು ವಿಸ್ತರಿಸಲಾಗಿದ್ದು, ಅರ್ಹ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು ನಿಗದಿತ ಸಮಯದೊಳಗೆ ಅರ್ಜಿ ಹಾಕಿ ಅಗತ್ಯ ದಾಖಲೆಗಳೊಂದಿಗೆ ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಮೈಸೂರು ತಾಲ್ಲೂಕಿನ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಗ್ರೇಡ್–1 ದೂ.ಸಂಖ್ಯೆ–0821–2520910 ಸಂಪರ್ಕಿಸಿ.

ಮೈಸೂರು ಮಹಾ ನಗರಪಾಲಿಕೆ ಮುಂದೆ ವಿಶೇಷಚೇತನರ ಪ್ರತಿಭಟನೆ

ಮೈಸೂರು, ಫೆ.15(ಬಿಎಲ್‌ಯು)– ನಗರಪಾಲಿಕೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಉದ್ಯೋಗ ನೀಡುವುದು ಸೇರಿದಂತೆ ಹಲವು ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ವಿಶೇಷಚೇತನರು ಇಂದು ಮೈಸೂರು ನಗರಪಾಲಿಕೆ ಮುಂದೆ ಧರಣಿ ನಡೆಸಿದರು.

ಸ್ವಾಭಿಮಾನಿ ವಿಶೇಷಚೇತನರ ಹಕ್ಕುಗಳ ಹೋರಾಟ ಸಮಿತಿ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ವಿಶೇಷಚೇತನರು ಹಲವು ಬೇಡಿಕೆ ಮುಂದಿಟ್ಟು ಈಡೇರಿಸುವಂತೆ ಒತ್ತಾಯಿಸಿದರು.

ಸಾಕಷ್ಟು ವಿಶೇಷಚೇತನರರು ನಿರುದ್ಯೋಗಿಗಳಾಗಿದ್ದು, ನಗರಪಾಲಿಕೆಯಲ್ಲಿ ಹೊರ ಗುತ್ತಿಗೆ ಆಧಾರದ ಮೇಲೆ ಉದ್ಯೋಗ ನೀಡಬೇಕು, ಸರ್ಕಾರಿ ಕಚೇರಿಗಳಲ್ಲಿ ವಿಶೇಷಚೇತನರು ಹೋಗಲು ರ್‍ಯಾಂಪ್ ಹಾಗೂ ಲಿಫ್ಟ್ ಅಳವಡಿಸಬೇಕು, ವಿಶೇಷಚೇತನರಿಗೆ ಪ್ರತ್ಯೇಕ ಸಮುದಾಯ ಭವನ ನಿರ್ಮಾಣ ಮಾಡಬೇಕು, ವ್ಯಾಪಾರ ಮಾಡುತ್ತಿರುವ ವಿಶೇಷಚೇತನರಿಗೆ ಬೀದಿಬದಿ ವ್ಯಾಪಾರಿಗಳ ಗುರುತಿನ ಚೀಟಿ ನೀಡಬೇಕು ಎಂಬುದು ಸೇರಿದಂತೆ ಹಲವು ಬೇಡಿಕೆ ಈಡೇರಿಸುವಂತೆ ಆಗ್ರಹಿಸಿದರು. ಸಮಿತಿ ಅಧ್ಯಕ್ಷ ಎಂ.ಗಿರೀಶ್, ಉಪಾಧ್ಯಕ್ಷರಾದ ಸೈಯದ್ ಉಸ್ಮಾನ್, ಗೋಪಾಲಕೃಷ್ಣ, ಕಾರ್ಯದರ್ಶಿ ದಿಲೀಪ್, ಖಜಾಂಚಿ ಶಕುಂತಲಾ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.



ವಿಶೇಷಚೇತನರು ಗುರುವಾರ ಮೈಸೂರು ನಗರಪಾಲಿಕೆ ಮುಂದೆ ಧರಣಿ ನಡೆಸಿದರು.

ಜೆಇಇ ಮೇನ್ ಪರೀಕ್ಷೆಯಲ್ಲಿ ಎಂ.ಆರ್.ರಾಜ ಅಶರೀತ್ ಶೇ.99.98 ಅಂಕ ಗಳಿಸಿ ಟಾಪರ್

ಮೈಸೂರು,ಫೆ.15–ಜೆಇಇ ಮೇನ್ 2024ರ ಮೊದಲ ಸೆಷನ್‌ನ ಪರೀಕ್ಷೆಯಲ್ಲಿ ಮೈಸೂರಿನ ಆಕಾಶ್ ಬೈಜೂಸ್‌ನ 6 ವಿದ್ಯಾರ್ಥಿಗಳು ಶೇ.99ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದು ಬಹುದೊಡ್ಡ ಸಾಧನೆ ಮಾಡಿದ್ದಾರೆ. ಇದಲ್ಲದೆ, 23 ವಿದ್ಯಾರ್ಥಿಗಳು ಶೇ.95ಕ್ಕಿಂತ ಹೆಚ್ಚು ಅಂಕ ಪಡೆದುಕೊಂಡಿದ್ದಾರೆ. ಈ ವಿದ್ಯಾರ್ಥಿಗಳಲ್ಲಿ ರಾಜ ಅಶರೀತ್ ಎಂ.ಆರ್. ಅವರು ಒಟ್ಟಾರೆ ಶೇ.99.98 ಅಂಕ ಪಡೆದಿದ್ದರೆ, ರಾಸಾಯನಶಾಸ್ತ್ರದಲ್ಲಿ ಶೇ.100ರಷ್ಟು ಅಂಕ ಗಳಿಸಿ ಟಾಪರ್ ಆಗಿ ಹೊರಹೊಮ್ಮಿದ್ದಾರೆ.



ರಾಜ ಅಶರೀತ್

ಹರ್ಷಿತ್‌ಗೌಡ ಕೆ–ಶೇ.99.40, ತರುಣ್ ಶೇ.99.33, ಪ್ರಥಮ್ ಎನ್.ಗೌಡ ಶೇ.99.26, ಭಾರ್ಗವ ಭಟ್ ಶೇ.99.15, ಯಶ್ ಪ್ರೀತಂ ಬಿ.ಎಂ. ಶೇ.99.14ರಷ್ಟು ಅಂಕ ಗಳಿಸಿದ್ದಾರೆ.

ಪಿಎಚ್.ಡಿ ಪದವೀಧರರು



ಜಿ. ಅಶೋಕ್ ಕುಮಾರ್

ಮೈಸೂರು,ಫೆ.15–ಡಾ.ಬಿ.ಕೆ.ರವೀಂದ್ರನಾಥ್ ಅವರ ಮಾರ್ಗದರ್ಶನದಲ್ಲಿ ಜಿ.ಅಶೋಕ್‌ಕುಮಾರ್ ಅವರು ಭಾಷಾ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಜೆ.ಶರತ್



ಡಾ. ಎಂ. ಭಾಗ್ಯ ಅವರ ಮಾರ್ಗದರ್ಶನದಲ್ಲಿ ಜೆ. ಶರತ್ ಅವರು ಪ್ರಾಣಿಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ಎನ್.ರೂಪೇಶ್ ಕುಮಾರ್

ಡಾ.ಜಿ.ಕೊಟ್ರೇಶ್ವರ್ ಅವರ ಮಾರ್ಗದರ್ಶನದಲ್ಲಿ ಎನ್.ರೂಪೇಶ್ ಕುಮಾರ್ ಅವರು ವಾಣಿಜ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ವ್ಯಕ್ತಿ ನಾಪತ್ತೆ



ಮೈಸೂರು, ಫೆ. 15– ಮೈಸೂರಿನ ಮೃಗಾಲಯ ಸಮೀಪದಿಂದ ವ್ಯಕ್ತಿಯೋರ್ವ ಕಾಣೆಯಾಗಿರುವ ಬಗ್ಗೆ ನಜರ್‌ಬಾದ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಬಸವರಾಜ ಮಡಿವಾಳ (40) ಕಾಣೆಯಾಗಿದ್ದು, ಇವರು ಧಾರವಾಡದಿಂದ ಮೈಸೂರಿನ ಪ್ರವಾಸಿ ತಾಣಗಳಿಗೆ ಭೇಟಿ ನೀಡಲೆಂದು ಬಂದಿದ್ದು, ಜನವರಿ 13ರಿಂದ ಕಾಣೆಯಾಗಿದ್ದಾರೆ ಎಂದು ಪ್ರಕರಣ ದಾಖಲಾಗಿದೆ. ಇವರ ಬಗ್ಗೆ ಮಾಹಿತಿ ತಿಳಿದಲ್ಲಿ ದೂ. 0821–2418308, ಮೊ. 9480802233 ಸಂಪರ್ಕಿಸಲು ಕೋರಲಾಗಿದೆ.

ಅಲ್ಪಾವಧಿ ತರಬೇತಿಗೆ ಅರ್ಜಿ ಆಹ್ವಾನ

ಮೈಸೂರು: ಆಹಾರ ತಯಾರಿಕಾ ವಿಭಾಗಗಳಲ್ಲಿ ಉಚಿತವಾಗಿ ಒಂದು ತಿಂಗಳ ಅಲ್ಪಾವಧಿ ತರಬೇತಿಯನ್ನು ಪ್ರಾರಂಭಿಸಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಮಾಹಿತಿಗಾಗಿ ಮೈಸೂರಿನ ಇಂದಿರಾನಗರದ ದಸರಾ ವಸ್ತು ಪ್ರದರ್ಶನ ಆವರಣದಲ್ಲಿರುವ ಫುಡ್ ಕ್ರಾಫ್ಟ್ ಇನ್ಸ್ಟಿಟ್ಯೂಟ್ ದೂ.ಸಂ: 6362018821, 0821–2445388, ಸಂಪರ್ಕಿಸಬಹುದೆಂದು ಪ್ರಕಟಣೆಯಲ್ಲಿ ತಿಳಿಸಿದೆ.

ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರಿಗೆ ಅಭಿನಂದನೆ



ನಾಗನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಎನ್.ಡಿ.ರಾಮಚಂದ್ರ, ಉಪಾಧ್ಯಕ್ಷರಾದ ಎನ್.ಟಿ.ಕುಮಾರ ಅವರು ಶಾಸಕ ಜಿ.ಟಿ.ದೇವೇಗೌಡರನ್ನು ಅಭಿನಂದಿಸಿದರು. ಈ ಸಂದರ್ಭದಲ್ಲಿ ಜಿಪಂ ಮಾಜಿ ಸದಸ್ಯರಾದ ನಾಗನಹಳ್ಳಿ ದಿನೇಶ್, ಗ್ರಾಪಂ ಸದಸ್ಯರಾದ ಎನ್.ಎಂ.ಭಾಸ್ಕರ್, ವಕೀಲ ಮಹದೇವು, ಸಿದ್ದಲಿಂಗಪುರ ಗ್ರಾ.ಪಂ ಅಧ್ಯಕ್ಷ ಮಾದೇಶ, ಯಾದವೇಂದ್ರ, ಹರೀಶ, ರಾಜಣ್ಣ, ಜನಾರ್ಧನ, ದೇವರಾಜು, ಎನ್.ಸಿ.ಚಲುವರಾಜು, ಪ್ರಭಾಕರ, ಕುಮಾರ, ಮಂಜುಗೌಡ, ರೇವಣ್ಣ, ನಾಗಣ್ಣ, ಸಿದ್ದಲಿಂಗಪುರ ಮಂಜುನಾಥ, ಕಾಮನಕೆರೆಹುಂಡಿ ಕೃಷ್ಣಪ್ಪ, ಕುಮಾರ, ಹನುಮಣ್ಣ, ವಿರೂಪಾಕ್ಷ ಹಾಗೂ ನಾಗನಹಳ್ಳಿ ಗ್ರಾಮದ ಜೆಡಿಎಸ್ ಮುಖಂಡರು ಇದ್ದರು.

ಚಾ.ನಗರ ಲೋಕಸಭೆಯಿಂದ ಮಾಜಿ ಸಚಿವ ಕೋಟೆ ಎಂ.ಶಿವಣ್ಣರಿಗೆ ಟಿಕೆಟ್ ನೀಡಲು ಆಗ್ರಹ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಬಿ.ಪಿ.ಬೋರೆಗೌಡ ಮಾತನಾಡಿದರು.

ಮೈಸೂರು,ಫೆ.15(ಜಿಎ)–ಈ ಬಾರಿಯ ಲೋಕಸಭೆ ಚುನಾವಣೆಗೆ ಚಾಮರಾಜನಗರ ಲೋಕಸಭಾ ಮೀಸಲು ಕ್ಷೇತ್ರಕ್ಕೆ ಬಿಜೆಪಿಯಿಂದ ಮಾಜಿ ಸಚಿವ ಕೋಟೆ ಎಂ.ಶಿವಣ್ಣಗೆ ಟಿಕೆಟ್ ನೀಡಬೇಕೆಂದು ಪಕ್ಷದ ಮಾಜಿ ಜಿಲ್ಲಾ ಕಾರ್ಯದರ್ಶಿ ಬಿ.ಪಿ.ಬೋರೇಗೌಡ ಒತ್ತಾಯಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೋಟೆ ಎಂ.ಶಿವಣ್ಣ ಅವರು ಪಕ್ಷದ ಸಕ್ರಿಯ ಮುಖಂಡರಾಗಿದ್ದು, ಬಿಜೆಪಿ ಜಿಲ್ಲಾ ಗ್ರಾಮಾಂತರ ಅಧ್ಯಕ್ಷರಾಗಿ ಪಕ್ಷವನ್ನು ಮುನ್ನಡೆಸಿದ್ದಾರೆ. ಅಲ್ಲದೆ, ಈ ಕ್ಷೇತ್ರದಲ್ಲಿ ವಿ.ಶ್ರೀನಿವಾಸಪ್ರಸಾದ್ ಅವರ ಗೆಲುವಿಗೆ ಕಾರಣರಾಗಿದ್ದಾರೆ. ಶ್ರೀನಿವಾಸ್ ಪ್ರಸಾದ್ ಅವರು ಮತ್ತೆ ಸ್ಪರ್ಧಿಸುವುದಿಲ್ಲ ಎಂದು ಹೇಳಿರುವ ಕಾರಣ ಇವರನ್ನೇ ಅಭ್ಯರ್ಥಿಯಾಗಿ ಘೋಷಿಸಿದರೆ, ಗೆಲುವು ಸಾಧಿಸಲಿದ್ದಾರೆಂಬ ವಿಶ್ವಾಸ ವ್ಯಕ್ತಪಡಿಸಿದರು.

ಈ ಹಿಂದೆ ಸಚಿವರಾಗಿದ್ದ ವೇಳೆ ಅನೇಕ ಜನಪರ ಕೆಲಸ ಮಾಡಿದ್ದಾರೆ. ರಾಜ್ಯ ಸಫಾಯಿ ಕರ್ಮಚಾರಿ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ 2 ವರ್ಷಗಳ ಕಾಲ ರಾಜ್ಯಾದ್ಯಂತ ಪ್ರವಾಸ ಮಾಡಿ ಪೌರಕಾರ್ಮಿಕರಿಗೆ ಸಾಕಷ್ಟು ಅನುಕೂಲ ಮಾಡಿಕೊಟ್ಟಿದ್ದಾರೆ. 11 ಸಾವಿರ ಪೌರಕಾರ್ಮಿಕರನ್ನು ಖಾಯಂ ಆಗುವಂತೆ ಮತ್ತು ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವ ಯೋಜನೆಯನ್ನು ರೂಪಿಸಿದ್ದಾರೆ. ಈ ಎಲ್ಲಾ ಉತ್ತಮ ಕಾರ್ಯಗಳು ಅವರ ಗೆಲುವಿಗೆ ನೆರವಾಗಲಿದೆ ಎಂದರು. ಗೋಷ್ಠಿಯಲ್ಲಿ ಪದ್ಮ ಪ್ರಸಾದ್, ವೈ.ಟಿ.ಮಹೇಶ್, ದಾಸಯ್ಯ, ಸುನಂದರಾಜು, ಜಯಲಕ್ಷ್ಮೀ ಉಪಸ್ಥಿತರಿದ್ದರು.

ನಾಳೆ ಪುಲ್ವಾಮಾ ದಾಳಿಯಲ್ಲಿ ಹುತಾತ್ಮರಾದ ಯೋಧರಿಗೆ ನಮನ

ಮೈಸೂರಲ್ಲಿ ರಕ್ತದಾನ ಶಿಬಿರ, ಗರ್ಭಕಂಠ ಕ್ಯಾನ್ಸರ್ ಬಗ್ಗೆ ಅರಿವು

ಮೈಸೂರು, ಫೆ.15(ಜಿಎ)– ಪುಲ್ವಾಮಾ ದಾಳಿಯಲ್ಲಿ ಹುತಾತ್ಮರಾದ ಯೋಧರಿಗೆ ನಮನ ಸಲ್ಲಿಸುವ ಸಲುವಾಗಿ ಮೈಸೂರಿನ ಪ್ರಾಜೆಕ್ಟ್ ಕ್ಲಿಕ್ ಸಂಸ್ಥೆ, ಮೈಸೂರು ವಕೀಲರ ಸಂಘ, ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಮತ್ತು ಭಾರತೀಯ ಸಾರ್ವಜನಿಕ ಆರೋಗ್ಯ ಸಂಶೋಧನಾ ಸಂಸ್ಥೆ ಸಹಯೋಗದೊಂದಿಗೆ ಫೆ.17ರಂದು ಮೈಸೂರಿನ ನ್ಯಾಯಾಲಯದ ಆವರಣದಲ್ಲಿ ರಕ್ತದಾನ ಶಿಬಿರ ಹಾಗೂ ಗರ್ಭಕಂಠದ ಕ್ಯಾನ್ಸರ್ ಅರಿವು ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಪ್ರಾಜೆಕ್ಟ್ ಕ್ಲಿಕ್ ಸಂಸ್ಥಾಪಕಿ ನಿಮಿಷಾಂಭ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 2ರವರೆಗೆ ರಕ್ತದಾನ ಶಿಬಿರ ಏರ್ಪಡಿಸಿದ್ದು, ಶಿಬಿರಕ್ಕೆ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ಪ್ರಭಾವತಿ ಎಚ್.ಹಿರೇಮಠ್ ಚಾಲನೆ ನೀಡಲಿದ್ದಾರೆ. ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಂ.ಮಹದೇವಸ್ವಾಮಿ, ಕಾರ್ಯದರ್ಶಿ ಎಸ್.ಉಮೇಶ್, ಉಪಾಧ್ಯಕ್ಷ ಪುಟ್ಟಸಿದ್ದೇಗೌಡ, ಜಯದೇವ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಕೆ.ಎಸ್. ಸದಾನಂದ, ಆರ್‌ಎಂಒ ಡಾ.ಪಶು ಪತಿ, ಹಿರಿಯ ಸಂಶೋಧನಾ ವೈದ್ಯರಾದ ಡಾ.ವಿಜಯಾ ಶ್ರೀನಿವಾಸ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಈ ವೇಳೆ ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಅಧ್ಯಕ್ಷ ಕೆ.ಪಿ.ದಿವಾಕರ್, ಕಾರ್ಯದರ್ಶಿ ಎಚ್.ಎಸ್. ನಂಜುಂಡಸ್ವಾಮಿ ಮತ್ತು ಸೇನಾ ಪದಕ ಪಡೆದಿರುವ ಬಿ.ಆರ್.ನಿಂಗರಾಜು ವಿಶೇಷ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮೈಸೂರು ವಕೀಲರ ಸಂಘದ ಕಾರ್ಯದರ್ಶಿ ಎಸ್.ಉಮೇಶ್, ಜಯದೇವ ಆಸ್ಪತ್ರೆಯ ಆರ್‌ಎಂಒ ಡಾ.ಪಶುಪತಿ, ಹಿರಿಯ ಸಂಶೋಧನಾ ವೈದ್ಯೆ ಡಾ.ವಿಜಯಾ ಶ್ರೀನಿವಾಸ್, ವೈದ್ಯೆ ರಶ್ಮಿ ಉಪಸ್ಥಿತರಿದ್ದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ವಕೀಲರ ಸಂಘದ ಕಾರ್ಯದರ್ಶಿ ಎಸ್.ಉಮೇಶ್ ಮಾತನಾಡಿದರು.

ಫೆ.25, ಮೈಸೂರಿನ 21 ಪರೀಕ್ಷಾ ಕೇಂದ್ರಗಳಲ್ಲಿ ಸಿವಿಲ್ ಪೊಲೀಸ್ ಕಾನ್‌ಸ್ಟೇಬಲ್ ಪರೀಕ್ಷೆ



> **ಅರ್ಹ ಅಭ್ಯರ್ಥಿಗಳು ಕರಪತ್ರವನ್ನು ಪಡೆಯದೆ ಪರೀಕ್ಷೆಗೆ ಹಾಜರಾದಲ್ಲಿ ಲಿಖಿತ ಪರೀಕ್ಷೆಯಲ್ಲಿ ಭಾಗವಹಿಸಲು ಅವಕಾಶವಿಲ್ಲ. ಕರಪತ್ರದ ಜೊತೆಗೆ ಭಾವಚಿತ್ರವಿರುವ ಗುರುತಿನ ಪತ್ರವನ್ನು ಕಡ್ಡಾಯವಾಗಿ ತರತಕ್ಕದ್ದು. ನಿಗದಿತ ಸಮಯದಲ್ಲಿ ಹಾಜರಾಗದಿದ್ದರೆ ಅಂತಹವರನ್ನು ಲಿಖಿತ ಪರೀಕ್ಷೆಯಲ್ಲಿ ಭಾಗವಹಿಸಲು ಅನುಮತಿ ನೀಡಲಾಗುವುದಿಲ್ಲ ಹಾಗೂ ಅರ್ಹ ಅಭ್ಯರ್ಥಿಗಳು ಪರೀಕ್ಷಾ ಸಮಯಕ್ಕಿಂತ 120 ನಿಮಿಷ ಮುಂಚಿತವಾಗಿ ಪರೀಕ್ಷಾ ಕೇಂದ್ರಗಳಲ್ಲಿ ಹಾಜರಾಗುವುದು.**
>
> **–ರಮೇಶ್, ನಗರ ಪೊಲೀಸ್ ಆಯುಕ್ತ**

ಮೈಸೂರು, ಫೆ.15–ಪೊಲೀಸ್ ಕಾನ್ಸ್‌ಟೇಬಲ್ (ಸಿವಿಲ್) (ಪುರುಷ ಮತ್ತು ಮಹಿಳಾ) ಮತ್ತು (ತೃತೀಯ ಲಿಂಗ ಪುರುಷ ಮತ್ತು ಮಹಿಳಾ) ಹಾಗೂ ಸೇವಾನಿರತ ಮತ್ತು ಬ್ಯಾಕ್‌ಲಾಗ್ 1137 ಹುದ್ದೆಗಳ ನೇಮಕಾತಿಗೆ ಫೆ.25ರಂದು ಬೆಳಿಗ್ಗೆ 11ರಿಂದ 12.30ರವರೆಗೆ ಲಿಖಿತ ಪರೀಕ್ಷೆಯನ್ನು ನಡೆಸಲಾಗುತ್ತಿದೆ.

ಅಧ್ಯಯನ್ ಸ್ಕೂಲ್ ಆದಿಶಕ್ತಿ ರಸ್ತೆ ಶಕ್ತಿನಗರ, ಜ್ಞಾನಗಂಗಾ ವಿದ್ಯಾಪೀಠ, ಜೆಎಸ್‌ಎಸ್ ಲಾ ಕಾಲೇಜು, ಮಹರ್ಷಿ ಪಬ್ಲಿಕ್ ಸ್ಕೂಲ್, ಮಾತೃಮಂಡಳಿ ಪಿಯು ಕಾಲೇಜು ವಿವಿ ಮೊಹಲ್ಲಾ, ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯ, ಮೈಸೂರು ಕಾಲೇಜ್ ಆಫ್ ಇಂಜಿನಿಯರಿಂಗ್ ಮತ್ತು ಮ್ಯಾನೇಜ್ಮೆಂಟ್, ನಿರ್ಮಲ ಹೈಸ್ಕೂಲ್, ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು, ಎಸ್‌ಬಿಆರ್‌ಆರ್ ಮಹಾಜನ ಪಿಯು ಕಾಲೇಜು, ಎಸ್‌ಬಿಆರ್‌ಆರ್ ಮಹಾಜನ ಪಬ್ಲಿಕ್ ಸ್ಕೂಲ್, ಶೇಷಾದ್ರಿಪುರಂ ಪದವಿ ಕಾಲೇಜು, ಶ್ರೀ ಕಾವೇರಿ ಎಜುಕೇಷನಲ್ ಇನ್ಸ್‌ಟಿಟ್ಯೂಷನ್ಸ್, ಶ್ರೀ ವಿವೇಕಾನಂದ ಪಿ.ಯು ಕಾಲೇಜು, ಸಂತ ಫಿಲೋಮಿನಾ ಪದವಿ ಕಾಲೇಜು, ಸಂತ ಫಿಲೋಮಿನ ಪಿಯು ಕಾಲೇಜು, ಸೆಂಟ್ ಥಾಮಸ್ ಸೆಂಟ್ರಲ್ ಸ್ಕೂಲ್, ಸೆಂಟ್ ಥಾಮಸ್ ಸ್ಕೂಲ್ (ಸ್ಟೇಟ್ ಸಿಲಬಸ್), ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು, ವಿದ್ಯಾವರ್ಧಕ ಪಾಲಿಟೆಕ್ನಿಕ್ ಕಾಲೇಜು, ವಿಜಯವಿಠಲ ಕಂಪೋಸಿಟ್ ಪಿ.ಯು ಕಾಲೇಜು ಈ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆಯುತ್ತವೆ.

ಪುರುಷ ಮತ್ತು ತೃತೀಯಲಿಂಗ ಪುರುಷ ಅಭ್ಯರ್ಥಿಗಳು ಅರ್ಧ ತೋಳಿನ ಶರ್ಟ್‌ಗಳನ್ನು ಕಡ್ಡಾಯವಾಗಿ ಧರಿಸುವುದು ಹಾಗೂ ಸಾಧ್ಯವಾದಷ್ಟು ಕಾಲರ್ ರಹಿತ ಶರ್ಟ್‌ಗಳನ್ನು ಧರಿಸುವುದು, ಜಿಪ್ ಪ್ಯಾಕೆಟ್‌ಗಳು, ದೊಡ್ಡ ಬಟನ್‌ಗಳು ಇರುವ ಶರ್ಟ್‌ಗಳನ್ನು ಧರಿಸತಕ್ಕದ್ದಲ್ಲ, ಜೀನ್ಸ್ ಪ್ಯಾಂಟ್ ಮತ್ತು ಹೆಚ್ಚಿನ ಜೇಬುಗಳಿರುವ ಪ್ಯಾಂಟ್‌ಗಳನ್ನು ಧರಿಸತಕ್ಕದ್ದಲ್ಲ, ಪರೀಕ್ಷಾ ಕೇಂದ್ರದೊಳಗೆ ಷೂಗಳನ್ನು ನಿಷೇಧಿಸಿದ್ದು, ಅಭ್ಯರ್ಥಿಗಳು ತೆಳುವಾದ ಅಡಿಭಾಗವಿರುವ ಪಾದರಕ್ಷೆಗಳನ್ನು (ಚಪ್ಪಲಿ) ಧರಿಸುವುದು. ಕುತ್ತಿಗೆ ಸುತ್ತಾ ಯಾವುದೇ ಲೋಹದ ಆಭರಣಗಳು ಅಥವಾ ಉಂಗುರ ಮತ್ತು ಕನ್ನಡಕಗಳನ್ನು ಧರಿಸುವುದು ನಿಷೇಧಿಸಲಾಗಿದೆ. ಮಹಿಳಾ ಮತ್ತು ತೃತೀಯ ಲಿಂಗಿ ಮಹಿಳಾ ಅಭ್ಯರ್ಥಿಗಳು ವಿಸ್ತಾರವಾದ ಕಸೂತಿ, ಹೂಗಳು, ಬ್ರೂಚ್‌ಗಳು ಅಥವಾ ಬಟನ್‌ಗಳು ಹೊಂದಿರುವ ಬಟ್ಟೆಗಳನ್ನು ಧರಿಸುವುದು ನಿಷೇಧಿಸಲಾಗಿದೆ. ಪರೀಕ್ಷೆ ದಿನದಂದು ಪೂರ್ಣ ತೋಳಿನ ಬಟ್ಟೆಗಳನ್ನು ಅಥವಾ ಜೀನ್ಸ್ ಪ್ಯಾಂಟ್ ಧರಿಸಬಾರದು, ಅದರ ಬದಲಾಗಿ ಅರ್ಧ ತೋಳಿನ ಬಟ್ಟೆಗಳನ್ನು ಅವರಿಗೆ ಮುಜುಗುರವಾಗದಂತೆ ಅಭ್ಯರ್ಥಿಗಳು ಧರಿಸುವಂತೆ ನಿರ್ದೇಶಿಸಲಾಗಿದೆ. ಎತ್ತರವಾದ ಹಿಮ್ಮಡಿಯ ಶೂಗಳನ್ನು ಅಥವಾ ಚಪ್ಪಲಿಗಳನ್ನು ಮತ್ತು ದಪ್ಪವಾದ ಅಡಿ ಭಾಗ ಹೊಂದಿರುವ ಶೂಗಳನ್ನಾಗಲಿ ಅಥವಾ ಚಪ್ಪಲಿಗಳನ್ನಾಗಲಿ ಧರಿಸಬಾರದು, ತೆಳುವಾದ ಅಡಿಭಾಗ ಹೊಂದಿರುವ ಚಪ್ಪಲಿಗಳು ಧರಿಸುವುದು ಕಡ್ಡಾಯವಾಗಿದೆ. ಮಹಿಳಾ ಮತ್ತು ತೃತೀಯಲಿಂಗಿ ಮಹಿಳಾ ಅಭ್ಯರ್ಥಿಗಳು ಯಾವುದೇ ರೀತಿಯ ಲೋಹದ ಆಭರಣಗಳನ್ನು ಧರಿಸುವುದು ನಿಷೇಧಿಸಿದೆ (ಮಂಗಳಸೂತ್ರ ಮತ್ತು ಕಾಲುಂಗುರ ಹೊರತುಪಡಿಸಿ) ಎಂದು ಮೈಸೂರು ನಗರ ಪೊಲೀಸ್ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವೈಹೆಚ್‌ಎಐ ರಾಷ್ಟ್ರೀಯ ಉಪಾಧ್ಯಕ್ಷರಾಗಿ ರವಿಕುಮಾರ್ ಆಯ್ಕೆ

ಮೈಸೂರು, ಫೆ.15– ಅಂತಾರಾಷ್ಟ್ರೀಯ ಯೂತ್ ಹಾಸ್ಟೆಲ್ ಅಸೋಸಿಯೇಷನ್ ಆಫ್ ಇಂಡಿಯಾ ರಾಷ್ಟ್ರೀಯ ಉಪಾಧ್ಯಕ್ಷರಾಗಿ ಮೈಸೂರಿನ ಗೋಕುಲಂ ನಿವಾಸಿ ಹೆಚ್.ರವಿಕುಮಾರ್ ಆಯ್ಕೆಯಾಗಿದ್ದಾರೆ.



ನವದೆಹಲಿಯಲ್ಲಿ ಫೆ. 11ರಂದು ನಡೆದ ಚುನಾವಣೆಯಲ್ಲಿ ಉಪಾಧ್ಯಕ್ಷ ಸ್ಥಾನಕ್ಕೆ ಭಾರತದಿಂದ 7 ಮಂದಿ ಸ್ಪರ್ಧಿಸಿದ್ದರು. ಇವರಲ್ಲಿ ಕರ್ನಾಟಕದಿಂದ ಸ್ಪರ್ಧಿಸಿದ್ದ ರವಿಕುಮಾರ್ 2ನೇ ಅತ್ಯಧಿಕ ಮತಗಳನ್ನು ಪಡೆದು ಆಯ್ಕೆಯಾಗಿದ್ದಾರೆ. 2010ರಿಂದ ಯೂತ್ ಹಾಸ್ಟೆಲ್ ಅಸೋಸಿಯೇಷನ್ ಸದಸ್ಯರಾಗಿರುವ ಇವರು, 2015ರಿಂದ ವೈಹೆಚ್‌ಎಐ ಮೈಸೂರು ಘಟಕದ ಅಧ್ಯಕ್ಷರಾಗಿ, ಎರಡು ವರ್ಷದಿಂದ ರಾಜ್ಯ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಇತ್ತೀಚೆಗೆ ಕತಾರ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ಸಮಾವೇಶದಲ್ಲಿ ದಕ್ಷಿಣ ಭಾರತದ ಏಕೈಕ ಪ್ರತಿನಿಧಿಯಾಗಿ ಭಾಗವಹಿಸಿದ್ದರು. ಅಲ್ಲದೆ ಪ್ರತಿ ವರ್ಷ ಸಂಘಟನೆ ನಡೆಸುವ ಐಎಎಸ್, ಐಆರ್‌ಎಸ್ ಮತ್ತು ಐಪಿಎಸ್ ಅಧಿಕಾರಿಗಳ ತರಬೇತಿ ಶಿಬಿರದ ಉಸ್ತುವಾರಿಯಾಗಿ ಕಾರ್ಯ ನಿರ್ವಹಿಸಿದ್ದಾರೆ. ಬಿಹಾರ್ ರಾಜ್ಯಪಾಲರಾದ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಅವರು ರವಿಕುಮಾರ್ ಅವರನ್ನು ಅಭಿನಂದಿಸಿದ್ದಾರೆ.

ಫೆ.18ರಂದು ನಿಮ್ಮೊಳಗಿನ ಆಧ್ಯಾತ್ಮಿಕತೆ ವಿಶೇಷ ಶಿಬಿರ

ಮೈಸೂರು, ಫೆ.15(ಜಿಎ)– ಯೂನಿವರ್ಸಲ್ ನಾಲೆಡ್ಜ್ ಟ್ರಸ್ಟ್ ವತಿಯಿಂದ ಫೆ.18ರಂದು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ನಗರದ ಹೋಟೆಲ್ ಕಿಂಗ್ಸ್‌ಕೋರ್ಟ್‌ನಲ್ಲಿ ನಿಮ್ಮೊಳಗಿನ ಆಧ್ಯಾತ್ಮಿಕತೆ ಎಂಬ ವಿಶೇಷ ಕಾರ್ಯಕ್ರಮ ಆಯೋಜಿಸಿರುವುದಾಗಿ ರೋಹನ್ ಎಂ.ಶೆಟ್ಟಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿ ಮಾತನಾಡಿದ ಅವರು, ಈಗಾಗಲೇ ಈ ಕಾರ್ಯಕ್ರಮವನ್ನು ಹುಬ್ಬಳ್ಳಿ, ಬೆಳಗಾವಿ, ಚಿಕ್ಕಮಗಳೂರು, ಶಿವಮೊಗ್ಗ, ಬೆಂಗಳೂರಿನಲ್ಲಿ ಯಶಸ್ಸು ಕಂಡಿದ್ದು, 6ನೇ ಕಾರ್ಯಕ್ರಮ ಮೈಸೂರಿನಲ್ಲಿ ಏರ್ಪಡಿಸಲಾಗಿದ್ದು, ಅಧ್ಯಾತ್ಮಿಕ ಎಂದರೇನು, ಇದನ್ನು ಅಳವಡಿಸಿಕೊಂಡರೆ ಜೀವನ ಹೇಗೆ ಆರೋಗ್ಯಕರವಾಗುತ್ತದೆ ಎಂಬುದರ ಬಗ್ಗೆ ಸಮಗ್ರವಾಗಿ ತಿಳಿಸಿಕೊಡಲಾಗುವುದು. ಎಲ್ಲರಿಗೂ ಉಚಿತ ಪ್ರವೇಶವಿದೆ ಹೆಚ್ಚಿನ ಮಾಹಿತಿಗಾಗಿ 9741299118 ಸಂಪರ್ಕಿಸಿ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಶಮಿಶಿರಿ, ಅಶೋಕ, ಡಾ.ಯೋಗಾನಂದ ಉಪಸ್ಥಿತರಿದ್ದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ರೋಹನ್ ಎಂ.ಶೆಟ್ಟಿ ಮಾತನಾಡಿದರು.

ಸುಯೋಗ್ ಆಸ್ಪತ್ರೆಯಲ್ಲಿ ಡಯಾಬಿಟಿಕ್ ಕ್ಲಬ್ ಸದಸ್ಯರಿಗೆ ವರ್ಷಪೂರ್ತಿ ಉಚಿತ ತಪಾಸಣೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಡಾ.ಎಸ್.ಪಿ.ಯೋಗಣ್ಣ ಮಾತನಾಡಿದರು.

ಮೈಸೂರು, ಫೆ.15(ಜಿಎ)–ಮೈಸೂರಿನ ರಾಮಕೃಷ್ಣನಗರದಲ್ಲಿರುವ ಸುಯೋಗ್ ಆಸ್ಪತ್ರೆ ವತಿಯಿಂದ ಮಧುಮೇಹ ಪೀಡಿತರಿಗಾಗಿ ಆಸ್ಪತ್ರೆಯ ಡಯಾಬಿಟಿಕ್ ಕ್ಲಬ್ ಸದಸ್ಯರಾಗುವವರಿಗಾಗಿ 3500 ರೂ.ಗಳ ವರ್ಷಪೂರ್ತಿ ಉಚಿತ ರೋಗ ತಪಾಸಣೆಯ ಕಾರ್ಯಕ್ರಮ ಆಯೋಜಿಸಲಾಗಿದೆ.

ಆಸ್ಪತ್ರೆ ಮುಖ್ಯಸ್ಥ ಡಾ.ಎಸ್.ಪಿ.ಯೋಗಣ್ಣ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿ, ಈ ಕಾರ್ಯಕ್ರಮಕ್ಕೆ ಫೆ.18ರ ಬೆಳಗ್ಗೆ 10ಕ್ಕೆ ಆಸ್ಪತ್ರೆ ಆವರಣದಲ್ಲಿ ಚಾಲನೆ ನೀಡಲಾಗುವುದು. ವಿಧಾನಪರಿಷತ್ ಸದಸ್ಯರಾದ ಸುಧಾಮದಾಸ್, ಡಾ.ಕ್ರಿಸ್‌ಮೂರ್ತಿ, ಡಾ.ಜಾವಿದ್ ಹಾಗೂ ಇನ್ನಿತರರು ಹಾಜರಿರುವರು ಎಂದರು. ಈ ಕಾರ್ಯಕ್ರಮದ ಪ್ರಯೋಜನ ಪಡೆಯುವವರು ಪ್ರತಿ ತಿಂಗಳು ಎಫ್‌ಬಿಎಸ್, ಪಿಪಿಬಿಎಸ್ ಪರೀಕ್ಷೆ, ಸಕ್ಕರೆ ಕಾಯಿಲೆ ತಜ್ಞರು ಮತ್ತು ಆಹಾರ ತಜ್ಞರೊಡನೆ ಸಮಾಲೋಚನೆ, ಮೂರು ತಿಂಗಳಿಗೊಮ್ಮೆ ಎಚ್‌ಬಿ1ಸಿ ಪರೀಕ್ಷೆ ಮೊದಲಾದ ಉಚಿತ ಸೇವೆ ಪಡೆಯಲಿದ್ದಾರೆ. ಜೊತೆಗೆ ಸಕ್ಕರೆ ಕಾಯಿಲೆ ಪೀಡಿತರಿಗೆ ಆಸ್ಪತ್ರೆಯಿಂದ ಕರೆ ಮಾಡಿ ನಿಗಾ ವಹಿಸಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಎಸ್.ನಂಜಪ್ಪ ಕೃಷ್ಣ, ಡಾ.ಆರ್. ರಾಜೇಂದ್ರಪ್ರಸಾದ್, ಡಾ.ಸೀಮಾ ಯೋಗಣ್ಣ ಡಾ.ಅಭಿಷೇಕ್ ಉಪಸ್ಥಿತರಿದ್ದರು.

ಆಕ್ಸಲ್ ಬ್ಲೇಡ್‌ನಿಂದ ಕುತ್ತಿಗೆ ಕೊಯ್ದು ಪತ್ನಿ ಕೊಂದಿದ್ದ ಪತಿಗೆ ಜೀವಾವಧಿ ಶಿಕ್ಷೆ, ದಂಡ

ಮಂಡ್ಯದ 4ನೇ ಅಧಿಕ ಜಿಲ್ಲಾ, ಸತ್ರ ನ್ಯಾಯಾಲಯ ಆದೇಶ

ಮಂಡ್ಯ, ಫೆ.15–ಪತ್ನಿಯ ಕತ್ತಿಗೆಯನ್ನು ಆಕ್ಸಲ್ ಬ್ಲೇಡ್‌ನಿಂದ ಕೊಯ್ದು ಭೀಕರವಾಗಿ ಕೊಲೆ ಮಾಡಿದ್ದ ಪತಿಗೆ ಕೋಣ ಜೀವಾವಧಿ ಶಿಕ್ಷೆ ಮತ್ತು 40 ಸಾವಿರ ದಂಡವನ್ನು ವಿಧಿಸಿ ಇಲ್ಲಿನ 4ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ತೀರ್ಪು ನೀಡಿದೆ.

ಮಳವಳ್ಳಿ ತಾಲೂಕಿನ ಕಲ್ಕುಣಿ ಗ್ರಾಮದ ವಾಸಿ ಕುಮಾರಸ್ವಾಮಿ ಅಲಿಯಾಸ್ ಕುಮಾರ ಎಂಬಾತನೇ ಶಿಕ್ಷೆಗೆ ಗುರಿಯಾದವನಾಗಿದ್ದು, ದಂಡ ಪಾವತಿಸಲು ವಿಫಲನಾದರೆ 6 ತಿಂಗಳ ಸಾದಾ ಸಜೆಯನ್ನು ಅನುಭವಿಸುವಂತೆ ನ್ಯಾಯಾಧೀಶರಾದ ನಿರ್ಮಲ .ಕೆ ಅವರು ತಮ್ಮ ತೀರ್ಪಿನಲ್ಲಿ ಸೂಚಿಸಿದ್ದಾರೆ.

ಮಳವಳ್ಳಿ ತಾಲೂಕಿನ ಕಲ್ಕುಣಿ ಗ್ರಾಮದ ಕುಮಾರಸ್ವಾಮಿ ಅಲಿಯಾಸ್ ಕುಮಾರ್(35) ನನ್ನು ಕಿರುಗಾವಲು ಗ್ರಾಮದ ರಾಜಣ್ಣನವರ ತಮ್ಮ ಹಿರಿಯ ಮಗಳಾದ ಸೌಮ್ಯಳನ್ನು 2009ರ ಮೇ 3ರಂದು ವಿವಾಹ ಮಾಡಿಕೊಟ್ಟಿದ್ದರು. ಕೆಲ ದಿನಗಳ ಕಾಲ ಚೆನ್ನಾಗಿ ನೋಡಿಕೊಳ್ಳುತ್ತಿದ್ದ ಕುಮಾರ ನಂತರದ ದಿನಗಳಲ್ಲಿ ಸೌಮ್ಯಳ ಜೊತೆ ಜಗಳ ತೆಗೆದು ಕುಡಿದು ಬಂದು ಗಲಾಟೆ ಮಾಡುತ್ತಿದ್ದರಿಂದ, ಆಕೆ 2019ರಲ್ಲಿ ಶಿವರಾತ್ರಿ ಹಬ್ಬದ ದಿನ ತನ್ನ ಮಕ್ಕಳಾದ ಜಯಂಧರ ಹಾಗೂ ಯಮುನಾಳನ್ನು ಕರೆದುಕೊಂಡು ತನ್ನ ತವರು ಮನೆಯಾದ ಕಿರುಗಾವಲಿಗೆ ಬಂದು ತನ್ನ ತಂದೆ ತಾಯಿಯೊಂದಿಗೆ ವಾಸವಾಗಿದ್ದರು. ಕಿರುಗಾವಲಿನಿಂದ ಸೌಮ್ಯಾ ಮಳವಳ್ಳಿಯ ಬಟ್ಟೆ ಅಂಗಡಿ ಕೆಲಸಕ್ಕೆ ಹೋಗಿ ಬರುತ್ತಿದ್ದರು. 2019ರ ಜೂನ್ 23ರಂದು ರಾತ್ರಿ 9 ಗಂಟೆಯಲ್ಲಿ ಕುಮಾರ, ಸೌಮ್ಯಾಳು ವಾಸವಾಗಿದ್ದ ರಾಜಣ್ಣನವರ ಮನೆಗೆ ಬಂದು ಊಟ ಮಾಡಿ, ಹಿಂದಿನ ಮನೆಯಲ್ಲಿ ಸೌಮ್ಯಾ ಒಟ್ಟಿಗೆ ಮಲಗಿದ್ದು, ಮಾರನೇ ದಿನ (2019ರ ಜೂ.24) ಬೆಳಗ್ಗೆ ಆರೋಪಿಯು ಆಕ್ಸಲ್ ಬ್ಲೇಡಿನಿಂದ ಸೌಮ್ಯಾಳ ಕತ್ತನ್ನು ಕೊಯ್ದು ಕೊಲೆ ಮಾಡಿದ್ದ. ಈ ಸಂಬಂಧ ಪ್ರಕರಣ ದಾಖಲಾಗಿತ್ತು. ಮಳವಳ್ಳಿ ಠಾಣಾಧಿಕಾರಿ ಎಂ.ಧರ್ಮೇಂದ್ರ ಆರೋಪಿ ಕುಮಾರಸ್ವಾಮಿ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

4ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ನಿರ್ಮಲ.ಕೆ ಅವರ ಮುಂದೆ ವಿಚಾರಣೆ ನಡೆದು, ಆರೋಪಿ ಕುಮಾರಸ್ವಾಮಿ ಮೇಲಿನ ಆರೋಪ ಸಾಕ್ಷ್ಯಾಧಾರಗಳಿಂದ ರುಜುವಾತಾದ ಹಿನ್ನೆಲೆಯಲ್ಲಿ ಜೀವಾವಧಿ ಶಿಕ್ಷೆ ಮತ್ತು 40 ಸಾವಿರ ರೂ. ದಂಡ ವಿಧಿಸಿದ್ದು, ದಂಡ ಪಾವತಿಸಲು ತಪ್ಪಿದಲ್ಲಿ 6 ತಿಂಗಳ ಸಾದಾ ಶಿಕ್ಷೆ ಅನುಭವಿಸಬೇಕೆಂದು ಎಂದು ತೀರ್ಪು ನೀಡಿದ್ದಾರೆ. ಅಭಿಯೋಜನೆಯ ಪರವಾಗಿ ಸರ್ಕಾರಿ ಅಭಿಯೋಜಕಿ ಜಯಶ್ರೀ ಎಸ್.ಶೆಣೈ ವಾದ ಮಂಡಿಸಿದ್ದರು.

ಕೆರಗೋಡು ಧ್ವಜ ವಿವಾದ ಹಿನ್ನೆಲೆಯಲ್ಲಿ

ಶಾಂತಿ–ಸೌಹಾರ್ದತೆಗಾಗಿ ಪ್ರಗತಿಪರರ ಧರಣಿ

ಜೆಡಿಎಸ್ ಮೇಲೆ ಸಂಘ ಪರಿವಾರ, ಬಿಜೆಪಿ ಸವಾರಿ: ದೇವನೂರ ಮಹಾದೇವ ಕಳವಳ


ದೇವನೂರ ಮಹಾದೇವ

ಮಂಡ್ಯ,ಫೆ.15– ಜಾತ್ಯಾತೀತತವನ್ನು ತುಳಿದು ಚಾತುರ್ವರ್ಣ ಸಮಾಜವನ್ನೇ ತನ್ನ ದೇವರು ಎಂದುಕೊಂಡಿದ್ದ ಜೆಡಿಎಸ್ ರಾಷ್ಟ್ರೀಯ ಸಂಘಪರಿವಾರ ಹಾಗೂ ಬಿಜೆಪಿ ಪಕ್ಷವನ್ನು ಅಲಂಗಿಸಿಕೊಂಡು ನೈತಿಕವಾಗಿ ಪತನವಾಗುತ್ತಿದೆ. ಅಷ್ಟೇ ಅಲ್ಲದೇ ಜೆಡಿಎಸ್‌ನ ಬೆನ್ನು ಮತ್ತು ತಲೆಯ ಮೇಲೆ ಸಂಘ ಪರಿವಾರ, ಬಿಜೆಪಿ ಭಿದ್ರಕಾರಿ ಶಕ್ತಿ ಸವಾರಿ ಮಾಡುತ್ತಿವೆ ಎಂದು ಹಿರಿಯ ಸಾಹಿತಿ ದೇವನೂರ ಮಹಾದೇವ ಕಳವಳ ವ್ಯಕ್ತಪಡಿಸಿದ್ದಾರೆ.

ಗುರುವಾರ ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಕೆರಗೋಡು ಧ್ವಜ ವಿವಾದದ ಹಿನ್ನೆಲೆಯಲ್ಲಿ ಉಂಟಾಗಿದ್ದ ಘಟನೆಯನ್ನು ಖಂಡಿಸಿ, ಶಾಂತಿ, ಸೌಹಾರ್ದತೆ, ಸಹಬಾಳ್ವೆಗಾಗಿ ಪ್ರಗತಿಪರರು ಧರಣಿಯಲ್ಲಿ ಭಾಗವಹಿಸಿ ಮಾತನಾಡಿ ಅವರು, ಪ್ರಧಾನಮಂತ್ರಿಯಾಗಿ ಒಳ್ಳೆಯ ಕೆಲಸ ಮಾಡಿದ ಎಚ್.ಡಿ.ದೇವೇಗೌಡರಿಗೆ ಇಂತಹ ಪರಿಸ್ಥಿತಿ ಬರಬಾರದಾಗಿತ್ತು. ಮಕ್ಕಳು ಮತ್ತು ಸೊಸೆಯಂದಿರ ದಿಗ್ಬಂಧನದಲ್ಲಿ ಗೌಡರಿದ್ದು, ಅವರ ಮನೆತನದಿಂದ ಇಂತಹ ಅನಾಹುತ ಆಗಬಾರದಿತ್ತು. ಈಗ ಜಾತ್ಯಾತೀತ ಜನತಾದಳ ಜಾತ್ಯಾತೀತವಾಗಿ ಉಳಿದಿಲ್ಲ ಎಂದು ಹೇಳಿದರು.


ಮಂಡ್ಯದ ಜಿಲ್ಲಾಧಿಕಾರಿಗಳ ಕಚೇರಿ ಬಳಿ ಧರಣಿ ನಡೆಸುತ್ತಿರುವ ಪ್ರಗತಿಪರರು.

ಬಿಜೆಪಿ ಜೊತೆ ಜೆಡಿಎಸ್ ಮೈತ್ರಿ ಮಾಡಿಕೊಂಡಿದ್ದರಿಂದ ಕೆರಗೋಡಿನ ಹನುಮ ಧ್ವಜ ಪ್ರಕರಣ ನಡೆಯಲು ಕಾರಣವಾಗಿದೆ. ಮಂಡ್ಯ ನೆಲದ ಸೊಗಡನ್ನು ಅರಿಯಲು ದೇವೇಗೌಡರ ಮನೆತನ ಸೋತಿದೆ ಎಂದು ಅವರು ಟೀಕಿಸಿದರು. ಅಪ್ರತಿಮ ದೇಶಪ್ರೇಮಿ ಟಿಪ್ಪು ಸುಲ್ತಾನ್ ವಿರುದ್ಧ ಕುಚೇಷ್ಟೆಯ ಕಟ್ಟು ಕಥೆಯ ವ್ಯಕ್ತಿಗಳಾದ ಉರಿಗೌಡ, ನಂಜೇಗೌಡ ನೆಗೆದು ಬಿದ್ದ ನಂತರ ದೇವರು, ಧರ್ಮ ಧ್ವಜ, ಬಣ್ಣಗಳನ್ನು ಹಣ ಮತ್ತು ಅಧಿಕಾರಕ್ಕಾಗಿ ದುರ್ಬಳಕೆ ಮಾಡಿಕೊಂಡ ಪರಿಣಾಮವೇ ಹನುಮ ಧ್ವಜ ಬಂದು ಕೆರಗೋಡು ಗ್ರಾಮವನ್ನು ಛಿದ್ರ ಮಾಡಿದೆ. ಅಲ್ಲಿಗೂ ದೆವ್ವ, ಪಿಶಾಚಿಗಳು ಪ್ರವೇಶ ಮಾಡಿವೆ. ಸಂತರು ನುಡಿದ್ದಂತೆ ಐಕ್ಯತೆಯೇ ದೈವ, ಛಿದ್ರತೆಯೇ ದೆವ್ವ ಜಿಲ್ಲೆಯಲ್ಲಿ ಛಿದ್ರತೆ ಮತ್ತು ಭಿನ್ನಭಾವ ಹುಟ್ಟುತ್ತಿವೆ ಎಂದರೆ ದೆವ್ವ ಮತ್ತು ಪಿಶಾಚಿಗಳು ಪ್ರವೇಶ ಮಾಡಿವೆ ಎಂದು ಅರ್ಥ. ಇದನ್ನ ಮಂಡ್ಯ ನೆಲದಲ್ಲಿ ಯಾರೂ ನಿರೀಕ್ಷಿಸಲಿರಲಿಲ್ಲ ಎಂದರು.

ಕೆರಗೋಡು ಪ್ರಕರಣದ ವಿಚಾರದಲ್ಲಿ ಅದನ್ನು ನೋಡುವುದು ಬೇಡ, ನಮ್ಮನ್ನು ನಾವು ನೋಡಿಕೊಳ್ಳೋಣ, ನಾವೆಲ್ಲರೂ ಸೇರಿ ಏನೇನು ಮಾಡಬೇಕಿತ್ತು ಎಷ್ಟೆಷ್ಟು ಮಾಡಬೇಕಿತ್ತು ಅದನ್ನ ಮಾಡಲಿಲ್ಲ, ಅದರ ಪರಿಣಾಮವೇ ಪ್ರಕರಣ ನಡೆದಿದೆ. ಅವರು ಪಂಜು ಹಿಡಿದುಕೊಂಡು ಸಮಾಜದಲ್ಲಿ ಬೆಂಕಿ ಹಚ್ಚಲು ಬಂದರೆ ನಾವು ಮನೆ ಮನೆಗಳಲ್ಲಿ ಸಹಬಾಳ್ವೆಯ ಹಣತೆಯ ಬೆಳಕು ಬೆಳಗಿಸೋಣ ಎಂದು ಕರೆ ನೀಡಿದರು.


2024ರ ಲೋಕಸಭೆ ಚುನಾವಣೆ ಎದುರಾಗುತ್ತಿದ್ದು, ಆರ್‌ಎಸ್‌ಎಸ್‌ನ ಗೋಳ್ವರ್ಕರ್ ಚಾತುರ್ವರ್ಣ ಸಮಾಜವೇ ದೇವರು ಎಂದಿದ್ದರು. ಇದನ್ನೇ ಸಾವರ್ಕರ್ ಹಿಂದುತ್ವ ಅನ್ನುತ್ತಾರೆ. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಇದನ್ನೇ ಅನುಷ್ಠಾನ ಮಾಡಲು ಹೊರಟಿದ್ದು, ಶೂದ್ರರು, ದುಡಿಯುವ ಜನರು ಮೇಲ್ವರ್ಗದ ಜನತೆಗೆ ಸೇವಕರಾಗಿರಬೇಕು. ಕಾಲಾಳುಗಳಾಗಿರಬೇಕು ಎಂಬುದೇ ಇವರ ಮರ್ಮ. ಇದನ್ನ ಜನತೆಗೆ ಮನದಟ್ಟು ಮಾಡಿಕೊಳ್ಳಬೇಕಾಗಿದೆ ಎಂದು ಹೇಳಿದರು.

ಆರ್‌ಎಸ್‌ಎಸ್‌ನ ಬಿಜೆಪಿ ಸರ್ಕಾರ ಮತ್ತೆ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ ಜನಸಮುದಾಯಗಳಿಗೆ ದನಿಯಾಗುವ, ಆಸರೆಯಾಗುವ ಜನಾಂದೋಲನಗಳ ಕಾಲು ಕತ್ತರಿಸುತ್ತಾರೆ. ಕುಂಟುತ್ತ ನಡೆಯುತ್ತಿರುವ ಮಾಧ್ಯಮಗಳನ್ನು ತೆವಳುತ್ತಾ ನಡೆಯುವಂತೆ ಮಾಡಲಾಗುತ್ತದೆ. ಇವರದ್ದು ಆಡಿದ್ದೇ ಆಟ, ನಡೆದಿದ್ದೇ ದಾರಿ ಎಂಬಂತೆ ಒಂಟಿಸಲಗನಂತೆ ಓಡಾಡುತ್ತಿರುವ ಇಂಥವರು ಅಧಿಕಾರಕ್ಕೆ ಬಂದರೆ ಜನತೆಗೆ ಉಳಿಗಾಲ ಉಂಟೆ ಎಂದು ಪ್ರಶ್ನಿಸಿದರು.

ಕಾರ್ಯಕ್ರಮದಲ್ಲಿ ಸಾಹಿತಿ ಕಾಳೇಗೌಡ ನಾಗವಾರ, ಪ್ರಗತಿಪರ ಮುಖಂಡರಾದ ಜಿ.ಎನ್.ನಾಗರಾಜ್, ರಾಮಚಂದ್ರಪ್ಪ, ಜಗದೀಶ್‌ಕೊಪ್ಪ, ವಾಯಿಗೌಡ, ಜನಾರ್ಧನ್, ಆನಂತ್‌ನಾಯಕ, ದಸಂಸ ಗುರುಪ್ರಸಾದ್ ಕೆರಗೋಡು, ಸುನಂದ ಜಯರಾಮ್, ಎ.ಎಲ್. ಕೃಷ್ಣೇಗೌಡ, ಸುರೇಂದ್ರ ಕೌಲಗಿ, ಪ್ರೊ.ಹುಲ್ಕೆರೆ ಮಹದೇವು, ರೈತ ಸಂಘದ ಬಡಗಲಪುರ ನಾಗೇಂದ್ರ, ಎ.ಎಲ್.ಕೆಂಪೂಗೌಡ, ಕೃಷಿ ಕೂಲಿಕಾರರ ಸಂಘದ ಪುಟ್ಟಮಾದು, ಸಿಐಟಿಯು ಸಿ.ಕುಮಾರಿ, ಭರತ್‌ರಾಜ್, ಜನವಾದಿ ಮಹಿಳಾ ಸಂಘಟನೆಯ ಮಂಜುಳಾ, ಮಹಿಳಾ ಮುನ್ನಡೆಯ ಪೂರ್ಣಿಮಾ, ಕರ್ನಾಟಕ ಜನಶಕ್ತಿಯ ಸಿದ್ದರಾಜು ಸೇರಿದಂತೆ ನೂರಾರು ಮುಖಂಡರು ಭಾಗವಹಿಸಿದ್ದರು.

ಸಾವನ್ನಪ್ಪಿದ್ದ ವ್ಯಕ್ತಿಯ ಹೆಸರಿನಲ್ಲಿದ್ದ ಜಮೀನು ಬೇರೆಯವರಿಗೆ ಮಾರಾಟ


34 ವರ್ಷದ ಹಿಂದಿನ ನಕಲಿ ದಾಖಲೆ ಸೃಷ್ಟಿಸಿ ಅಧಿಕಾರಿಗಳ ಕೈಚಳಕ, ಜಿಲ್ಲಾಧಿಕಾರಿಗಳಿಗೆ ದೂರು


34 ವರ್ಷಗಳ ಹಿಂದೆ ಮೃತಪಟ್ಟಿರುವ ದೊಳ್ಳಶೆಟ್ಟಿ

ಕೆ.ಆರ್.ಪೇಟೆ,ಫೆ.15– 34 ವರ್ಷಗಳ ಹಿಂದೆ ಸಾವನ್ನಪ್ಪಿದ್ದ ವ್ಯಕ್ತಿಯ ಹೆಸರಿನಲ್ಲಿದ್ದ ಜಮೀನನ್ನು ಅಧಿಕಾರಿಗಳು ಸುಳ್ಳು ದಾಖಲೆ ಸೃಷ್ಟಿಸಿ ಸತ್ತಿರುವ ವ್ಯಕ್ತಿಯ ಕುಟುಂಬಕ್ಕೆ ಸೇರಬೇಕಾದ ಸ್ವತ್ತನ್ನು ಬೇರೊಬ್ಬರಿಗೆ ಮಾರಾಟ ಮಾಡಿರುವ ಘಟನೆ ಕೆ.ಆರ್.ಪೇಟೆ ಪಟ್ಟಣದ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ನಡೆದಿದೆ.

ಪೊಲೀಸರು ಆರೋಪಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸದೆ ಎನ್‌ಸಿಆರ್ ನೀಡಿ ಆರೋಪಿಗಳ ರಕ್ಷಣೆಗೆ ಮುಂದಾಗಿದ್ದಾರೆ ಎಂಬ ಆರೋಪ ಕೇಳಿ ಬಂದಿದೆ.

ತಾಲೂಕಿನ ಕಿಕ್ಕೇರಿ ಗ್ರಾಮದ ದೊಳ್ಳಶೆಟ್ಟಿ ಉರುಫ್ ಹನುಮಂತಶೆಟ್ಟಿ ಅವರ ಹೆಸರಿನಲ್ಲಿ ಜುಜ್ಜಲಕ್ಯಾತನಹಳ್ಳಿ ಗ್ರಾಮದ ಎಲ್ಲೆಯಲ್ಲಿ (ಸರ್ವೆ ನಂ.8/ಡಿ. 008.8 ಗುಂಟೆ) ಜಮೀನು ಇತ್ತು. ಆದರೆ ಅವರು ಸುಮಾರು 34 ವರ್ಷಗಳ ಹಿಂದೆ ನಿಧನರಾಗಿದ್ದರು. ಸದರಿ ಆಸ್ತಿಯನ್ನು ಜುಜ್ಜಲಕ್ಯಾತನಹಳ್ಳಿ ಗ್ರಾಮದ ಲೇಟ್ ಕೃಷ್ಣೇಗೌಡರ ಮಗ ರಂಗೇಗೌಡ ಎಂಬುವವರು ದಿನಾಂಕ:20–03–2023ರುದು ಕಿಕ್ಕೇರಿ ಹೋಬಳಿಯ ಚೌಡೇನಹಳ್ಳಿ ಗ್ರಾಮದ ನಂಜೇಗೌಡ ಅವರನ್ನು ಕರೆದುಕೊಂಡು ಹೋಗಿ (ಆಧಾರ್ ನಂಬರ್ 632744522581) ಶುದ್ಧಕ್ರಯವನ್ನು ಕೆ.ಆರ್.ಪೇಟೆ ಪಟ್ಟಣದ ಉಪ ನೋಂದಣಾಧಿಕಾರಿಗಳ ಕಚೇರಿಯಲ್ಲಿ ಮಾಡಿಸಿಕೊಂಡಿದ್ದಾರೆ. ಅಸಲಿಗೆ ಬರೆದುಕೊಟ್ಟ ವ್ಯಕ್ತಿಯ ಬಳಿ ಇರುವ ಆಧಾರ್ ಕಾರ್ಡಿಗೂ, ಆರ್.ಟಿ.ಸಿ.ಯಲ್ಲಿರುವ ದೊಳ್ಳಶೆಟ್ಟಿ ಉರುಫ್ ಹನುಮಂತಶೆಟ್ಟಿ ಅವರಿಗೂ ಯಾವುದೇ ಹೋಲಿಕೆ ಇರುವುದಿಲ್ಲ. ಆದರೂ ಸಹ ಅಂದಿನ ಉಪನೋಂದಣಾಧಿಕಾರಿ ಜಿ.ಎಸ್. ಕುಮಾರಸ್ವಾಮಿ, ದಸ್ತಾವೇಜು ಬರಹಗಾರ ಮುರುಗೇಶ್, ಸರ್ವೆಯರ್ ಹೆಚ್.ಟಿ.ಕುಮಾರ್ ಲಂಚದ ಆಮಿ ಷಕ್ಕೆ ಒಳಗಾಗಿ ಸುಳ್ಳು ದಾಖಲೆ ಸೃಷ್ಟಿಸಿ ಮಾರಾಟ ಮಾಡಲು ಪೂರ್ಣ ಸಹಕಾರ ನೀಡಿದ್ದಾರೆ ಎಂದು ಜಿಲ್ಲಾಧಿಕಾರಿಗಳಿಗೆ ನೀಡಿರುವ ದೂರಿನಲ್ಲಿ ತಿಳಿಸಲಾಗಿದೆ.


ದೊಳ್ಳಶೆಟ್ಟಿ ಮರಣ ದೃಢೀಕರಣ ಪತ್ರ.

ಮೃತ ದೊಳ್ಳಶೆಟ್ಟಿ ಉರುಫ್ ಹನುಮಂತ ಶೆಟ್ಟಿ ಕುಟುಂಬದವರು ತಮ್ಮ ಜಮೀನನ್ನು ಪೌತಿ ಖಾತೆ ಮಾಡಿಸಿಕೊಳ್ಳಲು ಅರ್ಜಿ ಸಲ್ಲಿಸಲು ಹೋದಾಗ ತಮ್ಮ ತಂದೆಯವರ ಹೆಸರಿನಲ್ಲಿದ್ದ ಜಮೀನು ಬೇರೆಯವರ ಹೆಸರಿಗೆ ವರ್ಗಾವಣೆಗೊಂಡಿರುವುದನ್ನು ತಿಳಿದು ಆಘಾತಗೊಂಡಿದ್ದಾರೆ. ಕೂಡಲೇ ವಾರಸುದಾರರಾದ ಕೆ.ಹೆಚ್. ಕೃಷ್ಣಮೂರ್ತಿ ಅವರು ಕಿಕ್ಕೇರಿ ಪೊಲೀಸ್ ಠಾಣೆಗೆ ದೂರು ನೀಡಿದಾಗ ಕಿಕ್ಕೇರಿ ಪೊಲೀಸರು ಸುಳ್ಳು ದಾಖಲೆ ಸೃಷ್ಟಿಸಿ ಆಸ್ತಿ ಪರಭಾರೆ ಮಾಡಿರುವ ಅಧಿಕಾರಿಗಳು ಹಾಗೂ ಇತರ ಆರೋಪಿಗಳ ವಿರುದ್ಧ ಸೂಕ್ತ ದಾಖಲೆ ಇದ್ದರೂ ಸಹ ಕ್ರಿಮಿನಲ್ ಪ್ರಕರಣ ದಾಖಲಿಸದೇ ಇರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ.

ಕೂಡಲೇ ಜಿಲ್ಲಾಧಿಕಾರಿಗಳು ಈ ವಂಚನೆ ಜಾಲದ ವಿರುದ್ಧ ಕ್ರಮ ಕೈಗೊಂಡು ಈ ವಂಚನೆ ಜಾಲದಲ್ಲಿ ಶಾಮೀಲಾಗಿರುವ ಅಧಿಕಾರಿಗಳು ಹಾಗೂ ಇತರೆ ಆರೋಪಿಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವ ಮೂಲಕ ನಮಗೆ ನ್ಯಾಯ ಒದಗಿಸಿಕೊಡಬೇಕು ಹಾಗೂ ಮುಂದೆ ಈ ರೀತಿ ಯಾರಿಗೂ ಅನ್ಯಾಯವಾಗದಂತೆ ಆರೋಪಿ ಗಳ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು ಎಂದು ಮೃತ ದೊಳ್ಳಶೆಟ್ಟಿ ಉರುಫ್ ಹನುಮಂತಶೆಟ್ಟಿ ಅವರ ಪುತ್ರ ನೊಂದ ರೈತ ಕೆ.ಹೆಚ್.ಕೃಷ್ಣಮೂರ್ತಿ ಜಿಲ್ಲಾಧಿಕಾರಿಗಳಿಗೆ ನೀಡಿರುವ ದೂರಿನಲ್ಲಿ ಆಗ್ರಹಿಸಿದ್ದಾರೆ.

ಕಾಂಗ್ರೆಸ್ ಮುಖಂಡ ಎಂ.ಡಿ.ಜಯರಾಂ ನಿಧನ



ಮಂಡ್ಯ: ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡ ಎಂ.ಡಿ. ಜಯರಾಂ (73) ನಿಧನರಾಗಿದ್ದಾರೆ.

ವಯೋಸಹಜ ಅನಾರೋಗ್ಯದಿಂದ ಬೆಂಗಳೂರಿನ ಆಸ್ಪತ್ರೆಯಲ್ಲಿ ಇಹಲೋಕ ತ್ಯಜಿಸಿದ್ದು, ಪತ್ನಿ, ಪುತ್ರ, ಪುತ್ರಿಯರು ಸೇರಿ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ವಿದ್ಯಾನಗರದಲ್ಲಿರುವ ಅವರ ಸ್ವಗೃಹಕ್ಕೆ ಪಾರ್ಥಿವ ಶರೀರವನ್ನು ತಂದು ಸಾರ್ವಜನಿಕರ ದರ್ಶನಕ್ಕೆ ಅವಕಾಶ ಮಾಡಿಕೊಡಲಾಗುವುದು. ಶುಕ್ರವಾರ ಮಂಡ್ಯದ ಕುವೆಂಪುನಗರದಲ್ಲಿರುವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬ ವರ್ಗದವರು ತಿಳಿಸಿದ್ದಾರೆ.

ಎಂ.ಡಿ ಜಯರಾಮ್ ಕಾಂಗ್ರೆಸ್ ಪಕ್ಷದಲ್ಲಿ ರಾಜಕೀಯ ಜೀವನ ನಡೆಸುತ್ತಿದ್ದರು. ಮಂಡ್ಯ ನಗರಸಭೆಗೆ ಎರಡು ಬಾರಿ ಚುನಾಯಿತ ಸದಸ್ಯರಾಗಿದ್ದರು. ಎಪಿಎಂಸಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದು ಕಾಂಗ್ರೆಸ್ ಪಕ್ಷದಲ್ಲಿ ಎಸ್ಸಿ–ಎಸ್ಟಿ ವಿಭಾಗದ ಅಧ್ಯಕ್ಷರಾಗಿದ್ದರು. ಕೆಪಿಸಿಸಿ ಸದಸ್ಯರಾಗಿದ್ದ ಇವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಆತ್ಮೀಯರಲ್ಲಿ ಒಬ್ಬರಾಗಿದ್ದರು. ರಾಜಕೀಯದ ಜೊತೆಗೆ ಶಿಕ್ಷಣ ಕ್ಷೇತ್ರದಲ್ಲಿಯೂ ಸೇವೆ ಮಾಡಿದ್ದ ಇವರು ಸಿದ್ದಾರ್ಥ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಯಾಗಿದ್ದರು.

ಹುಣಸೂರು–ಕಾಳಿದಾಸ ರಸ್ತೆಗಳಿಗೆ ನೂತನ ಸಂಪರ್ಕ ರಸ್ತೆ

● ಪ್ರಗತಿಯಲ್ಲಿದೆ ಕಾಮಗಾರಿ ● ಇನ್ನೊಂದು ತಿಂಗಳಲ್ಲಿ ಪೂರ್ಣಗೊಳ್ಳುವ ಸಾಧ್ಯತೆ ● ಮುಡಾದಿಂದ ಅಂದಾಜು ಒಂದೂವರೆ ಕೋಟಿ ರೂ. ವೆಚ್ಚದಲ್ಲಿ ರಸ್ತೆ ನಿರ್ಮಾಣ

ಮೈಸೂರು,ಫೆ15(ಪಿಎಂ)–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ವತಿಯಿಂದ ನಗರದ ಹುಣಸೂರು ರಸ್ತೆ ಮತ್ತು ಕಾಳಿದಾಸ ರಸ್ತೆಗೆ ಸಂಪರ್ಕ ಕಲ್ಪಿಸುವ ನೂತನ ರಸ್ತೆ ನಿರ್ಮಾಣಗೊಳ್ಳುತ್ತಿದೆ. ಕಳೆದ 6 ತಿಂಗಳಿಂದ ಈ ನೂತನ ರಸ್ತೆ ನಿರ್ಮಾಣ ಕಾಮಗಾರಿ ನಡೆಯುತ್ತಿದ್ದು, ಇನ್ನೊಂದು ತಿಂಗಳಲ್ಲಿ ಪೂರ್ಣ ಪ್ರಮಾಣದಲ್ಲಿ ರಸ್ತೆ ಸೇವೆ ಲಭ್ಯವಾಗಲಿದೆ.

ನಗರದ ವಿಜಯಶ್ರೀಪುರ ಎದುರಿನಲ್ಲಿ ಹುಣಸೂರು ರಸ್ತೆಯಿಂದ ಕಾಳಿದಾಸ ರಸ್ತೆಗೆ ಈ ನೂತನ ರಸ್ತೆ ಸಂಪರ್ಕ ಕಲ್ಪಿಸಲಿದೆ. ಚದುರಂಗ ರಸ್ತೆ (ಜೆಸಿ ಕಾಲೇಜು ರಸ್ತೆ) ಮತ್ತು ಹುಣಸೂರು ರಸ್ತೆ ಜಂಕ್ಷನ್‌ನಿಂದ ಅನತಿ ದೂರದಲ್ಲಿ ನೂತನ ರಸ್ತೆ ನಿರ್ಮಾಣಗೊಳ್ಳುತ್ತಿದ್ದು, ವಿಜಯಶ್ರೀಪರದಲ್ಲಿ ಹಾದುಹೋಗುವ ಈ ನೂತನ ರಸ್ತೆ ಅಂತಿಮವಾಗಿ ಕಾಳಿದಾಸ ರಸ್ತೆಗೆ ಸಂಪರ್ಕ ಕಲ್ಪಿಸಲಿದೆ. ಈ ನೂತನ ರಸ್ತೆಗೆ ಕಾಳಿದಾಸ ರಸ್ತೆಯಿಂದ ಈಗಾಗಲೇ ರಸ್ತೆ ನಿರ್ಮಾಣಗೊಂಡಿದೆ.



ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಮುಡಾ ವಲಯ 4ರ ವಲಯಾಧಿಕಾರಿ ಸಂಪತ್ ಕುಮಾರ್, ಸಿಡಿಪಿ (ಸಮಗ್ರ ಅಭಿವೃದ್ಧಿ ಯೋಜನೆ) ಅಡಿಯಲ್ಲಿ ಈ ನೂತನ ರಸ್ತೆ ನಿರ್ಮಿಸಲಾಗುತ್ತಿದೆ. ಮುಡಾ ಮಹಾಯೋಜನೆ ಹೆಡ್‌ನಡಿ ಈ ರಸ್ತೆ ನಿರ್ಮಾಣ ಕೈಗೆತ್ತಿಕೊಳ್ಳಲಾಗಿದೆ. ಎರಡು ವರ್ಷಗಳ ಹಿಂದೆಯೇ ಈ ರಸ್ತೆ ನಿರ್ಮಾಣಕ್ಕೆ ಅನುಮೋದನೆ ದೊರೆತ್ತಿತ್ತು. ಮುಡಾದಿಂದ ಟೆಂಡರ್ ಆಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ಸುಮಾರು 800 ಮೀಟರ್ ಉದ್ದದ ರಸ್ತೆ ಇದಾಗಿದೆ ಎಂದು ತಿಳಿಸಿದರು. ಕಳೆದ 6 ತಿಂಗಳಿಂದ ಕಾಮಗಾರಿ ನಡೆಯುತ್ತಿದೆ. ಇನ್ನೊಂದು ತಿಂಗಳಲ್ಲಿ ಪೂರ್ಣ ಪ್ರಮಾಣದಲ್ಲಿ ರಸ್ತೆ ನಿರ್ಮಾಣಗೊಳ್ಳುವ ಅಂದಾಜು ಇದೆ. ರಸ್ತೆಯ ಅಗಲ ಐದೂವರೆ ಮೀಟರ್ (ಡಾಂಬರೀಕರಣ ಜಾಗ) ಇರಲಿದ್ದು, ಉಳಿದಂತೆ ರಸ್ತೆಯ ಎರಡೂ ಬದಿ ಸೇರಿದಂತೆ 12 ಮೀಟರ್ ಅಗಲ ಇರಲಿದೆ ಡಾಂಬರೀಕರಣ ಇರುವ ಐದೂವರೆ ಮೀಟರ್ ವ್ಯಾಪ್ತಿಯಲ್ಲಿ ವಾಹನ ಸಂಚಾರ ಮಾಡಬಹುದು.

ಹುಣಸೂರು ರಸ್ತೆ ಜಂಕ್ಷನ್ ಬಳಿಯಲ್ಲಿ ಈ ರಸ್ತೆಗೆ ಚರಂಡಿಗೆ ಪೈಪ್ ಅಳವಡಿಸಿದ್ದು, ಇದರ ಹೊರತಾಗಿ ಯಾವುದೇ ಸೇತುವೆ ಈ ರಸ್ತೆಯಲ್ಲಿ ಬರುವುದಿಲ್ಲ. ಮುಡಾ ವತಿಯಿಂದ ಅಂದಾಜು ಒಂದೂವರೆ ಕೋಟಿ ರೂ. ವೆಚ್ಚದಲ್ಲಿ ರಸ್ತೆ ನಿರ್ಮಾಣ ಮಾಡಲಾಗುತ್ತಿದೆ. ಈ ನೂತನ ರಸ್ತೆಯಿಂದ ಹುಣಸೂರು ರಸ್ತೆ ಮತ್ತು ಕಾಳಿದಾಸ ರಸ್ತೆಗೆ ಸಂಪರ್ಕ ಸಾಧ್ಯವಾಗಲಿದ್ದು, ಭವಿಷ್ಯದಲ್ಲಿ ಈ ನೂತನ ರಸ್ತೆಯ ಪ್ರದೇಶವನ್ನು ವಾಣಿಜ್ಯ ವಹಿವಾಟು ಸ್ಥಳವಾಗಿ ಅಭಿವೃದ್ಧಿಪಡಿಸುವ ಉದ್ದೇಶ ಹೊಂದಲಾಗಿದೆ. ವಿಜಯಶ್ರೀಪುರಕ್ಕೆ ಸೇರಿದ ಪ್ರದೇಶ ಇದಾಗಿದೆ. ರಸ್ತೆ ಬದಿಯಲ್ಲಿ ಮಳೆ ನೀರು ಚರಂಡಿ ಭವಿಷ್ಯದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ. ಮುಂದಿನ ದಿನಗಳಲ್ಲಿ ಬಡಾವಣೆ ಅಭಿವೃದ್ಧಿಯಾದ ಬಳಿಕ ಚರಂಡಿ ನಿರ್ಮಿಸಲಾಗುತ್ತದೆ ಎಂದು ಅವರು ತಿಳಿಸಿದರು.

ಒಂದನೇ ಪುಟದಿಂದ

ಬೆಂದ ದೇಹದ ನೋವಿಂದ ನರಳುವ ದುಸ್ಥಿತಿ...

ಸಿಡಿಸುವ ತಾಲೀಮು ವೇಳೆ ಬ್ಯಾಗ್‌ನಲ್ಲಿದ್ದ ಸಿಡಿಮದ್ದುಗಳು ಸಿಡಿದು ತೀವ್ರ ಸ್ವರೂಪದಲ್ಲಿ ಗಾಯಗೊಂಡು ಬೆಂಕಿಯಲ್ಲಿ ಬೆಂದಿರುವ ಸಿಎಆರ್ ಸಿಬ್ಬಂದಿ ಸಿದ್ದೇಗೌಡರ ಸ್ಥಿತಿ ಚಿಂತಾಜನಕವಾಗಿದ್ದು, ತಾವು ಸೇವೆ ಸಲ್ಲಿಸುತ್ತಿರುವ ಪೊಲೀಸ್ ಇಲಾಖೆಯ ಅನುಗ್ರಹ ಹಾಗೂ ಸರ್ಕಾರದಿಂದ ದೊರೆಯುವ ಸಾಂತ್ವನ ಪೂರ್ವಕ ಧನವೂ ಇಲ್ಲದೆ ಚಿಕಿತ್ಸೆಗಾಗಿ ಪರಿತಪಿಸುತ್ತಿದ್ದಾರೆ. ಮೈಸೂರಿನ ಆರ್.ಎಸ್.ನಾಯ್ಡು ನಗರದ ನಿವಾಸಿ ಸಿದ್ದೇಗೌಡರು, ಸುಮಾರು 24 ವರ್ಷಗಳಿಂದ ಸಿಎಆರ್ ಹಾಗೂ 14–15 ವರ್ಷಗಳಿಂದ ಪಿರಂಗಿ ದಳದಲ್ಲಿ ಸೇವೆ ಸಲ್ಲಿಸಿದ್ದಾರೆ. ಕಳೆದ ವರ್ಷ ತಾಲೀಮು ವೇಳೆ ಅವರು, ತಮ್ಮ ಬಲ ಭುಜಕ್ಕೆ ನೇತು ಹಾಕಿಕೊಂಡಿದ್ದ ಸಿಡಿಮದ್ದಿನ ಬ್ಯಾಗ್ ಸಿಡಿದು ದೇಹದ ಅರ್ಧಭಾಗ(ಬಲಗೈ, ಎದೆ ಮತ್ತು ಬೆನ್ನಿನ ಬಲಭಾಗ) ಸುಟ್ಟುಹೋಗಿತ್ತು. ಆಸ್ಪತ್ರೆಯಲ್ಲಿ ಸುಮಾರು 1 ತಿಂಗಳು ಚಿಕಿತ್ಸೆ ಪಡೆದು ಕಳೆದ 4 ತಿಂಗಳಿಂದ ಮನೆಯಲ್ಲಿರುವ ಅವರು, ಹೆಚ್ಚಿನ ಚಿಕಿತ್ಸೆಗೆ ಅಗತ್ಯ ಹಣವಿಲ್ಲದೆ ಪರದಾಡುತ್ತಿದ್ದಾರೆ.

ಪಿರಂಗಿ ದಳದಲ್ಲಿ ಕೆಲಸ ಮಾಡುವವರಿಗೆ ಇನ್ಶೂರೆನ್ಸ್ ಮಾಡಿಸಲಾಗುತ್ತದೆ. ಆದರೆ ಶೇ.40 ಡ್ಯಾಮೇಜ್ ಆಗಿಲ್ಲ ಎಂಬ ಕಾರಣಕ್ಕೆ ಇನ್ಶೂರೆನ್ಸ್ ಹಣವೂ ಸಿದ್ದೇಗೌಡ ಅವರ ಕೈ ಸೇರಿಲ್ಲ. ಎಬಿವೈ ಸ್ಕೀಂನಡಿ ಚಿಕಿತ್ಸೆ ಪಡೆದರೂ ಔಷಧಿಗಳ ಖರ್ಚು ಲಕ್ಷಕ್ಕೂ ಹೆಚ್ಚಾಗಿದೆ. ಸುಟ್ಟಿರುವ ಕಡೆಯೆಲ್ಲಾ ಮತ್ತೆ ಮೊದಲಿನಂತಾಗಲೂ ಲೇಸರ್ ಟ್ರೀಟ್‌ಮೆಂಟ್ ಅವಶ್ಯವಿದ್ದು, ಆಸ್ಪತ್ರೆಗೆ ಒಮ್ಮೆ ಲೇಸರ್ ಟ್ರೀಟ್‌ಮೆಂಟ್‌ಗೆ ಹೋದರೂ ಕನಿಷ್ಠ 3–4 ಸಾವಿರ ರೂ. ಬೇಕಾಗುತ್ತದೆ. ಆದರೆ ಹಣವಿಲ್ಲದೆ ಟ್ರೀಟ್‌ಮೆಂಟ್ ಪಡೆದುಕೊಳ್ಳಲು ಸಾಧ್ಯವಾಗದ ಚಿಂತಾಜನಕ ಸ್ಥಿತಿಯಲ್ಲಿ ದಿನದೂಡುತ್ತಿದ್ದಾರೆ.

ಅನುಗ್ರಹ ಪೂರ್ವಕ ಧನ ದೊರೆತಿಲ್ಲ: ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಮತ್ತು ಅಪರಾಧಗಳನ್ನು ತಡೆಗಟ್ಟುವ ಸಂದರ್ಭಗಳಲ್ಲಿ ಕರ್ತವ್ಯ ನಿರತ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿ ಮೃತಪಟ್ಟಾಗ ಹಾಗೂ ಗಾಯಗೊಂಡಾಗ ಅನುಗ್ರಹ ಪೂರ್ವಕವಾಗಿ ಪರಿಹಾರ ನೀಡಬೇಕು ಎಂದು ಸರ್ಕಾರ 2014ರಲ್ಲಿ ಸುತ್ತೋಲೆ ಹೊರಡಿಸಿದೆ. ಸುತ್ತೋಲೆ ಪ್ರಕಾರ ಬೆಂಕಿ ಅನಾಹುತದಿಂದ ಗಂಭೀರ ಸ್ವರೂಪದ ಗಾಯಗೊಂಡಲ್ಲಿ 2 ಲಕ್ಷ ರೂ., ಶಾಶ್ವತ ಅಂಗವಿಕಲತೆಗೊಂಡಲ್ಲಿ 10 ಲಕ್ಷ ರೂ.ಗಳನ್ನು ನೀಡಬೇಕು ಎಂದಿದೆ. ಆದರೆ ಗಂಭೀರ ಸ್ವರೂಪದ ಗಾಯಗೊಂಡು, ಕೈ ಬೆರಳುಗಳನ್ನು ಮಾಮೂಲಿಯಂತೆ ಆಡಿಸಲು ಸಾಧ್ಯವಾಗದ ಪರಿಸ್ಥಿತಿಯಲ್ಲಿರುವ ಸಿದ್ದೇಗೌಡರಿಗೆ ಇದುವರೆಗೂ ಪರಿಹಾರ ದೊರೆತಿಲ್ಲ. ನಾಲ್ಕೈದು ತಿಂಗಳಿಂದ ಪರಿಹಾರ ಕೊಡುತ್ತೇವೆ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ಹೇಳುತ್ತಿದ್ದಾರೆಯೇ ಹೊರತು ಕೊಡುವ ಯಾವ ಕ್ರಮವನ್ನು ಕೈಗೊಂಡಿಲ್ಲ. ಕುಟುಂಬ ನಡೆಸುವುದೇ ಕಷ್ಟವಾಗಿದೆ. ಮನೆಯಲ್ಲಿ ಸಂಪಾದನೆ ಮಾಡುವವರು ಇವರೊಬ್ಬರೆ. ಅವರಿಂದಲೇ ಕುಟುಂಬ ನಡೆಯಬೇಕು. ನಾಲ್ಕೈದು ತಿಂಗಳಿಂದ ಅವರು ಸಹ ಮನೆಯಲ್ಲೇ ಇದ್ದಾರೆ. ಸಂಬಳವೆಲ್ಲಾ ಮನೆ ಲೋನ್‌ಗೆ ಕಟ್ ಆಗಲಿದ್ದು, ಉಳಿದ 3–4 ಸಾವಿರದಲ್ಲೇ ತಿಂಗಳ ಪೂರ್ತಿ ಮನೆ ನಡೆಸಬೇಕು ಎಂದು ಸಿದ್ದೇಗೌಡರ ಕುಟುಂಬಸ್ಥರೊಬ್ಬರು 'ಮೈಸೂರು ಮಿತ್ರ'ನಲ್ಲಿ ತಮ್ಮ ಕುಟುಂಬ ಸಂಕಷ್ಟ ಪರಿಸ್ಥಿತಿಯನ್ನು ಬಿಚ್ಚಿಟ್ಟರು.

ಹೊಸದಾಗಿ ಅರ್ಜಿ ಸ್ವೀಕಾರ

ಚುನಾವಣಾ ಕಾರಣಕ್ಕೆ ಹೊಸ ಕಾರ್ಡ್ ನೀಡುವುದನ್ನು ಸ್ಥಗಿತಗೊಳಿಸಿದ್ದರಿಂದ ಅರ್ಜಿಗಳು ಬಾಕಿ ಉಳಿದಿದ್ದವು. ಈವರೆಗೂ ಅವುಗಳ ಪೈಕಿ 57 ಸಾವಿರ ಅರ್ಜಿಗಳಿಗೆ ಕಾರ್ಡ್ ನೀಡಲಾಗಿದೆ. ಬಾಕಿ ಇರುವ ಅರ್ಜಿಗಳನ್ನು ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯ ಜಂಟಿ ಆಯುಕ್ತರು ಮತ್ತು ಉಪನಿರ್ದೇಶಕರು ಸ್ಥಳ ಪರಿಶೀಲನೆ ನಡೆಸಿ ಮಾರ್ಚ್ 31ರೊಳಗೆ ಇತ್ಯರ್ಥಪಡಿಸಲು ಗಡುವು ನೀಡಲಾಗಿದೆ. ಬಳಿಕ ಹೊಸ ಕಾರ್ಡ್‌ಗಳಿಗೆ ಎಲ್ಲಾ ಶಾಸಕರ ಬೇಡಿಕೆಯಂತೆ ಏಪ್ರಿಲ್ 1ರಿಂದಲೇ ಅರ್ಜಿ ಸ್ವೀಕರಿಸಲಾಗುವುದು. ಸ್ವೀಕೃತಗೊಂಡ ಅರ್ಜಿಗಳನ್ನು ಒಂದು ತಿಂಗಳೊಳಗಾಗಿ ಇತ್ಯರ್ಥಪಡಿಸಲಾಗುವುದು ಎಂದು ಭರವಸೆ ನೀಡಿದರು. ವೈದ್ಯಕೀಯ ಅಗತ್ಯಕ್ಕನುಗುಣವಾಗಿ ಸ್ವೀಕರಿಸಲಾದ 744 ಅರ್ಜಿಗಳಿಗೂ ಪಡಿತರ ಚೀಟಿಗಳನ್ನು ನೀಡಲಾಗಿದೆ. ಅನ್ನಭಾಗ್ಯ ಯೋಜನೆಯಡಿ ನಗದು ಜಮಾವಣೆಗೊಳ್ಳುತ್ತಿದ್ದು, ಶೇ.95ರಷ್ಟು ಜನರಿಗೆ ಸೌಲಭ್ಯ ಸಿಕ್ಕಿದೆ. ತಾಂತ್ರಿಕ ಕಾರಣದಿಂದ ಶೇ.5ರಷ್ಟು ಮಾತ್ರ ವ್ಯತ್ಯಾಸವಾಗಿದೆ. ಈ ಹಿಂದೆ ಮೂಡಿಗೆರೆ ಕ್ಷೇತ್ರದಲ್ಲಿ 599 ಜನ 4 ಚಕ್ರದ ವಾಹನ ಹೊಂದಿದ್ದಾರೆ ಎಂಬ ಕಾರಣಕ್ಕೆ ಬಿಪಿಎಲ್‌ನಿಂದ ಕೈಬಿಡಲಾಗಿತ್ತು. ಅವರಿಗೆ ಮತ್ತೆ ಬಡತನ ರೇಖೆಯ ಒಳಗಿನ ಕಾರ್ಡ್ ನೀಡಲು ಕ್ರಮ ಕೈಗೊಳ್ಳುವುದಾಗಿ ಸಚಿವರು ಭರವಸೆ ನೀಡಿದರು.

ಹೊಸ ಆಸ್ಪತ್ರೆ ಮುಂದಿನ ವರ್ಷದೊಳಗೆ ಉದ್ಘಾಟನೆ

ವೆಚ್ಚದಲ್ಲಿ ಆಸ್ಪತ್ರೆ ಕಟ್ಟಡ ನಿರ್ಮಿಸಲಾಗಿದೆ. ಆದರೆ ರಸ್ತೆ, ಕಾಂಪೌಂಡ್, ಲಿಫ್ಟ್ ಸೇರಿದಂತೆ ಇತರ ಕೆಲಸಗಳಿಗಾಗಿ 14 ಕೋಟಿ ರೂ.ಗಳ ಅಗತ್ಯ ಇದೆ. ಅದನ್ನು ಮಂಜೂರು ಮಾಡದೇ ಇದ್ದರೆ ಹೊಸ ಕಟ್ಟಡ ನಿರ್ಮಾಣ ನಿರರ್ಥಕಗೊಂಡು, ಶಿಥಿಲಗೊಳ್ಳುತ್ತದೆ. ಹಳೆಯ ಕಟ್ಟಡವೂ ಸೋರುತ್ತಿದ್ದು ಜನರಿಗೆ ತೊಂದರೆಯಾಗುತ್ತಿದೆ ಎಂದು ಗಮನ ಸೆಳೆದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ಹೊಸ ಕಟ್ಟಡದ ಮೂಲಸೌಲಭ್ಯಕ್ಕಾಗಿ 10 ಕೋಟಿ ರೂ.ಗಳನ್ನು ನಿಗದಿ ಮಾಡಲಾಗಿದೆ. ಲಭ್ಯ ಇರುವ ಅನುದಾನ ಒದಗಿಸಿ ಕಟ್ಟಡ ನಿರ್ಮಾಣ ಮಾಡುವುದಾಗಿ ಭರವಸೆ ನೀಡಿದರು.

ಸೆಲ್ಫಿ ಗೀಳಿಗೆ ಬಿದ್ದು ಸಿಂಹಕ್ಕೆ ಬಲಿಯಾದ!



ಅಮರಾವತಿ, ಫೆ.15– ಆಧುನಿಕ ಜಗತ್ತಿನಲ್ಲಿ ಎಲ್ಲಿ ನೋಡಿದರೂ ಮೊಬೈಲ್, ಕ್ಯಾಮರಾ ಕಣ್ಣಿಗೆ ಬೀಳುತ್ತಲೇ ಇರುತ್ತದೆ. ಇತ್ತೀಚೆಗಂತೂ ಜನರು ಸೆಲ್ಫಿ ತೆಗೆದುಕೊಳ್ಳುವುದನ್ನು ಹೆಚ್ಚು ಇಷ್ಟಪಡುತ್ತಾರೆ. ಮದುವೆ, ಟ್ರಿಪ್ ಹೀಗೆ ಎಲ್ಲಿ ಹೋದರೂ ಅಲ್ಲೊಂದಿಷ್ಟು ಸೆಲ್ಫಿ ಇದ್ದೇ ಇರುತ್ತೆ. ಆದರೆ, ಇಲ್ಲೊಬ್ಬ ವ್ಯಕ್ತಿ ಸೆಲ್ಫಿ ತೆಗೆಯಲು ಹೋಗಿ ದುರಂತಕ್ಕೀಡಾದ ಘಟನೆ ನಡೆದಿರುವುದು ಬೆಳಕಿಗೆ ಬಂದಿದೆ.

ಘಟನೆಯು ಆಂಧ್ರಪ್ರದೇಶದ ತಿರುಪತಿಯಲ್ಲಿರುವ ಶ್ರೀ ವೆಂಕಟೇಶ್ವರ ಝೂಲಾಜಿಕಲ್ ಪಾರ್ಕ್‌ನಲ್ಲಿ ನಡೆದಿದ್ದು, ಮೃತ ವ್ಯಕ್ತಿಯನ್ನು ರಾಜಸ್ಥಾನದ ಅಲ್ವಾರ್ ಮೂಲದ ಪ್ರಹ್ಲಾದ್ ಗುಜ್ಜರ್ (38) ಎಂದು ಗುರುತಿಸಲಾಗಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ಝೂಲಾಜಿಕಲ್ ಪಾರ್ಕ್‌ನ ಅಧಿಕಾರಿ ಸೆಲ್ವಂ, ಗುಜ್ಜರ್ ನಿರ್ವಾಹಕರು ಮತ್ತು ವೈದ್ಯಕೀಯ ಸಿಬ್ಬಂದಿಗಾಗಿ ಮೀಸಲಿಟ್ಟಿರುವ ಪ್ರವೇಶ ದ್ವಾರದಿಂದ ಸಿಂಹಗಳಿರುವ ಗುಹೆಗೆ ತೆರಳಿದ್ದಾನೆ. ಗುಜ್ಜರ್ ಸಿಂಹಗಳಿರುವ ಗುಹೆ ಪ್ರವೇಶಿಸುತ್ತಿರುವುದನ್ನು ಗಮನಿಸಿದ ಪ್ರಾಣಿ ಪಾಲಕರು ಕೂಡಲೇ ಆತನನ್ನು ವಾಪಸ್ ಬರುವಂತೆ ಹೇಳಿದ್ದು, ಇದಕ್ಕೆ ಆತ ಒಪ್ಪಿಲ್ಲ.

25 ಅಡಿ ಎತ್ತರದ ಬೇಲಿಯನ್ನು ಹಾರಿ ಸಿಂಹಗಳಿರುವ ಜಾಗಕ್ಕೆ ವ್ಯಕ್ತಿ ಜಿಗಿದಿದ್ದು, ಸೆಲ್ಫಿ ತೆಗೆಯಲು ಯತ್ನಿಸಿದ್ದಾನೆ. ಡೊಂಗಲ್‌ಪುರ ಎಂಬ ಹೆಸರಿನ ಸಿಂಹವು ಆತನ ಮೇಲೆ ದಾಳಿ ಮಾಡಿದ್ದು, ಗಂಭೀರವಾಗಿ ಗಾಯ ಗೊಂಡಿದ್ದ ಆತನನ್ನು ಆಸ್ಪತ್ರೆಗೆ ದಾಖಲಿ ಸಲಾಯಿತಾದರು ಆತ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾನೆ. ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಲಾಗಿದೆ.

ಕಾಡು ಬೇಲದ ಹಣ್ಣು ತಿಂದು 47 ಕುರಿ ಬಲಿ

ನಂಜನಗೂಡು, ಫೆ.15– ಕಾಡು ಬೇಲದ ಹಣ್ಣು ತಿಂದು ಅಸ್ವಸ್ಥಗೊಂಡಿದ್ದ 47 ಕುರಿಗಳು ಸಾವನ್ನಪ್ಪಿವೆ. ಈ ಹೃದಯ ವಿದ್ರಾವಕ ಘಟನೆ ತಾಲೂಕಿನ ಕೂಗಲೂರು–ಲಕ್ಷ್ಮಣಪುರ ಮಾರ್ಗ ಮಧ್ಯದ ಜಮೀನಿನಲ್ಲಿ ನಡೆದಿದೆ.

ತುಮಕೂರು ಜಿಲ್ಲೆ ಶಿರಾ ತಾಲೂಕಿನ ಬಾಣಗೆರೆ ಗ್ರಾಮದ ರಂಗಸ್ವಾಮಿ, ವೀರೇಂದ್ರ, ಜಯಣ್ಣ ಎಂಬುವರಿಗೆ ಸೇರಿದ ಕುರಿಗಳು. ಈ ಮೂವರು ಕುರಿಗಾಹಿಗಳು ಸುಮಾರು 400ಕ್ಕೂ ಅಧಿಕ ಕುರಿಗಳನ್ನು ಊರಿಂದ ಊರಿಗೆ ಮೇಯಿಸಿಕೊಂಡಿದ್ದರು. ಫೆ.14ರಂದು ನಂಜನಗೂಡು ತಾಲೂಕಿನ ಎಲಚಗೆರೆಯಿಂದ ಕೂಗಲೂರಿಗೆ ತೆರಳುವ ಮಾರ್ಗ ಸುಮಾರು 90 ಕುರಿಗಳು ಕಾಡು ಬೇಲದಹಣ್ಣನ್ನು ತಿಂದು ಕೂಗಲೂರು ಗ್ರಾಮದ ಕೆರೆಯಲ್ಲಿ ನೀರು ಕುಡಿದ ಕೆಲವೇ ಕ್ಷಣದಲ್ಲಿ ಹೊಟ್ಟೆ ಉಬ್ಬರವಾಗಿ ಅಸ್ವಸ್ಥಗೊಂಡು 47 ಕುರಿಗಳು ಸ್ಥಳದಲ್ಲೇ ಸಾವನ್ನಪ್ಪಿವೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಪಶು ವೈದ್ಯಾಧಿಕಾರಿ ಮಲ್ಲಿಕಾರ್ಜುನ್ ಕುರಿಗಳ ಮರಣೋತ್ತರ ಪರೀಕ್ಷೆ ನಡೆಸಿ ಕಾಡು ಬೇಲದ ಹಣ್ಣನ್ನು ತಿಂದು ಕುರಿಗಳು ಸಾವನ್ನಪ್ಪಿರುವುದಾಗಿ ವರದಿ ನೀಡಿದ್ದಾರೆ.

ಸತ್ತ ಕುರಿಗಳ ಕದ್ದುಕೊಂಡು ಹೋದ ಗ್ರಾಮಸ್ಥರು



ಕುರಿಗಾಹಿ ರಂಗಸ್ವಾಮಿ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ನಮ್ಮ ತುಮಕೂರು ಭಾಗದಲ್ಲಿ ಬೇಸಿಗೆ ವೇಳೆ ಜಾನುವಾರುಗಳಿಗೆ ಆಹಾರ, ನೀರಿನ ಕೊರತೆ ಉಂಟಾಗಿದೆ. ಆದ್ದರಿಂದ ನಾವು ಹಳೇ ಮೈಸೂರು ಭಾಗದಲ್ಲಿ ಕುರಿಗಳನ್ನು ಮೇಯಿಸಿಕೊಂಡು ಜೀವನ ಸಾಗಿಸುತ್ತಿದ್ದೆವು. ನಂಜನಗೂಡು ತಾಲೂಕಿನ ಕೂಗಲೂರು ಗ್ರಾಮದ ಕೆರೆಯಲ್ಲಿ ನೀರು ಕುಡಿಸಿ ಪಕ್ಕದಲ್ಲೇ ಇದ್ದ ಜಮೀನೊಂದರಲ್ಲಿ ಮೇಯಲು ಬಿಟ್ಟಿದ್ದೆವು. ಸುಮಾರು ಅರ್ಧ ಗಂಟೆಯಲ್ಲೇ ಸುಮಾರು 50ಕ್ಕೂ ಹೆಚ್ಚು ಕುರಿಗಳು ಹೊಟ್ಟೆ ಉಬ್ಬರಗೊಂಡು ಅಸ್ವಸ್ಥಗೊಂಡು ನರಳಾಡುತ್ತಿದ್ದವು. ನಾವು ತಕ್ಷಣ ಹತ್ತಿರದ ಪೊಲೀಸ್ ಠಾಣೆಗೆ ಕರೆ ಮಾಡಿದೆವು ಅವರು ಸ್ಥಳಕ್ಕೆ ಬಂದು ಪಶು ವೈದ್ಯಾಧಿಕಾರಿಗಳನ್ನು ಕರೆಸುವ ಮುನ್ನವೇ ಸುಮಾರು 47 ಕುರಿಗಳು ಒದ್ದಾಡಿ ಒದ್ದಾಡಿ ಸಾವನ್ನಪ್ಪಿದವು. ಇದರಿಂದ ನಮಗೆ 8 ರಿಂದ 9 ಲಕ್ಷ ರೂ. ನಷ್ಟವಾಗಿದೆ ಎಂದು ಅಳಲು ತೋಡಿಕೊಂಡರು.

ಸತ್ತ ಕುರಿಗಳನ್ನು ಕದ್ದೊಯ್ದರು: ಕುರಿಗಳು ಸಾವನ್ನಪ್ಪಿದ ವಿಷಯ ತಿಳಿದು ಓಡೋಡಿ ಬಂದ ಅಕ್ಕಪಕ್ಕದ ಗ್ರಾಮಸ್ಥರು ಸುಮಾರು 8 ರಿಂದ 10 ಸತ್ತ ಕುರಿಗಳನ್ನು ಕದ್ದೊಯ್ದಿದ್ದಾರೆ. ಪಶು ಇಲಾಖೆ ಸಹಾಯಕ ನಿರ್ದೇಶಕ ಮಲ್ಲಿಕಾರ್ಜುನ್ ಮಾತನಾಡಿ, ಕುರಿಗಾಹಿಗಳು 47 ಕುರಿಗಳು ಸಾವನ್ನಪ್ಪಿರುವುದಾಗಿ ತಿಳಿಸಿದ್ದಾರೆ. ಜೊತೆಗೆ ಪೊಲೀಸ್ ಠಾಣೆಗೂ ದೂರು ನೀಡಿದ್ದಾರೆ. ನಾವು ಸ್ಥಳಕ್ಕಾಗಮಿಸಿದ ವೇಳೆ 34 ಕುರಿಗಳು, 2 ಟಗರು, 1 ಮೇಕೆ ಸೇರಿ 37 ಕುರಿಗಳ ಕಳೇಬರಗಳಷ್ಟೆ ಇದ್ದವು. ಇನ್ನುಳಿದವನ್ನು ಸ್ಥಳೀಯರು ಬುಧವಾರ ರಾತ್ರಿ ಕದ್ದುಕೊಂಡು ಹೋಗಿದ್ದಾರೆ ಎಂದು ಕುರಿಗಾಹಿಗಳು ತಿಳಿಸಿದ್ದಾರೆ. ನಾವು ಸತ್ತ ಕುರಿಗಳ ಮರಣೋತ್ತರ ಪರೀಕ್ಷೆ ನಡೆಸಿದ್ದೇವೆ. ಕಾಡು ಬೇಲದ ಹಣ್ಣನ್ನು ತಿಂದಾಗ ಕುರಿಗಳ ಹೊಟ್ಟೆಯಲ್ಲಿ ಟಾಕ್ಸಿನ್ ಎಂಬ ಅನಿಲ ಬಿಡುಗಡೆಯಾಗಿ ಹೊಟ್ಟೆ ಉಬ್ಬರವಾಗುತ್ತದೆ. ಪರಿಣಾಮ ಉಸಿರಾಟಕ್ಕೆ ತೊಂದರೆಯಾಗಿ ಮೃತಪಡುತ್ತವೆ. ಈ ಬಗ್ಗೆ ಪರಿಶೀಲನೆ ನಡೆಸಿ ವರದಿ ನೀಡಿದ್ದೇವೆ ಎಂದರು. ಈ ಸಂಬಂಧ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಮೈಸೂರು ಮಿತ್ರ

ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಮೈಸೂರು ಪಾಲಿಕೆ ಆಯುಕ್ತರೂ ಸೇರಿ ವಿವಿಧ ಅಧಿಕಾರಿಗಳ ವರ್ಗಾವರ್ಗಿ

ಮೈಸೂರು, ಫೆ.15–ಲೋಕಸಭಾ ಚುನಾವಣೆ ಕಾರ್ಯ ನಿಮಿತ್ತ ಮೈಸೂರು ಮಹಾನಗರ ಪಾಲಿಕೆಯ ಆಯುಕ್ತರೂ ಸೇರಿದಂತೆ ಎ ಮತ್ತು ಬಿ ವೃಂದದ ಹಲವಾರು ಅಧಿಕಾರಿಗಳನ್ನು ವರ್ಗಾವಣೆ ಮಾಡಲಾಗಿದ್ದು, ಚುನಾವಣಾ ನೀತಿ ಸಂಹಿತೆ ಮುಕ್ತಾಯಗೊಂಡ ಕೂಡಲೇ ಅಧಿಕಾರಿಗಳು ಈ ಹಿಂದೆ ಕಾರ್ಯ ನಿರ್ವಹಿಸುತ್ತಿದ್ದ ಸ್ಥಳದಲ್ಲಿ ವರದಿ ಮಾಡಿಕೊಳ್ಳಬೇಕೆಂದು ನಗರಾಭಿವೃದ್ಧಿ ಇಲಾಖೆ ಅಧೀನ ಕಾರ್ಯದರ್ಶಿ ಎನ್.ಮಂಗಳ ಗೌರಿ ಆದೇಶ ಹೊರಡಿಸಿದ್ದಾರೆ.

ಮೈಸೂರು ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಅವರನ್ನು ವಿಜಯಪುರ ಮಹಾನಗರ ಪಾಲಿಕೆ ಆಯುಕ್ತರಾಗಿ, ಉಪ ಅಯುಕ್ತ ಸೋಮಶೇಖರ್ ಬೆಳಗಾವಿ ಮಹಾನಗರ ಪಾಲಿಕೆ, ಅವರ ಸ್ಥಳಕ್ಕೆ ವಿಜಯಪುರ ಮಹಾನಗರ ಪಾಲಿಕೆಯ ಉಪ ಅಯುಕ್ತ ಯಶವಂತ್ ಹೆಚ್.ನಾರಾಯಣಕರ ಅವರನ್ನು ವರ್ಗಾಯಿಸಲಾಗಿದೆ. ಕಲಬುರ್ಗಿ ಪಾಲಿಕೆಯ ಕೌನ್ಸಿಲ್ ಸೆಕ್ರೆಟರಿ ಮಲ್ಲೇಶ್ ತಂಗಾ ಅವರನ್ನು ಮೈಸೂರು ಪಾಲಿಕೆಗೆ ವರ್ಗಾಯಿಸಲಾಗಿದೆ.

ವಲಯ ಆಯುಕ್ತರಾದ ಎಂ.ಎಸ್.ಪ್ರತಿಭಾ ಮಂಗಳೂರಿಗೆ, ವೈ.ಎನ್.ಚಂದ್ರಮ್ಮ ಮಂಗಳೂರು, ಎಂ.ನಂಜುಂಡಯ್ಯ ಅವರನ್ನು ಬೆಳಗಾವಿಗೆ ವರ್ಗಾಯಿಸಿದ್ದು, ಮಂಗಳೂರಿನ ರೇಖಾ ಜೆ.ಶೆಟ್ಟಿ, ವಾಣಿ ವಿ.ಆಳ್ವಾ, ಸುನೀಲ್ ಪಾಟೀಲ್ ಅವರನ್ನು ಮೈಸೂರು ಪಾಲಿಕೆಗೆ ವರ್ಗಾಯಿಸಲಾಗಿದೆ.

ಪಾಲಿಕೆಯ ಕಂದಾಯ ವಿಭಾಗದ ಕಚೇರಿ ಸಹಾಯಕ ಕೆ.ಸುರೇಶ್ ಅವರನ್ನು ಮಂಗಳೂರಿಗೆ ವರ್ಗಾಯಿಸಲಾಗಿದ್ದು, ಅವರ ಸ್ಥಳಕ್ಕೆ ಮಂಗಳೂರಿನ ಎಸ್. ಭಾರತಿ, ಎಸ್ಟೇಟ್ ಆಫೀಸರ್ ಹೆಚ್.ಎಂ. ಸುರೇಶ್ ಅವರನ್ನು ಮಂಗಳೂರಿಗೆ ವರ್ಗಾಯಿಸಿದ್ದು, ಅವರ ಸ್ಥಳಕ್ಕೆ ಮಂಗಳೂರಿನ ಎನ್.ವಿಜಯಕುಮಾರ್, ಕಂದಾಯಾಧಿಕಾರಿ ಅರಸು ಕುಮಾರಿ ಅವರನ್ನು ಮಂಗಳೂರಿಗೆ ವರ್ಗಾಯಿಸಿದ್ದು, ಅವರ ಸ್ಥಳಕ್ಕೆ ದಾವಣಗೆರೆಯ ಡಿ.ಕೃಷ್ಣಮೂರ್ತಿ, ಕಂದಾಯಾಧಿಕಾರಿ ಎಂ.ಎಸ್.ಸತೀಶ್ ಅವರನ್ನು ಕಲಬುರ್ಗಿಗೆ ವರ್ಗಾಯಿಸಿದ್ದು, ಅವರ ಸ್ಥಳಕ್ಕೆ ಅಲ್ಲಿನ ಕಚೇರಿ ಸಹಾಯಕ ನೀಲಕಂಠರಾಯ, ಕಂದಾಯಾಧಿಕಾರಿ ಎಸ್.ಸ್ವರ್ಣಲತಾ ಅವರನ್ನು ಹುಬ್ಬಳ್ಳಿ–ಧಾರವಾಡ ಪಾಲಿಕೆಗೆ ವರ್ಗಾಯಿಸಿದ್ದು, ಅವರ ಸ್ಥಳಕ್ಕೆ ಬೆಳಗಾವಿಯ ಉಮಾ ಬೆಟಗೇರಿ, ಕಂದಾಯಾಧಿಕಾರಿ ಬಿ.ಟಿ.ಧನಲಕ್ಷ್ಮೀ ಅವರನ್ನು ಕಲಬುರ್ಗಿಗೆ ವರ್ಗಾಯಿಸಿದ್ದು, ಅವರ ಸ್ಥಳಕ್ಕೆ ಮಂಗಳೂರಿನ ಕೆ.ಸುಶಾಂತ್, ಕಂದಾಯಾಧಿಕಾರಿ ಜೆ.ಆಶಾ ಅವರನ್ನು ಶಿವಮೊಗ್ಗಕ್ಕೆ ವರ್ಗಾಯಿಸಿದ್ದು, ಅವರ ಸ್ಥಳಕ್ಕೆ ಅಲ್ಲಿನ ಹೆಚ್.ಸುನೀತಾ ವರ್ಗಾಯಿಸಲಾಗಿದೆ.

ಕಚೇರಿ ಸಹಾಯಕ ಬಿ.ವೆಂಕಟರಾಮ್ ಅವರನ್ನು ತುಮಕೂರಿಗೆ ವರ್ಗಾವಣೆ ಮಾಡಲಾಗಿದ್ದು, ಅವರ ಸ್ಥಳಕ್ಕೆ ತುಮಕೂರಿನ ಎಂ.ಕೆ.ರಾಘವೇಂದ್ರ ಕಚೇರಿ ಸಹಾಯಕಿ ಎಂ.ಲಕ್ಷ್ಮೀ ಅವರನ್ನು ತುಮಕೂರಿಗೆ ವರ್ಗಾಯಿಸಿದ್ದು, ಅವರ ಸ್ಥಳಕ್ಕೆ ಬಳ್ಳಾರಿಯ ಎಂ.ಕೆ.ಗೋವಿಂದ ಬಾಬು ಅವರನ್ನು ವರ್ಗಾವಣೆ ಮಾಡಲಾಗಿದೆ

ಎಲ್ಲಾ ಅವೈಜ್ಞಾನಿಕ ರಸ್ತೆ ಹಂಪ್‌ಗಳ ತೆರವು ; ಪಾಲಿಕೆ ಆಯುಕ್ತ

ಮೈಸೂರು,ಫೆ.15(ಪಿಎಂ)– ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಎಲ್ಲಾ ಅವೈಜ್ಞಾನಿಕ ರಸ್ತೆ ಹಂಪ್‌ಗಳನ್ನು ತೆರವುಗೊಳಿಸಲು ಸೂಚನೆ ನೀಡಲಾಗಿದೆ ಎಂದು ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಶರೀಫ್ ತಿಳಿಸಿದರು.

ಮೈಸೂರು ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಗುರುವಾರ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಅವರು, ನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಹಂಪ್‌ಗಳ ಸಂಬಂಧ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಅವುಗಳಿಗೆ ಬೆಳಕಿನ ಪ್ರತಿಫಲನ ಹೊರಹೊಮ್ಮುವ ಬಿಳಿಪಟ್ಟೆ ಗುರುತು ಮಾಡಲಾಗುತ್ತಿದೆ. ಅಲ್ಲದೆ, ಅವೈಜ್ಞಾನಿಕ ಹಂಪ್‌ಗಳ ತೆರವುಗೊಳಿಸಲು ಸೂಚನೆ ನೀಡಲಾಗಿದೆ ಎಂದರು.

ಮಾನಸ ಗಂಗೋತ್ರಿ ಬಳಿ ಬೋಗಾದಿ ರಸ್ತೆಯಲ್ಲಿ ಹಾಕಲಾಗಿದ್ದ ಅವೈಜ್ಞಾನಿಕ ಹಂಪ್‌ಗಳಿಂದ ಮೂವರು ಸಾವನ್ನಪ್ಪಿದ ಸಂಬಂಧ ಪ್ರತಿಕ್ರಿಯಿಸಿ, ಬಹುಶಃ ಸೂಕ್ತ ರೀತಿಯಲ್ಲಿ ಯೋಜಿಸಿ ಹಂಪ್ ಹಾಕುವಲ್ಲಿ ವಿಫಲತೆ ಕಂಡುಬರುತ್ತಿದೆ. ಜೊತೆಗೆ ವಿವಿಧ ಇಲಾಖೆಗಳ ನಡುವಿನ ಸಮನ್ವಯದ ಕೊರತೆ ಎದ್ದು ಕಾಣುತ್ತಿದೆ. ಅನಾಹುತ ಆಗಿರುವುದು ದುಃಖದ ಸಂಗತಿ. ಅಂತಹ ಅನಾಹುತಗಳು ಮರುಕಳಿಸದಂತೆ ಕ್ರಮ ಕೈಗೊಳ್ಳಲು ನಾವು ಕಾರ್ಯಪ್ರವೃತ್ತರಾಗಿದ್ದೇವೆ. ಒಣ ಮರ ಮತ್ತು ಮರದ ಒಣ ರೆಂಬೆಗಳ ತೆರವು ಕಾರ್ಯಾಚರಣೆ ಕೈಗೆತ್ತಿಕೊಳ್ಳಲಾಗಿದೆ ಅಲ್ಲದೆ ರಸ್ತೆಯಲ್ಲಿನ ಹಳ್ಳಕೊಳ್ಳ ಮುಚ್ಚಲು ಮುಂದಾಗಿದ್ದೇವೆ ಎಂದು ತಿಳಿಸಿದರು.

ಚುನಾವಣಾ ಬಾಂಡ್‌ಗಳ ಕುರಿತು

ಸುಪ್ರೀಂಕೋರ್ಟ್ ತೀರ್ಪು ಪ್ರಜಾತಂತ್ರದಲ್ಲಿ ಪಾರದರ್ಶಕತೆ ಮರುಸ್ಥಾಪಿಸುವ ತೀರ್ಪು

●ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಕ್ರಿಯೆ ●ಬಂಡವಾಳಶಾಹಿಗಳು ಸರ್ಕಾರದ ನಡುವಿನ ಕೊಡು–ಕೊಳ್ಳುವಿಕೆಗೆ ಇದರಿಂದ ಬ್ರೇಕ್

ಬೆಂಗಳೂರು, ಫೆ.15–ಚುನಾವಣಾ ಬಾಂಡ್‌ಗಳು ಅಸಂವಿಧಾನಿಕ ಎಂದು ಐವರು ನ್ಯಾಯಮೂರ್ತಿಗಳ ಸುಪ್ರೀಂ ಕೋರ್ಟ್ ಪೀಠ ಇಂದು ನೀಡಿರುವ ತೀರ್ಪು ಪ್ರಜಾತಂತ್ರದಲ್ಲಿ ಪಾರದರ್ಶಕತೆಯನ್ನು ಮರುಸ್ಥಾಪಿಸುವ ನಿಟ್ಟಿನಲ್ಲಿ ಐತಿಹಾಸಿಕವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.



ಈ ಕುರಿತು ಹೇಳಿಕೆ ನೀಡಿರುವ ಅವರು, ಕ್ರೋನಿ ಬಂಡವಾಳಿಗರಿಂದ ಚುನಾವಣೆಗಾಗಿ ದೇಣಿಗೆ ಸಂಗ್ರಹಿಸುವ ದುರುದ್ದೇಶದಿಂದಲೇ ಪ್ರಧಾನಿ ನರೇಂದ್ರ ಮೋದಿ ಸರ್ಕಾರ ಜಾರಿಗೆ ತಂದಿದ್ದ ಈ ಚುನಾವಣಾ ಬಾಂಡ್‌ಗಳು ಅಸಾಂವಿಧಾನಿಕವಾದುದು ಮಾತ್ರವಲ್ಲ ಇದರಿಂದ ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಮಾಹಿತಿ ಹಕ್ಕಿನ ಉಲ್ಲಂಘನೆಯಾಗಿದೆ ಎಂದು ಸುಪ್ರೀಂಕೋರ್ಟ್ ನೀಡಿರುವ ತೀರ್ಪು ಅತ್ಯಂತ ಸ್ವಾಗತಾರ್ಹವಾದುದು. ಚುನಾವಣಾ ವ್ಯವಸ್ಥೆಯ ಸುಧಾರಣೆಯಲ್ಲಿ ಇದೊಂದು ದಿಟ್ಟ ಕ್ರಮವಾಗಿದೆ ಎಂದಿದ್ದಾರೆ.

ಕೇಂದ್ರದ ಬಿಜೆಪಿ ಸರ್ಕಾರ 2019ರ ಲೋಕಸಭಾ ಚುನಾವಣೆಯ ಪೂರ್ವದಲ್ಲಿ ಜಾರಿಗೆ ತಂದಿದ್ದ ಈ ಚುನಾವಣಾ ಬಾಂಡ್‌ಗಳು ಲಂಚದ ಮತ್ತೊಂದು ರೂಪವಾಗಿತ್ತು. ವಿತ್ತೀಯ ಕಾಯಿದೆಯ ಸ್ವರೂಪದಲ್ಲಿ ಚುನಾವಣಾ ಬಾಂಡ್‌ಗಳನ್ನು ತಂದಿದ್ದು ಹಾಗೂ ಇದಕ್ಕಾಗಿ ಸುಮಾರು ಐದು ಕಾಯಿದೆಗಳನ್ನು ತಿದ್ದುಪಡಿ ಮಾಡಲಾಗಿತ್ತು. ಇದೀಗ ಇದೆಲ್ಲವೂ ರದ್ದುಗೊಂಡಿವೆ. ಚುನಾವಣಾ ಬಾಂಡ್‌ಗಳನ್ನು ಜಾರಿಗೆ ತಂದಿದ್ದರ ಹಿಂದೆ ದುರುದ್ದೇಶವಿರುವುದನ್ನು ಕಾಂಗ್ರೆಸ್ ಪಕ್ಷ ಆರಂಭದಿಂದಲೂ ಸ್ಪಷ್ಟವಾಗಿ ಹೇಳಿತ್ತು ಇದೀಗ ಸುಪ್ರೀಂಕೋರ್ಟ್ ಈ ವಿರೋಧಕ್ಕೆ ಮಾನ್ಯತೆ ನೀಡಿದೆ ಎಂದು ಅವರು ಹೇಳಿದ್ದಾರೆ.

ಚುನಾವಣಾ ಬಾಂಡ್ ಯೋಜನೆಯಡಿ ರಾಜಕೀಯ ಪಕ್ಷಗಳಿಗೆ ಅನಾಮಧೇಯವಾಗಿ ಯಾವುದೇ ಮಿತಿ ಇಲ್ಲದೆ ದೇಣಿಗೆ ನೀಡಬಹುದಾಗಿದ್ದರಿಂದ ಬಂಡವಾಳಶಾಹಿ ಶಕ್ತಿಗಳು ಹಾಗೂ ಆಡಳಿತಾರೂಢ ಸರ್ಕಾರದ ನಡುವೆ ಕೊಡುಕೊಳ್ಳುವಿಕೆಯ ಸಂಬಂಧ ವೇರ್ಪಡುತ್ತದೆ ಎಂಬ ಆತಂಕವನ್ನು ನಮ್ಮ ಪಕ್ಷ ಹಾಗೂ ಪ್ರಜ್ಞಾವಂತ ನಾಗರಿಕರು, ವಿವಿಧ ಸಂಘಟನೆಗಳು ಎತ್ತಿದ್ದವು.

ಸುಪ್ರೀಂಕೋರ್ಟ್ ಸಹ ತನ್ನ ಇಂದಿನ ತೀರ್ಪಿನಲ್ಲಿ ಇಂತಹ ಸಾಧ್ಯತೆಯನ್ನು ಅಲ್ಲಗಳೆಯಲಾಗದು ಎಂದಿದೆ. ಇದು ಕೊಡು–ಕೊಳ್ಳುವಿಕೆಗೆ ಕಾರಣವಾಗಬಹುದಾದ ಹಿತಾಸಕ್ತಿಗಳನ್ನು ಕಾಯುವ ಸಾಧ್ಯತೆಯ ಆತಂಕದತ್ತ ಬೆರಳು ಮಾಡಿದೆ. ಇದೇ ವೇಳೆ, ಯೋಜನೆಯು ಮಾಹಿತಿ ಹಕ್ಕು ಹಾಗೂ ಮತದಾರರ ಹಕ್ಕಿನ ಉಲ್ಲಂಘನೆ ಎನ್ನುವುದನ್ನು ಸ್ಪಷ್ಟಗೊಳಿಸಿದೆ. ಸುಪ್ರೀಂ ಕೋರ್ಟ್ ತೀರ್ಪು ಕೇಂದ್ರ ಸರ್ಕಾರದ ಕರಾಳ ಸಂಚಿಗೆ ಹಿಡಿದ ಕನ್ನಡಿಯಾಗಿದ್ದು ಕೇಂದ್ರದ ಗುಪ್ತ ಕಾರ್ಯಸೂಚಿಯ ಮೇಲೆ ಮಾಡಿರುವ ಗದಾ ಪ್ರಹಾರವಾಗಿದೆ ಎಂದಿದ್ದಾರೆ.

ಭೋಪಾಲ್‌ನಲ್ಲಿ ಬಂಧಿಸಿ ಜೈಲಿನಲ್ಲಿಟ್ಟಿರುವ ರೈತರನ್ನು ಕೂಡಲೇ ಬಿಡುಗಡೆ ಮಾಡಿ

ಮಧ್ಯಪ್ರದೇಶ ಸಿಎಂಗೆ ಸಿದ್ದರಾಮಯ್ಯ ಪತ್ರ

ಬೆಂಗಳೂರು, ಫೆ.15– ದೆಹಲಿಯಲ್ಲಿ ನಡೆಯುತ್ತಿರುವ ರೈತ ಪ್ರತಿಭಟನೆಯಲ್ಲಿ ಭಾಗವಹಿಸಲು ತೆರಳುತ್ತಿದ್ದ ಕರ್ನಾಟಕ ರಾಜ್ಯದ ರೈತರನ್ನು ಮಧ್ಯಪ್ರದೇಶ ಸರ್ಕಾರ ಬಂಧಿಸಿ ಜೈಲಿನಲ್ಲಿ ಇಟ್ಟಿರುವುದು ಸಂವಿಧಾನ ಬಾಹಿರ ಕ್ರಮ ಎಂದು ಸಿಎಂ ಸಿದ್ದರಾಮಯ್ಯ ಖಂಡಿಸಿದ್ದಾರೆ. ದೆಹಲಿಯಲ್ಲಿ ನಡೆಯುತ್ತಿರುವ ರೈತ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ತೆರಳಿದ್ದ ರಾಜ್ಯದ ರೈತರ ಗುಂಪೊಂದನ್ನು ಭೋಪಾಲ್‌ನಲ್ಲಿ ಬಂಧಿಸಿ 4 ದಿನಗಳೇ ಕಳೆದಿದ್ದರೂ ಅವರನ್ನು ಬಿಡುಗಡೆ ಮಾಡದೆ ವಾರಣಾಸಿಗೆ ವರ್ಗಾಯಿಸುತ್ತಿದ್ದಾರೆಂದು ತಿಳಿದುಬಂದಿದೆ. ಶಾಂತಿಯುತ ಪ್ರತಿಭಟನೆಯಲ್ಲಿ ಭಾಗವಹಿಸುವುದು ನಾಗರಿಕರ ಸಂವಿಧಾನಿಕ ಹಕ್ಕಾಗಿರುತ್ತದೆ. ತಮ್ಮ ಬೆಳೆಗಳಿಗೆ ಹೆಚ್ಚಿನ ಬೆಲೆ ಕೇಳುವ ರೈತರನ್ನು ಬಂಧಿಸಿ ಅವರಿಗೆ ಕಿರುಕುಳ ನೀಡುವುದು ಸಂವಿಧಾನ ಪರ ಕ್ರಮವಲ್ಲ. ಕೂಡಲೇ ಅವರನ್ನು ಬಿಡುಗಡೆ ಮಾಡಿ ಎಂದು ಮಧ್ಯ ಪ್ರದೇಶ ಮುಖ್ಯಮಂತ್ರಿ ಮೋಹನ್ ಯಾದವ್ ಅವರಿಗೆ ಸಿಎಂ ಸಿದ್ದರಾಮಯ್ಯ ಪತ್ರದ ಮೂಲಕ ಒತ್ತಾಯಿಸಿದ್ದಾರೆ.

ವಿಧಾನಸಭೆಯಿಂದ ರಾಜ್ಯಸಭೆಯ 4 ಸ್ಥಾನಗಳಿಗೆ ಚುನಾವಣೆ; ಐವರು ನಾಮಪತ್ರ ಸಲ್ಲಿಕೆ

ಜೆಡಿಎಸ್‌ನ ಕುಪೇಂದ್ರ ರೆಡ್ಡಿ 5ನೇ ಅಭ್ಯರ್ಥಿಯಾಗಿ ಕಣದಲ್ಲಿ: ಕದನ ಕುತೂಹಲ

● ಫೆ.27ರಂದು ಚುನಾವಣೆ ● ಪಕ್ಷೇತರರು, ಆತ್ಮಸಾಕ್ಷಿ ಮತಗಳ ನೆಚ್ಚಿಕೊಂಡಿರುವ ಎನ್‌ಡಿಎ ನಾಯಕರು ● ಪ್ರತಿತಂತ್ರದೊಂದಿಗೆ ಬೀಗುತ್ತಿರುವ ಡಿಸಿಎಂ ಡಿ.ಕೆ.ಶಿವಕುಮಾರ್

ಬೆಂಗಳೂರು, ಫೆ.15(ಕೆಎಂಶಿ)– ವಿಧಾನ ಸಭೆಯಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಇದೇ 27ರಂದು ನಡೆಯಲಿರುವ ಚುನಾವಣೆಗೆ ಐದನೇ ಅಭ್ಯರ್ಥಿಯಾಗಿ ಜೆಡಿಎಸ್‌ನ ಕುಪೇಂದ್ರ ರೆಡ್ಡಿ ನಾಮಪತ್ರ ಸಲ್ಲಿಸಿದ್ದಾರೆ. ನಾಮಪತ್ರ ಸಲ್ಲಿಕೆಗೆ ಕೊನೆಯ ದಿನವಾದ ವಿವಿಧ ಪಕ್ಷಗಳ ಬಲಾಬಲದ ಆಧಾರದ ಮೇಲೆ ಕಾಂಗ್ರೆಸ್ 3 ಮತ್ತು ಬಿಜೆಪಿಗೆ ಒಂದು ಸ್ಥಾನದಲ್ಲಿ ಗೆಲುವು ಖಚಿತ.



ವಿಧಾನಸಭೆಯಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಜೆಡಿಎಸ್‌ನ ಕುಪೇಂದ್ರ ರೆಡ್ಡಿ ನಾಮಪತ್ರ ಸಲ್ಲಿಸಿದರು. ಇದೇ ವೇಳೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆರ್.ಅಶೋಕ್ ಇದ್ದಾರೆ.

ಆಡಳಿತಾರೂಢ ಕಾಂಗ್ರೆಸ್‌ಗೆ ಸೆಡ್ಡು ಹೊಡೆಯುವ ಉದ್ದೇಶದಿಂದ ಬಿಜೆಪಿ ವರಿಷ್ಠರ ಆಣತಿಯಂತೆ ಐದನೇ ಅಭ್ಯರ್ಥಿಯಾಗಿ ರೆಡ್ಡಿ ಅವರನ್ನು ಕಣಕ್ಕಿಳಿಸಿದೆ.

ರೆಡ್ಡಿ ಅವರು ಕಣಕ್ಕಿಳಿದಿರುವುದರಿಂದ ಚುನಾವಣಾ ಅಖಾಡ ರಂಗೇರಿದ್ದು ಅವಿರೋಧ ಆಯ್ಕೆಗೆ ಅವಕಾಶ ಇಲ್ಲದಂತಾಗಿದೆ. ರಾಜ್ಯಸಭೆಗೆ ಆಯ್ಕೆಗೊಳ್ಳಲು ಸ್ಪರ್ಧಿಸಿರುವ ಅಭ್ಯರ್ಥಿ ಕನಿಷ್ಠ 45 ಮತಗಳನ್ನು ಪಡೆಯಬೇಕಿದೆ, ಕಾಂಗ್ರೆಸ್ ವಿಧಾನಸಭಾಧ್ಯಕ್ಷರೂ ಸೇರಿ 135 ಮತಗಳನ್ನು ಹೊಂದಿದೆ. ಪ್ರತಿಪಕ್ಷ ಬಿಜೆಪಿ 66, ಜೆಡಿಎಸ್ 19 ಮತಗಳನ್ನು ಹೊಂದಿವೆ. 224 ಸದಸ್ಯರಿರುವ ಸದನದಲ್ಲಿ ನಾಲ್ವರು ಪಕ್ಷೇತರರಿದ್ದಾರೆ, ಇವರ ಮತಗಳೇ ಚುನಾವಣೆಯಲ್ಲಿ ಭಾರೀ ತಿರುವಿಗೆ ಕಾರಣವಾಗಲಿದೆ.

ಕಾಂಗ್ರೆಸ್ ತನ್ನ ಮೂವರು ಅಭ್ಯರ್ಥಿ ಗಳ ಗೆಲುವಿಗೆ ಅಗತ್ಯವಿರುವ 135 ಮತಗಳನ್ನು ಹೊಂದಿದೆ. ಬಿಜೆಪಿ 66 ಸದಸ್ಯರನ್ನು ಹೊಂದಿದ್ದು ತನ್ನ ಅಭ್ಯರ್ಥಿಗೆ 45 ಮತಗಳ ನೀಡಿದ ನಂತರ ಉಳಿದ 21 ಮತಗಳನ್ನು ಎನ್‌ಡಿಎ ಅಭ್ಯರ್ಥಿ ರೆಡ್ಡಿ ಅವರಿಗೆ ನೀಡಲಿದೆ ಜೆಡಿಎಸ್‌ನ 19 ಹಾಗೂ ಬಿಜೆಪಿಯ ಉಳಿದ 21 ಮತಗಳು ಸೇರಿ 40 ಮತಗಳು ರೆಡ್ಡಿ ಅವರಿಗೆ ಲಭಿಸಲಿವೆ

ಗೆಲುವಿನ ಗುರಿ ಮುಟ್ಟಲು ಇನ್ನೂ ಐದು ಮತಗಳ ಅಗತ್ಯವಿದೆ, ಅದರಲ್ಲಿ ಜನಾರ್ದನ ರೆಡ್ಡಿ ಸೇರಿದಂತೆ ಇಬ್ಬರು ಪಕ್ಷೇತರರು ಕುಪೇಂದ್ರ ರೆಡ್ಡಿ ಅವರನ್ನು ಬೆಂಬಲಿಸಲಿದ್ದಾರೆ. ಮ್ಯಾಜಿಕ್ ಸಂಖ್ಯೆ ಮುಟ್ಟಲು ಕುಪೇಂದ್ರ ರೆಡ್ಡಿ ಇನ್ನೂ ಮೂರು ಮತಗಳನ್ನು ಗಳಿಸಬೇಕಿದೆ, ಆ ಮತಗಳನ್ನು ಬಿಜೆಪಿ ವರಿಷ್ಠರು ದೊರಕಿಸಿಕೊಡುತ್ತಾರೆಂಬ ನಿರೀಕ್ಷೆಯಲ್ಲಿದ್ದಾರೆ. ಕಳೆದ ಅನೇಕ ಚುನಾವಣೆಗಳಲ್ಲಿ ಅಡ್ಡ ಮತದಾನದಿಂದ ಐದನೇ ಅಭ್ಯರ್ಥಿ ಆಯ್ಕೆಗೊಂಡು ಅಧಿಕೃತ ಅಭ್ಯರ್ಥಿಗಳು ಸೋತಿರುವುದು ಕರ್ನಾಟಕದ ಇತಿಹಾಸದ ಪುಟಗಳಲ್ಲಿದೆ.

ಕುಪೇಂದ್ರರೆಡ್ಡಿ ಅಲ್ಲದೆ, ಕಾಂಗ್ರೆಸ್‌ನ ಅಜಯ್ ಮಾಕೆನ್, ಜಿ.ಸಿ.ಚಂದ್ರಶೇಖರ್, ಡಾ. ಸಯ್ಯದ್ ನಾಸಿರ್ ಹುಸೇನ್ ನಾಮಪತ್ರ ಸಲ್ಲಿಸಿದ್ದರೆ, ಬಿಜೆಪಿಯ ನಾರಾಯಣಕೃಷ್ಣಾಸಾ ಭಾಂಡಗೆ ಅವರು ಪಕ್ಷದ ಅಧಿಕೃತ ಅಭ್ಯರ್ಥಿಗಳಾಗಿ ಉಮೇದುವಾರಿಕೆ ಸಲ್ಲಿಸಿದ್ದಾರೆ.

ಎಲ್ಲಾ ಪಕ್ಷದಲ್ಲೂ ಸ್ನೇಹಿತರಿದ್ದಾರೆ: ಕುಪೇಂದ್ರ ರೆಡ್ಡಿ ನಾಮಪತ್ರ ಸಲ್ಲಿಕೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಜೆಡಿಎಸ್ ರಾಜ್ಯಾಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ನಮ್ಮ ಅಭ್ಯರ್ಥಿಗೆ ಎಲ್ಲಾ ಪಕ್ಷಗಳಲ್ಲೂ ಸ್ನೇಹಿತರಿದ್ದಾರೆ, ಅವರು ಆತ್ಮಸಾಕ್ಷಿ ಮತಗಳನ್ನು ಪಡೆದು ಗೆಲುವಿನ ಗಡಿ ದಾಟಲಿದ್ದಾರೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ನಮಗೂ ಸ್ನೇಹಿತರಿದ್ದಾರೆ: ಉಭಯ ನಾಯಕರ ಮಾತಿಗೆ ತಿರುಗೇಟು ನೀಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ನಮಗೂ ಎಲ್ಲ ಪಕ್ಷಗಳಲ್ಲಿ ಸ್ನೇಹಿತರಿದ್ದಾರೆ, ನಮ್ಮ ಮೂವರು ಅಭ್ಯರ್ಥಿಗಳಿಗೂ ಆತ್ಮಸಾಕ್ಷಿ ಮತಗಳು ಬೀಳಲಿವೆ ಎಂದರು.

ಬಿಜೆಪಿ ಮತ್ತು ಜೆಡಿಎಸ್‌ನವರು ಕುದುರೆ ವ್ಯಾಪಾರ ಮಾಡುತ್ತಾರೆ, ಅವರು ಅದಕ್ಕೆ ಹೆಸರು ವಾಸಿ, ಫೆಬ್ರವರಿ 27ರಂದು ಫಲಿತಾಂಶ ಹೊರಬೀಳುತ್ತದೆ. ಎಷ್ಟು ಮತಗಳು ಬಿಜೆಪಿ ಅವರಿಗೆ ಸಿಗಲಿದೆ ಎಂಬುದನ್ನು ಕಾದು ನೋಡಿ ಎಂದು ಮಾರ್ಮಿಕವಾಗಿ ನುಡಿದರು.

ಸೇಡು ತೀರಿಸಿಕೊಳ್ಳುವ ತವಕ

2016ರಲ್ಲಿ ವಿಧಾನಸಭೆಯಿಂದ ರಾಜ್ಯಸಭೆಗೆ ನಡೆದ ಚುನಾವಣೆಯಲ್ಲಿ ಜೆಡಿಎಸ್‌ನ 8 ಸದಸ್ಯರನ್ನು ಸೆಳೆದುಕೊಳ್ಳುವ ಮೂಲಕ ತನ್ನ ಅಭ್ಯರ್ಥಿ ಕೆ.ಸಿ.ರಾಮಮೂರ್ತಿ ಗೆಲ್ಲಿಸಿಕೊಂಡು, ಜೆಡಿಎಸ್ ಅಭ್ಯರ್ಥಿ ಬಿ.ಎಂ.ಫಾರೂಕ್ ಸೋಲಿಗೆ ಕಾಂಗ್ರೆಸ್ ಕಾರಣವಾಗಿತ್ತು. ಈಗ ಕುಮಾರಸ್ವಾಮಿ ಕಾಂಗ್ರೆಸ್ ಸದಸ್ಯರ ಸೆಳೆದುಕೊಳ್ಳುವ ಕಾರ್ಯತಂತ್ರ ರೂಪಿಸಿದ್ದು, ಅವರ ಪ್ರಯತ್ನ ಫಲಿಸಿದರೆ 8 ವರ್ಷಗಳ ಹಿಂದಿನ ಸೇಡು ತೀರಿಸಿಕೊಂಡಂತಾಗುತ್ತದೆ.

3ನೇ ಟೆಸ್ಟ್: ಭಾರತಕ್ಕೆ ರೋಹಿತ್, ಜಡೇಜಾ ಆಸರೆ

● ಮೊದಲ ದಿನದಂತ್ಯಕ್ಕೆ 326/5 ● ಅರ್ಧಶತಕ ಸಿಡಿಸಿ ಮಿಂಚಿದ ಸರ್ಫರಾಜ್ ಖಾನ್



ರಾಜ್‌ಕೋಟ್, ಫೆ.15– ನಾಯಕ ರೋಹಿತ್ ಶರ್ಮಾ ಹಾಗೂ ರವೀಂದ್ರಜಡೇಜಾ ಅವರ ಆಕರ್ಷಕ ಶತಕ, ಸರ್ಫರಾಜ್ ಖಾನ್ ಅರ್ಧಶತಕದ ನೆರವಿನಿಂದ ಇಂಗ್ಲೆಂಡ್ ವಿರುದ್ಧದ ಮೂರನೇ ಟೆಸ್ಟ್ ಪಂದ್ಯದ ಮೊದಲ ದಿನದಾಟದ ಅಂತ್ಯಕ್ಕೆ ಭಾರತ 5 ವಿಕೆಟ್ ನಷ್ಟಕ್ಕೆ 326 ರನ್ ಗಳಿಸಿದೆ.

ಇಲ್ಲಿನ ನಿರಂಜನ್ ಶಾ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಭಾರತ ಬೃಹತ್ ಮೊತ್ತ ಕಲೆಹಾಕುವ ಲೆಕ್ಕಾಚಾರದೊಂದಿಗೆ ಕಣಕ್ಕಿಳಿಯಿತು. ಆದರೆ ತಂಡದ ಮೊತ್ತ 33 ರನ್ ಆಗುವಷ್ಟರಲ್ಲಿ ಯಶಸ್ವಿ ಜೈಸ್ವಾಲ್ 10 ರನ್, ರಜತ್ ಪಾಟೀದಾರ್ 5 ರನ್ ಹಾಗೂ ಶೂನ್ಯಕ್ಕೆ ಶುಭ್‌ಮನ್ ಗಿಲ್ ವಿಕೆಟ್ ಒಪ್ಪಿಸಿದರು.

ಈ ವೇಳೆ ಜೊತೆಯಾದ ನಾಯಕ ರೋಹಿತ್ ಶರ್ಮಾ ಹಾಗೂ ರವೀಂದ್ರ ಜಡೇಜಾ ದ್ವಿಶತಕದ ಜೊತೆಯಾಟ ವಾಡುವ ಮೂಲಕ ಸಂಕಷ್ಟಕ್ಕೆ ಸಿಲುಕಿದ್ದ ತಂಡಕ್ಕೆ ಆಸರೆಯಾದರು. ಆರಂಭದಲ್ಲಿ ಎಚ್ಚರಿಕೆಯ ಬ್ಯಾಟಿಂಗ್ ನಡೆಸಿದ ಈ ಜೋಡಿ, ಪಿಚ್‌ಗೆ ಹೊಂದಿಕೊಳ್ಳುತ್ತಿದ್ದಂತೆಯೇ ರನ್ ಗಳಿಕೆಗೆ ಚುರುಕು ಮುಟ್ಟಿಸಿದರು. ರೋಹಿತ್ ಶರ್ಮಾ 196 ಎಸೆತಗಳಲ್ಲಿ 14 ಬೌಂಡರಿ ಹಾಗೂ 3 ಸಿಕ್ಸರ್ ಒಳಗೊಂಡ 131 ರನ್ ಗಳಿಸಿ ಔಟಾದರು. ಇದರೊಂದಿಗೆ ಜಡೇಜಾ ಅವರೊಂದಿಗಿನ 204ರನ್‌ಗಳ ಜೊತೆಯಾಟ ಅಂತ್ಯವಾಯಿತು. ಮತ್ತೊಂದೆಡೆ ರೋಹಿತ್‌ಗೆ ಉತ್ತಮ ಸಾಥ್ ನೀಡಿದ ಜಡೇಜಾ ಆಕರ್ಷಕ ಶತಕ ಸಿಡಿಸಿದರು. ಇಂಗ್ಲೆಂಡ್ ಬೌಲರ್‌ಗಳನ್ನು ಸಮರ್ಥವಾಗಿ ಎದುರಿಸಿದ ಜಡೇಜಾ ಟೆಸ್ಟ್ ವೃತ್ತಿ ಜೀವನದ ನಾಲ್ಕನೇ ಟೆಸ್ಟ್ ಶತಕ ಸಿಡಿಸಿ ಸಂಭ್ರಮಿಸಿದರು. ಸದ್ಯ ಜಡೇಜಾ 212 ಎಸೆತಗಳಲ್ಲಿ 9 ಬೌಂಡರಿ ಹಾಗೂ 2 ಸಿಕ್ಸರ್ ಸಹಿತ ಅಜೇಯ 110 ರನ್ ಗಳಿಸಿ ಎರಡನೇ ದಿನಕ್ಕೆ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ.

ಪಾದಾರ್ಪಣೆ ಪಂದ್ಯದಲ್ಲಿ ಸರ್ಫರಾಜ್ ಫಿಫ್ಟಿ: ದೇಶಿ ಕ್ರಿಕೆಟ್‌ನಲ್ಲಿ ಭರ್ಜರಿ ರನ್ ಕಲೆಹಾಕಿ ಭಾರತ ತಂಡಕ್ಕೆ ಎಂಟ್ರಿ ಕೊಟ್ಟಿರುವ ಸರ್ಫರಾಜ್ ಖಾನ್ ಪಾದಾರ್ಪಣೆ ಪಂದ್ಯದಲ್ಲೇ ಸ್ಫೋಟಕ ಅರ್ಧಶತಕ ಸಿಡಿಸಿ ಮಿಂಚಿದರು. ಅಂತಿಮವಾಗಿ ಸರ್ಫರಾಜ್ ಖಾನ್ 66 ಎಸೆತಗಳಲ್ಲಿ 9 ಬೌಂಡರಿ ಹಾಗೂ 1 ಸಿಕ್ಸರ್ ಒಳ ಗೊಂಡ 62 ರನ್ ಬಾರಿಸಿ ರನೌಟ್ ಆಗಿ ಪೆವಿಲಿಯನ್ ಸೇರಿದರು. ಇಂಗ್ಲೆಂಡ್ ಪರ ಮಾರ್ಕ್ ವುಡ್ 3, ಟಾಮ್ ಹಾರ್ಟ್ಲಿ ಒಂದು ವಿಕೆಟ್ ಪಡೆದರು.

ಪಕ್ಷ ತೊರೆದ ಟಿಎಂಸಿ ಸಂಸದೆ ಮಿಮಿ ಚಕ್ರವರ್ತಿ

ಕೋಲ್ಕತಾ, ಫೆ15– ಟಿಎಂಸಿ ಸಂಸದೆ ಮಿಮಿ ಚಕ್ರವರ್ತಿ ಪಕ್ಷ ತೊರೆದಿದ್ದಾರೆ. ತನ್ನ ಕ್ಷೇತ್ರವಾದ ಜಾದವ್‌ಪುರದಲ್ಲಿ ತಮ್ಮ ಪಕ್ಷದ ಸ್ಥಳೀಯ ನಾಯಕತ್ವದ ಬಗ್ಗೆ ಅತೃಪ್ತಿ ಹೊಂದಿರುವುದಾಗಿ ಮಿಮಿ ಹೇಳಿದ್ದಾರೆ. ಬಂಗಾಳಿ ಚಲನಚಿತ್ರ ನಟಿಯೂ ಆಗಿರುವ ಮಿಮಿ ಚಕ್ರವರ್ತಿ ಅವರು ಪಕ್ಷದ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರನ್ನು ಭೇಟಿ ಮಾಡಿ, ಸಂಸದೆ ಸ್ಥಾನವನ್ನು ತ್ಯಜಿಸುವ ಬಯಕೆ ವ್ಯಕ್ತಪಡಿಸಿದ್ದಾರೆ. ಜಾದವ್‌ಪುರದಿಂದ ಮೊದಲ ಬಾರಿಗೆ ಸಂಸದೆಯಾಗಿರುವ ಚಕ್ರವರ್ತಿ ಅವರು, ಇಂದು ಮಧ್ಯಾಹ್ನ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರನ್ನು ಭೇಟಿ ಮಾಡಿದ್ದಾರೆ. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಮಿಮಿ, ಇಂದು, ನಾನು ನಮ್ಮ ಪಕ್ಷದ ವರಿಷ್ಠರನ್ನು ಭೇಟಿ ಮಾಡಿದ್ದೇನೆ. ಫೆಬ್ರವರಿ 13 ರಂದು ನಾನು ಅವರಿಗೆ ನನ್ನ ರಾಜೀನಾಮೆ ಸಲ್ಲಿಸಿದ್ದೇನೆ ಎಂದರು.

ಸರ್ಕಾರಿ ಶಾಲೆಗಳಲ್ಲಿ ಕನ್ನಡ, ಇಂಗ್ಲೀಷ್ ಎರಡೂ ಮಾಧ್ಯಮದ ಬೋಧನೆ

●ಸ್ಪರ್ಧಾತ್ಮಕ ಜಗತ್ತಿಗೆ ಗ್ರಾಮೀಣ ಮಕ್ಕಳ ಅಣಿಗೊಳಿಸುವ ಪ್ರಯತ್ನ
●ವಿಧಾನಸಭೆಯಲ್ಲಿ ಶಿಕ್ಷಣ ಸಚಿವ ಮಧು ಬಂಗಾರಪ್ಪ ಸಮರ್ಥನೆ

ಬೆಂಗಳೂರು, ಫೆ.15(ಕೆಎಂಶಿ)– ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಕನ್ನಡದ ಜೊತೆಗೆ ಇಂಗ್ಲೀಷ್ ಮಾಧ್ಯಮವನ್ನೂ ಆರಂಭಿಸಿ ಎರಡೂ ಭಾಷೆಗಳಲ್ಲೂ ಬೋಧನಾ ಸೌಲಭ್ಯ ಕಲ್ಪಿಸಲಾಗುವುದೆಂದು ಪ್ರಾಥಮಿಕ ಶಿಕ್ಷಣ ಸಚಿವ ಮಧು ಬಂಗಾರಪ್ಪ ವಿಧಾನಸಭೆಯಲ್ಲಿಂದು ತಿಳಿಸಿದ್ದಾರೆ.



ಗ್ರಾಮೀಣ ಮಕ್ಕಳು ಇಂಗ್ಲೀಷ್ ಕಲಿತು ನಗರ, ಪಟ್ಟಣಗಳ ಮಕ್ಕಳಂತೆ ಉನ್ನತ ವ್ಯಾಸಂಗಕ್ಕೆ ಅವಕಾಶ ಮಾಡಿಕೊಡುವ ಉದ್ದೇಶದಿಂದ ಇಂತಹ ತೀರ್ಮಾನ ಮಾಡಿದ್ದೇವೆ.

ಪೋಷಕರು ತಮ್ಮ ಮಕ್ಕಳನ್ನು ಯಾವ ಭಾಷಾ ಶಿಕ್ಷಣದಲ್ಲಿ ಕಲಿಸಬೇಕೆಂಬ ತೀರ್ಮಾನ ಕೈಗೊಂಡು ಅದೇ ಶಾಲೆಗಳಲ್ಲಿ ಕಲಿಕೆಗೆ ಅವಕಾಶ ಮಾಡಿಕೊಡಬಹುದಾಗಿದೆ.

ಗ್ರಾಮೀಣ ಭಾಗದಲ್ಲಿ ಸರ್ಕಾರಿ ಕನ್ನಡ ಶಾಲೆಗಳಿಗೆ ಮಕ್ಕಳ ಕೊರತೆ ಎದ್ದು ಕಾಣುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರ ಈ ತೀರ್ಮಾನಕ್ಕೆ ಬಂದಿದೆ ಎಂದರು.

ಪ್ರಶ್ನೋತ್ತರ ವೇಳೆಯಲ್ಲಿ ಅರಗ ಜ್ಞಾನೇಂದ್ರ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಪೋಷಕರಿಗೆ ತಮ್ಮ ಮಕ್ಕಳನ್ನು ಇಂಗ್ಲೀಷ್ ಮಾಧ್ಯಮದಲ್ಲಿ ಓದಿಸುವ ಹಪಾಹಪಿ ಹೆಚ್ಚಾಗಿದೆ. ಕಷ್ಟ ಪಟ್ಟಾದರೂ ಹಣ ಖರ್ಚು ಮಾಡಿ ದೂರ ದೂರುಗಳಿಗೆ ಮಕ್ಕಳನ್ನು ಇಂಗ್ಲೀಷ್ ಶಾಲೆಗಳಲ್ಲಿ ಕಲಿಕೆಗೆ ಕಳುಹಿಸುತ್ತಿದ್ದಾರೆ.


ಇದರಿಂದ ಸರ್ಕಾರಿ ಶಾಲೆಗಳಿಗೆ ಮಕ್ಕಳ ಕೊರತೆ ಕಾಣುತ್ತಿದೆ, ಇದನ್ನು ಗಮನದಲ್ಲಿಟ್ಟುಕೊಂಡು ನಮ್ಮ ಶಿಕ್ಷಕರಿಗೂ ಇಂಗ್ಲೀಷ್ ಬೋಧನಾ ತರಬೇತಿ ನೀಡಿರುವುದಲ್ಲದೆ, ಹೊಸ ನೇಮಕಾತಿ ಸಂದರ್ಭದಲ್ಲಿ ಕನ್ನಡ ಮತ್ತು ಇಂಗ್ಲೀಷ್ ಮಾಧ್ಯಮಗಳಲ್ಲಿ ಕಲಿಕೆ ಮಾಡಿದವರಿಗೆ ಅವಕಾಶ ಕಲ್ಪಿಸಲಾಗುತ್ತಿದೆ.

ಕಳೆದ ಎರಡು ವರ್ಷಗಳಲ್ಲಿ 59 ಇಂಗ್ಲೀಷ್ ಮಾಧ್ಯಮ ಸರ್ಕಾರಿ ಶಾಲೆಗಳನ್ನು ಆರಂಭಿಸಿದ್ದರೂ ಇವುಗಳಿಗೆ ಮೂಲಸೌಕರ್ಯ ಮತ್ತು ಮಕ್ಕಳ ಕೊರತೆ ಇದೆ.

ಖಾಸಗಿ ಸಹಭಾಗಿತ್ವದಲ್ಲಿ 500 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು 2025ರ ವೇಳೆಗೆ ತೆರೆದು, ಅಲ್ಲಿ ಗ್ರಾಮೀಣ ಮಕ್ಕಳಿಗೂ ಖಾಸಗಿ ಆಂಗ್ಲ ಮಾಧ್ಯಮ ಶಾಲೆಗಳ ಮಾದರಿಯಲ್ಲೇ ಮೂಲಸೌಕರ್ಯ ಮತ್ತು ಶಿಕ್ಷಣ ನೀಡಲಾಗುವುದು ಎಂದರು.

ಒಂದು ಕೈಯ್ಯಲ್ಲಿ ಗ್ಯಾರಂಟಿ ಕೊಟ್ಟು ಹತ್ತು ಕೈಯ್ಯಲ್ಲಿ ಹಣ ಕೀಳುತ್ತಿದ್ದೀರಿ...!

● ಸರ್ಕಾರದ ವಿರುದ್ಧ ಮಾಜಿ ಸಿಎಂ ಕುಮಾರಸ್ವಾಮಿ ವಾಗ್ದಾಳಿ ● ಗ್ಯಾರಂಟಿಯಿಂದ ಜನರ ಆರ್ಥಿಕ ಶಕ್ತಿ ಹೆಚ್ಚಿದೆ ಎನ್ನುತ್ತೀರಿ; ಇತ್ತ ಮುದ್ರಾಂಕ ಶುಲ್ಕ ಹತ್ತು ಪಟ್ಟು ಏರಿಸಿದ್ದೀರಾ ● ಇದೇನು 'ಸಿದ್ದನಾಮಿಕ್ಸ್' ಆರ್ಥಿಕತೆಯ? ● ಒಂದೆಡೆ ಗ್ಯಾರಂಟಿ; ಮತ್ತೊಂದೆಡೆ 90 ಜನರಿಗೆ ಸಂಪುಟ ದರ್ಜೆ ಭಾಗ್ಯ; ಜನರ ತೆರಿಗೆ ಹಣ ಪೋಲು



ಬೆಂಗಳೂರು, ಫೆ.15–(ಕೆಎಂಶಿ)– ಒಂದು ಕೈಯ್ಯಲ್ಲಿ ಗ್ಯಾರಂಟಿಗಳನ್ನು ಕೊಟ್ಟು ಜನರನ್ನು ಬಡತನದಿಂದ ಮಧ್ಯಮ ವರ್ಗಕ್ಕೆ ತಂದಿದ್ದೇವೆ ಎನ್ನುವ ರಾಜ್ಯ ಸರ್ಕಾರ, ಹಾಗೆ ಕೊಟ್ಟು ಹತ್ತು ಕೈಗಳಲ್ಲಿ ಆ ಹಣವನ್ನು ಕಿತ್ತುಕೊಳ್ಳುತ್ತಿದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಆರೋಪಿಸಿದರು.

ಇದು ರಾಜ್ಯವನ್ನು ವಿನಾಶದ ಅಂಚಿಗೆ ತಳ್ಳುತ್ತಿರುವ 'ಸಿದ್ದನಾಮಿಕ್ಸ್' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಟೀಕಾಪ್ರಹಾರ ನಡೆಸಿದ್ದಾರೆ.

ವಿಧಾನಸಭೆಯಲ್ಲಿ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಐದು ಗ್ಯಾರಂಟಿಗಳ ಮೂಲಕ ಜನರ ಆರ್ಥಿಕ ಶಕ್ತಿ, ಕೊಳ್ಳುವ ಶಕ್ತಿ ಹೆಚ್ಚಿದೆ ಎನ್ನುವ ಸರ್ಕಾರ, ಮುದ್ರಾಂಕ ಶುಲ್ಕವನ್ನು ಐದು ಪಟ್ಟು ಹೆಚ್ಚಿಸಿದೆ.

ಮಾರ್ಗಸೂಚಿ ದರ (ಗೈಡ್ಲೆನ್ಸ್ ವ್ಯಾಲ್ಯೂ) ಆಸ್ತಿ ದರಕ್ಕಿಂತ ಹೆಚ್ಚಾಗಿದೆ. ಅಬ್ಕಾರಿ ಸುಂಕ ಏರುತ್ತಲೇ ಇದೆ. ಒಂದು ಕೈಯ್ಯಲ್ಲಿ ಗ್ಯಾರಂಟಿ ಅಂತ ಕೊಟ್ಟು ಹತ್ತು ಕೈಗಳಲ್ಲಿ ತೆರಿಗೆ ಹೇರುವ ನೀತಿ ಆರ್ಥಿಕತೆಗೆ ಅದ್ಯಾವ ಸೀಮೆಯ ಉತ್ತೇಜನ ನೀಡುತ್ತದೆ ಎಂದು ಅವರು ಪ್ರಶ್ನೆ ಮಾಡಿದರು.

ನಾನು ಹಿಂದೆ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ಮನಮೋಹನಾಮಿಕ್ಸ್ ಬಗ್ಗೆ ಕೇಳಿದ್ದೇನೆ. ಈಗ ಪ್ರಧಾನಿ ನರೇಂದ್ರ ಮೋದಿ ಅವರ ಮೋದಿನಾಮಿಕ್ಸ್ ಬಗ್ಗೆ ತಿಳಿದಿದ್ದೇನೆ. ಜಪಾನ್ ಮಾಜಿ ಪ್ರಧಾನಿ ದಿವಂಗತ ಶಿಂಜೋ ಅಬೆ ಅವರ ಅಬೆನಾಮಿಕ್ಸ್ ಬಗ್ಗೆಯೂ ತಿಳಿದುಕೊಂಡಿದ್ದೇನೆ. ರಾಜ್ಯದಲ್ಲಿ ಗ್ಯಾರಂಟಿ ಕೊಟ್ಟಂಗೆ ಕೊಟ್ಟು ತೆರಿಗೆ ವಿಧಿಸಿ ಜನರ ರಕ್ತ ಹೀರುತ್ತಿರುವ 'ಸಿದ್ದನಾಮಿಕ್ಸ್' ಎಂಬ ಅನಾಹುತಕಾರಿ, ವಿನಾಶಕಾರಿ, ಜನವಿರೋಧಿ, ನಾಡದ್ರೋಹಿ ಆರ್ಥಿಕತೆಯನ್ನು ನಾನು ಈಗ ನೋಡುತ್ತಿದ್ದೇನೆ ಎಂದು ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು.

ಈಗ ನನ್ನ ತೆರಿಗೆ ನನ್ನ ಹಕ್ಕು ಎನ್ನುತ್ತಿದೆ ಸರ್ಕಾರ. ಹಿಂದೆ ನನ್ನ ನೀರು ನನ್ನ ಹಕ್ಕು ಎಂದರು. ತಮಿಳುನಾಡಿಗೆ ಈಗಲೂ ಕಾವೇರಿ ನೀರು ಹರಿದು ಹೋಗುತ್ತಿದೆ. ಮೇಕೆದಾಟು ಎಲ್ಲಿದೆಯೋ ಅಲ್ಲೇ ಇದೆ. ಚಿನ್ನದ ಮೊಟ್ಟೆ ಇಡುವ ಕೋಳಿಯ ಕತ್ತು ಕತ್ತರಿಸುತ್ತಿದೆ ಕೇಂದ್ರ ಸರ್ಕಾರ ಎಂದು ಸಿದ್ದರಾಮಯ್ಯ ಅವರು ಆರೋಪ ಮಾಡುತ್ತಿದ್ದಾರೆ. ಆದರೆ, ಮುದ್ರಾಂಕ ಶುಲ್ಕ, ಗೈಡ್ಲೆನ್ಸ್ ವ್ಯಾಲ್ಯೂ, ಅಬ್ಕಾರಿ ಸುಂಕ ಸೇರಿ ರಾಜ್ಯದಲ್ಲಿ ತೆರಿಗೆಗಳನ್ನೆಲ್ಲಾ ಹೆಚ್ಚಿಸಲಾಗಿದೆ ಎಂದು ದೂರಿದರು

ತೆರಿಗೆ ಹಣ ಪೋಲು: ರಾಜ್ಯದಲ್ಲಿ ತೀವ್ರ ಬರ ಇದೆ ಗ್ಯಾರಂಟಿಗಳಿಗೆ ಹಣ ಇಲ್ಲಾ ಎನ್ನುತ್ತಾರೆ. ಆದರೂ 74 ಶಾಸಕರು ಸೇರಿ 90 ಜನರಿಗೆ ಸಂಪುಟ ದರ್ಜೆ ಭಾಗ್ಯ ನೀಡಿ ಜನರ ತೆರಿಗೆ ಹಣ ಪೋಲು ಮಾಡಲಾಗುತ್ತಿದೆ. ಈ ಪೈಕಿ ಮುಖ್ಯಮಂತ್ರಿ ಕಚೇರಿಯಲ್ಲೇ 9 ಜನಕ್ಕೆ ಸಂಪುಟ ಭಾಗ್ಯ ನೀಡಲಾಗಿದೆ. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಗೂ (KSFC) ಅಧ್ಯಕ್ಷರನ್ನಾಗಿ ಶಾಸಕರನ್ನು ನೇಮಕ ಮಾಡಿದ್ದಾರೆ. ಇದಕ್ಕಿಂತ ಸೋಜಿಗಾ ಉಂಟಾ ಎಂದು ಅವರು ಪ್ರಶ್ನಿಸಿದರು.

ಸದನದಲ್ಲಿ ಸಿಎಜಿ ವರದಿ ಮಂಡನೆ ಆಗಿದೆ. 47 ವರ್ಷವಾದರೂ ತನ್ನದೇ ಅಧೀನದಲ್ಲಿರುವ ನಿಗಮ, ಮಂಡಳಿ, ಸಂಘ–ಸಂಸ್ಥೆಗಳಿಗೆ ಕೊಟ್ಟಿರುವ ಸಾಲ ಸೇರಿ ಬಡ್ಡಿಯೊಂದಿಗೆ 15,856 ಕೋಟಿ ರೂ. ವಸೂಲಿ ಆಗಬೇಕಿದೆ. ಆದರೆ, ಅದೇ ನಿಗಮ–ಮಂಡಳಿಗಳಿಗೆ ಅಧ್ಯಕ್ಷರನ್ನು ನೇಮಕ ಮಾಡಿ ಅವುಗಳನ್ನು ಮತ್ತಷ್ಟು ನಷ್ಟದ ಕೂಪಕ್ಕೆ ತಳ್ಳಲಾಗುತ್ತಿದೆ ಎಂದು ಅವರು ಹೇಳಿದರು.

ಬ್ರ್ಯಾಂಡ್ ಬೆಂಗಳೂರು ಎನ್ನುತ್ತಿದ್ದಾರೆ. ಸಂಗಮದಿಂದ ಮೇಕೆದಾಟು ಪಾದಯಾತ್ರೆ ಮಾಡಿದ್ದನ್ನೂ ನೋಡಿದ್ದೇವೆ. ಆ ಮೇಕೆದಾಟು ಕಳೆದ 8 ತಿಂಗಳಲ್ಲಿ ಎಲ್ಲಿ ಶುರುವಾಯಿತೋ ಈಗಲೂ ಅಲ್ಲಿಯೇ ನಿಂತಿದೆ. ಕೃಷ್ಣಾ ಮೇಲ್ದಂಡೆ ಯೋಜನೆ ಏನಾಯಿತು, ಎಲ್ಲಿಗೆ ಬಂತು? ಅಭಿವೃದ್ಧಿ ಯೋಜನೆಗಳಿಗೆ ಹಣ ಕೇಳಲೇಬೇಡಿ ಎನ್ನುವಂಥ ಪರಿಸ್ಥಿತಿ ಇದೆ ಎಂದರು.

ಕೇಂದ್ರ ಸರ್ಕಾರ ಮಾರುತ್ತಿರುವ 'ಭಾರತ್ ಅಕ್ಕಿ' ಬಗ್ಗೆ ಆಹಾರ ಸಚಿವರು ನೀಡಿರುವ ಹೇಳಿಕೆಯನ್ನು ಗಮನಿಸಿದ್ದೇನೆ. ಕೇಂದ್ರ ಸರ್ಕಾರ 'ಭಾರತ್ ಅಕ್ಕಿ'ಯನ್ನು ಕೆಜಿಗೆ 29 ರೂ.ನಂತೆ ಕೊಡುತ್ತಿರುವುದರಿಂದ ತನ್ನ ಖಜಾನೆಯನ್ನು ಖಾಲಿ ಮಾಡುತ್ತಿದೆ. ಆದರೆ, ಇವರು ಕೆಜಿ ಅಕ್ಕಿಗೆ 34 ರೂಪಾಯಿಯನ್ನು ಬಿಪಿಎಲ್ ಕಾರ್ಡುದಾರರ ಖಾತೆಗೆ ಜಮೆ ಮಾಡುತ್ತಿದ್ದಾರೆ. ಅದು ನಿಯಮಿತವಾಗಿ ಜಮೆಯೂ ಆಗುತ್ತಿಲ್ಲ. ಹಾಗಾದರೆ, ರಾಜ್ಯದ ಪರಿಸ್ಥಿತಿ ಏನಾಗಬೇಡ ಎಂದು ಸಚಿವ ಕೆ.ಹೆಚ್.ಮುನಿಯಪ್ಪ ಅವರಿಗೆ ಟಾಂಗ್ ಕೊಟ್ಟರು ಕುಮಾರಸ್ವಾಮಿ.

ನಾವು ನುಡಿದಂತೆ ನಡೆದಿದ್ದೇವೆ ಎಂದು ಹೇಳಿದ್ದನ್ನೇ ಹೇಳುತ್ತಿದೆ ಸರ್ಕಾರ. ವಿಧಾನಸೌಧದ ಪೂರ್ವ ದ್ವಾರದಲ್ಲಿ ಕೆಂಗಲ್ ಹನುಮಂತಯ್ಯನವರು ಸರ್ಕಾರದ ಕೆಲಸ ದೇವರ ಕೆಲಸ ಎಂದು ಬರೆಸಿದ್ದಾರೆ. ನೀವು ನುಡಿದಂತೆ ನಡೆದಿದ್ದೇವೆ ಎಂದು ಬರೆಸಬಹುದು. ಅದೂ ಚಿರಸ್ಥಾಯಿಯಾಗಿ ಉಳಿಯಲಿದೆ ಎಂದು ಮಾಜಿ ಮುಖ್ಯಮಂತ್ರಿಗಳು ಗೇಲಿ ಮಾಡಿದರು.

ಕೇಂದ್ರ–ರಾಜ್ಯ ಸಾಮರಸ್ಯ; ಸಿಎಂ–ಪಿಎಂ ಬಾಂಧವ್ಯ ಇರಬೇಕು

ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ನಡುವೆ ಸಾಮರಸ್ಯ ಇರಬೇಕು. ಪ್ರಧಾನಿಗಳು ಮತ್ತು ಮುಖ್ಯಮಂತ್ರಿಗಳ ನಡುವೆ ಉತ್ತಮ ಬಾಂಧವ್ಯ ಇರಬೇಕು. ಇಂಥ ಸತ್ಸಂಪ್ರದಾಯಕ್ಕೆ ನಾನೇ ಉದಾಹರಣೆ ಎಂದು ಕುಮಾರಸ್ವಾಮಿ ಹೇಳಿದರು.

ನಾನು ಎರಡು ಸಲ ಮುಖ್ಯಮಂತ್ರಿ ಆಗಿದ್ದೆ. ಈ ರಾಜ್ಯದ ಆಕಸ್ಮಿಕ ಮುಖ್ಯಮಂತ್ರಿ ನಾನು. ಕೆಲವರು ಲಾಟರಿ ಮುಖ್ಯಮಂತ್ರಿ ಅಂತಲೂ ಕರೆಯುತ್ತಾರೆ. ನನಗೇನೂ ಬೇಜಾರಿಲ್ಲ. ಡಾ.ಮನಮೋಹನ್ ಸಿಂಗ್, ನರೇಂದ್ರ ಮೋದಿ ಪ್ರಧಾನಿ ಆಗಿದ್ದರು. ಈಗಲೂ ಮೋದಿ ಅವರೇ ಪ್ರಧಾನಿ ಆಗಿದ್ದಾರೆ. ನಾನೆಲ್ಲೂ ಸಂಘರ್ಷಕ್ಕೆ ಅವಕಾಶ ಕೊಡಲಿಲ್ಲ. ಕೇಂದ್ರ ಸರ್ಕಾರ, ಕೇಂದ್ರ ಸಚಿವರು, ಪ್ರಧಾನಿಗಳ ಜತೆ ನನಗೆ ಯಾವ ಸಮಸ್ಯೆಯೂ ಆಗಲಿಲ್ಲ ಎಂದು ಅವರು ತಿಳಿಸಿದರು.

2018ರಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ರಕ್ಷಣಾ ಇಲಾಖೆಯ ವಶದಲ್ಲಿದ್ದ ಭೂಮಿಯ ಅಗತ್ಯತೆ ಇತ್ತು. ಈ ಬಗ್ಗೆ ಅಂದು ರಕ್ಷಣಾ ಮಂತ್ರಿಗಳಾಗಿದ್ದ ನಿರ್ಮಲಾ ಸೀತಾರಾಮನ್ ಅವರಿಗೆ ಮನವಿ ಮಾಡಿದ್ದೆ. ಆಗ ಅವರು ವಿಧಾನಸೌಧಕ್ಕೆ ಬಂದು ರಾಜ್ಯದ ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿದ್ದರು.

ಅದರಂತೆ, ರಕ್ಷಣಾ ಸಚಿವರು ವಿಧಾನಸೌಧಕ್ಕೆ ಬಂದರು. ನಾನು ಕೆಂಗಲ್ ಗೇಟಿಗೆ ಹೋಗಿ ಅವರನ್ನು ಬರ ಮಾಡಿಕೊಂಡೆ. ಅಧಿಕಾರಿಗಳು, ಕೆಂಗಲ್ ಗೇಟಿಗೆ ಹೋಗಿ ಕೇಂದ್ರ ಸಚಿವರನ್ನು ಮುಖ್ಯಮಂತ್ರಿಗಳು ಸ್ವಾಗತಿಸುವ ಶಿಷ್ಟಾಚಾರ ಇಲ್ಲ ಎಂದರು. ನನಗೆ ಶಿಷ್ಟಾಚಾರ ಮುಖ್ಯವಲ್ಲ. ರಾಜ್ಯದ ಹಿತ ಮುಖ್ಯ ಎಂದು ಹೇಳಿದೆ. ಅಂದು ರಾಜ್ಯಕ್ಕೆ, ಅದರಲ್ಲಿಯೂ ಬೆಂಗಳೂರು ನಗರಕ್ಕೆ ಒಳ್ಳೆಯದಾಗುವ ಅನೇಕ ನಿರ್ಧಾರಗಳನ್ನು ಕೈಗೊಳ್ಳಲಾಯಿತು. ಇದು ನಾನು ಕರ್ತವ್ಯ ನಿರ್ವಹಿಸಿದ ರೀತಿ ಎಂದು ಕುಮಾರಸ್ವಾಮಿ ಸರ್ಕಾರದ ಮೇಲೆ ಚಾಟಿ ಬೀಸಿದರು.

ಮಂತ್ರಿ ಮುನಿಯಪ್ಪರ ಮಾದರಿ ಸ್ಮರಿಸಿದ ಹೆಚ್‌ಡಿಕೆ

ಹಿಂದೆ ಕೆ.ಎಂ.ಮುನಿಯಪ್ಪ ಅಂತ ಇದ್ದರು. ಮಾಜಿ ಪ್ರಧಾನಿ ದೇವೇಗೌಡರಿಗೆ ಆಪ್ತರು. ಮೂಲತಃ ಚಿಕ್ಕಬಳ್ಳಾಪುರದವರು. ರೇಷ್ಮೆ ಸಚಿವರಾಗಿ ಕೆಲಸ ಮಾಡಿದ್ದರು. ಅಲ್ಲದೆ, ಚಿಕ್ಕಬಳ್ಳಾಪುರದಲ್ಲಿ ಅವರು ಪತ್ರಿಕೆಯ ವರದಿಗಾರರಾಗಿದ್ದರು. ಮಂತ್ರಿಯಾದರೂ ವರದಿಗಾರಿಕೆ ಬಿಟ್ಟಿರಲಿಲ್ಲ. ಪೇಪರ್ ಮುನಿಯಪ್ಪ ಎಂದೇ ಅವರು ಖ್ಯಾತಿಯಾಗಿದ್ದರು. ಅವರು ತಮ್ಮ ಕ್ಷೇತ್ರದ ಕೆಲಸಗಳು ಆಗಬೇಕಾದರೆ ಟಿಪ್ಪಣಿ ಬರೆದು, ಅರ್ಜಿ ಗುರಾಯಿಸಿ ಸುಮ್ಮನೆ ಕೂರುತ್ತಿರಲಿಲ್ಲ. ಬದಲಿಗೆ ಅರ್ಜಿ ಹಿಡಿದುಕೊಂಡು ಮಂತ್ರಿಗಳ ಕಚೇರಿ, ಅಧಿಕಾರಿಗಳ ಕಚೇರಿಗಳಿಗೆ ಸ್ವತಃ ಹೋಗುತ್ತಿದ್ದರು. ಮಂತ್ರಿಗಳೇ ಬಂದರಲ್ಲ ಎಂದು ಇತರೆ ಮಂತ್ರಿಗಳು, ಅಧಿಕಾರಿಗಳು ಅವರ ಕೆಲಸ ಮಾಡಿಕೊಡುತ್ತಿದ್ದರು. ಮುನಿಯಪ್ಪ ಅಂಥವರು ನಮಗೆ ಮಾದರಿ, ಆದರ್ಶ ಎಂದು ಮುನಿಯಪ್ಪ ಅವರನ್ನು ಸದನದಲ್ಲಿ ಸ್ಮರಣೆ ಮಾಡಿದರು ಕುಮಾರಸ್ವಾಮಿ.

ಮಾದರಿ ನೀತಿ ಸಂಹಿತೆ ಕಟ್ಟುನಿಟ್ಟಾಗಿ ಅನುಸರಿಸಿ

• ಅಧಿಕಾರಿಗಳಿಗೆ ಡಿಸಿ ವೆಂಕಟ್‌ರಾಜಾ ಸೂಚನೆ • ಲೋಕಸಭಾ ಚುನಾವಣೆ ಸಂಬಂಧ ಕಾರ್ಯಾಗಾರ



ಮಡಿಕೇರಿ ಜಿಪಂ ಸಭಾಂಗಣದಲ್ಲಿ ಲೋಕಸಭಾ ಚುನಾವಣೆಯ ನೀತಿಸಂಹಿತೆ ಕುರಿತು ನಡೆದ ತರಬೇತಿ ಕಾರ್ಯಾಗಾರದಲ್ಲಿ ಜಿಲ್ಲಾಧಿಕಾರಿ ವೆಂಕಟ್‌ರಾಜಾ ಮಾತನಾಡಿದರು. ಎಸ್ಪಿ ಕೆ.ರಾಮರಾಜನ್, ಎಡಿಸಿ ಬಿ.ಎನ್.ವೀಣಾ, ಎಸಿ ವಿನಾಯಕ ನರ್ವಾಡೆ ಇದ್ದರು.

> ಲೋಕಸಭಾ ಚುನಾವಣೆ ಕರ್ತವ್ಯಕ್ಕೆ ನಿಯೋಜಿಸಿರುವ ಎಲ್ಲಾ ಹಂತದ ಅಧಿಕಾರಿಗಳು ಮತ್ತು ಪೊಲೀಸರು ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕು. ಕೊಡಗು ಜಿಲ್ಲೆಯಲ್ಲಿ ವಿದ್ಯಾವಂತರ ಸಂಖ್ಯೆ ಹೆಚ್ಚಿದ್ದು, ಸಾರ್ವಜನಿಕರಿಗೆ ಸರಿಯಾದ ಮಾಹಿತಿ ನೀಡಿದ್ದಲ್ಲಿ ಸುಗಮವಾಗಿ ಚುನಾವಣೆ ನಡೆಸಬಹುದು. ಚುನಾವಣಾ ಸಂದರ್ಭದಲ್ಲಿ ಯಾವುದೇ ನೀತಿ ಸಂಹಿತೆ ಉಲ್ಲಂಘನೆಯಾಗದಂತೆ ನೋಡಿಕೊಳ್ಳಬೇಕು. ಉಲ್ಲಂಘಿಸಿದ್ದಲ್ಲಿ ನಿಯಮಾನುಸಾರ ದಂಡ ವಿಧಿಸಬೇಕು.
> —ಕೆ.ರಾಮರಾಜನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಮಡಿಕೇರಿ, ಫೆ.15–ಲೋಕಸಭಾ ಚುನಾವಣೆ ಸಂಬಂಧಿಸಿದಂತೆ ಎಫ್‌ಎಸ್‌ಟಿ, ಎಸ್‌ಎಸ್‌ಟಿ, ವಿಎಸ್‌ಟಿ ಸೇರಿದಂತೆ ವಿವಿಧ ತಂಡಗಳಿಗೆ ಚುನಾವಣಾ ಅಧಿಕಾರಿಗಳನ್ನು ನಿಯೋಜಿಸಲಾಗಿದ್ದು, ಕೇಂದ್ರ ಚುನಾವಣಾ ಆಯೋಗದ ನಿರ್ದೇಶನದಂತೆ ಕರ್ತವ್ಯ ನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ವೆಂಕಟ್‌ರಾಜಾ ಸೂಚನೆ ನೀಡಿದರು.

ನಗರದ ಜಿಪಂ ಸಭಾಂಗಣದಲ್ಲಿ ಲೋಕಸಭಾ ಚುನಾವಣೆಯ ಮಾದರಿ ನೀತಿ ಸಂಹಿತೆ ಕುರಿತು ಗುರುವಾರ ನಡೆದ ತರಬೇತಿ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಮುಂಬರುವ ಲೋಕಸಭೆ ಚುನಾವಣೆಯನ್ನು ವ್ಯವಸ್ಥಿತವಾಗಿ ನಡೆಸಲು ಅಧಿಕಾರಿಗಳು ತಮ್ಮ ಕರ್ತವ್ಯ ವ್ಯಾಪ್ತಿಯಲ್ಲಿ ಈಗಿನಿಂದಲೇ ಅಗತ್ಯ ಸಿದ್ಧತೆ ಕೈಗೊಳ್ಳಬೇಕು ಎಂದು ತಿಳಿಸಿದರು.

ಲೋಕಸಭಾ ಚುನಾವಣೆ ದಿನಾಂಕ ಘೋಷಣೆಯಾದ ಕೂಡಲೇ ಸರ್ಕಾರಿ ಕಟ್ಟಡಗಳು, ಸಾರ್ವಜನಿಕ ಸ್ಥಳಗಳು ಸೇರಿದಂತೆ ವಿವಿಧೆಡೆ ಅಳವಡಿಸಿರುವ ಜಾಹೀರಾತು, ಪ್ರಕಟಣೆ, ಬ್ಯಾನರ್‌ಗಳನ್ನು ತೆರವುಗೊಳಿಸಿ ವರದಿ ನೀಡಬೇಕು. ಚುನಾವಣಾ ಆಯೋಗದ ನಿರ್ದೇಶನವನ್ನು ಅಧಿಕಾರಿಗಳು ಕಟ್ಟುನಿಟ್ಟಾಗಿ ಪಾಲಿಸಬೇಕು. ಸಂಶಯಕ್ಕೆ ಅವಕಾಶ ಮಾಡಬಾರದು. ಮಾಹಿತಿ ತಿಳಿಯದಿದ್ದಲ್ಲಿ ಮೇಲಧಿಕಾರಿಗಳ ಗಮನಕ್ಕೆ ತರಬೇಕು ಎಂದು ಸಲಹೆ ನೀಡಿದರು.

ತಮಗೆ ನಿಯೋಜಿಸಿರುವ ಕ್ಷೇತ್ರ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸಬೇಕು. ಚೆಕ್ ಪೋಸ್ಟ್‌ಗಳಲ್ಲಿ ತಪಾಸಣೆ ಮಾಡಬೇಕು. ಹಣ, ಮದ್ಯ ಸಿಕ್ಕಿಬಿದ್ದಲ್ಲಿ ಕ್ರಮ ಜರುಗಿಸಬೇಕು. ಸಿ–ವಿಜಿಲ್ ಆ್ಯಪ್ ಮೂಲಕ ಮಾಹಿತಿ ದೊರೆಯಲಿದ್ದು, ಯಾರೂ ತಡ ಮಾಡದೆ ಜಿಲ್ಲಾ ಚುನಾವಣಾ ವಿಭಾಗಕ್ಕೆ ಮಾಹಿತಿ ನೀಡಬೇಕು. ಮಾದರಿ ನೀತಿಸಂಹಿತೆ ಉಲ್ಲಂಘನೆಯಾಗದಂತೆ ಎಚ್ಚರ ವಹಿಸಬೇಕು. ಮುಕ್ತ, ಶಾಂತಿಯುತ ಹಾಗೂ ನಿರ್ಭೀತಿಯಿಂದ ಚುನಾವಣೆ ನಡೆಸಬೇಕು ಎಂದು ಹೇಳಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಬಿ.ಎನ್.ವೀಣಾ ಮಾತನಾಡಿ, ಯಾವುದೇ ರಾಜಕೀಯ ಪಕ್ಷವಾಗಲೀ, ಅಭ್ಯರ್ಥಿಗಳಾಗಲೀ ಜಾತಿ, ಸಮುದಾಯ, ಧರ್ಮ ಹಾಗೂ ಭಾಷೆ ಸೇರಿದಂತೆ ಪರಸ್ಪರ ವೈಮನಸ್ಸು ಮೂಡಿಸುವಂತಹ ಚಟುವಟಿಕೆಗಳಲ್ಲಿ ತೊಡಗಬಾರದು. ದೇವಾಲಯ, ಮಸೀದಿ, ಚರ್ಚ್‌ಗಳಂತಹ ಪೂಜಾ ಸ್ಥಳಗಳನ್ನು ಚುನಾವಣಾ ಪ್ರಚಾರ ಕಾರ್ಯಕ್ಕೆ ವೇದಿಕೆಯನ್ನಾಗಿ ಬಳಸಬಾರದು. ಈ ಬಗ್ಗೆ ಅಧಿಕಾರಿಗಳು ಎಚ್ಚರವಹಿಸಬೇಕು ಎಂದರು.

ಸಭೆಯಲ್ಲಿ ಉಪವಿಭಾಗಾಧಿಕಾರಿ ವಿನಾಯಕ ನರ್ವಾಡೆ, ಎಫ್‌ಎಸ್‌ಟಿ, ಎಸ್‌ಎಸ್‌ಟಿ, ವಿಎಸ್‌ಟಿ ಸೇರಿದಂತೆ ವಿವಿಧ ತಂಡಗಳಿಗೆ ನಿಯೋಜಿಸಿರುವ ಅಧಿಕಾರಿಗಳು, ಪೊಲೀಸರು ಇದ್ದರು.

ಮುಸ್ಲಿಂ ಜಮಾಅತ್‌ಗಳ ಒಕ್ಕೂಟದಿಂದ ಪ್ರತಿಭಟನೆ



ಜ್ಞಾನವ್ಯಾಪಿ ಮಸೀದಿ ಅತಿಕ್ರಮಣವಾಗಿದೆ ಎಂದು ಆರೋಪಿಸಿ ಮಡಿಕೇರಿ ಮುಸ್ಲಿಂ ಜಮಾಅತ್‌ಗಳ ಒಕ್ಕೂಟದ ಪದಾಧಿಕಾರಿಗಳು ಗುರುವಾರ ಮಡಿಕೇರಿಯಲ್ಲಿ ಪ್ರತಿಭಟನೆ ನಡೆಸಿದರು.

ಮಡಿಕೇರಿ, ಫೆ.15–ಜ್ಞಾನವ್ಯಾಪಿ ಮಸೀದಿ ಅತಿಕ್ರಮಣವಾಗಿದೆ ಎಂದು ಆರೋಪಿಸಿ ಮಡಿಕೇರಿ ಮುಸ್ಲಿಂ ಜಮಾಅತ್‌ಗಳ ಒಕ್ಕೂಟದ ಪದಾಧಿಕಾರಿಗಳು ನಗರದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ನಗರದ ಹಳೇ ಖಾಸಗಿ ಬಸ್ ನಿಲ್ದಾಣ ಬಳಿ ಜಮಾಯಿಸಿದ ಪ್ರತಿಭಟನಾಕಾರರು, ಪ್ರಸ್ತುತ ದಿನಗಳಲ್ಲಿ ಧರ್ಮದ ಹೆಸರಿನಲ್ಲಿ ರಾಜಕೀಯ ನಡೆಯುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬರಹಗಾರ ಹಾಗೂ ಚಿಂತಕ ಶಿವ ಸುಂದರ್ ಮಾತನಾಡಿ, ಪುರಾತನ ಕಾಲದ ದೇವಾಲಯಗಳನ್ನು ಅಗೆದರೆ ಜೈನ ಬಸದಿ, ಬೌದ್ಧ ಮಂದಿರಗಳು ಸಿಗುತ್ತವೆ. ಇತಿಹಾಸ ತೆಗೆದು ನೋಡಿದರೆ 80 ದೇವಾಲಯಗಳು ಮಾತ್ರ ಹಾಳಾಗಿರಬಹುದು. ಒಂದು ದೇವಾಲಯ, ಮಸೀದಿಯನ್ನು ಬೀಳಿಸುವುದು ಅಧರ್ಮ. ತ್ಯಾಗ ಬಲಿದಾನಕ್ಕೆ ಕರೆ ಕೊಟ್ಟವರ ಮಕ್ಕಳ್ಯಾರೂ ರಕ್ತ ಹರಿಸಿಲ್ಲ. ಬಡ ಹಿಂದೂಗಳನ್ನು ಜೈಲಿಗೆ ತಳ್ಳಿ ತಮಾಷೆ ನೋಡುತ್ತಿದ್ದಾರೆ. ಅವರ ಮಕ್ಕಳು ವಿದೇಶಗಳಲ್ಲಿ ಧರ್ಮವನ್ನೇ ಮರೆತು ಆರಾಮವಾಗಿದ್ದಾರೆ. ಇದು ಕೇವಲ ಜನರನ್ನು ಒಡೆದು ಆಳುವ ರಾಜಕೀಯ ಎಂದು ಆರೋಪಿಸಿದರು.

ಮುಸ್ಲಿಂ ಜಮಾಅತ್‌ಗಳ ಒಕ್ಕೂಟದ ಕಾರ್ಯದರ್ಶಿ ಹಾಗೂ ನಗರಸಭಾ ಸದಸ್ಯ ಅಮಿನ್ ಮೊಹಿಸಿನ್ ಮಾತನಾಡಿ, ಪ್ರಸ್ತುತ ದಿನಗಳಲ್ಲಿ ಮಸೀದಿಗಳನ್ನು ಗುರಿಯಾಗಿಸಿಕೊಂಡು ರಾಜಕರಣ ಮಾಡಲಾಗುತ್ತಿದೆ. ದೇಶದಲ್ಲಿ ವಿವಿಧ ಸಮಾಜಗಳ ನಡುವೆ ಅಶಾಂತಿಯನ್ನು ಬಿತ್ತಿ ರಾಜಕೀಯ ಲಾಭ ಪಡೆಯಲಾಗುತ್ತಿದೆ ಎಂದು ಆರೋಪಿಸಿದರು.

ಒಕ್ಕೂಟದ ಅಧ್ಯಕ್ಷ ನಜೀರ್ ಅಹ್ಮದ್, ಕಾರ್ಯದರ್ಶಿ ಇಮ್ರಾನ್, ಪ್ರಮುಖರಾದ ಫಯಾಜ್, ಇಸ್ಮಾಯಿಲ್, ಮಡಿಕೇರಿ ನಗರದ ಮಸೀದಿಗಳ ಪ್ರತಿನಿಧಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಕೊಡಗಿನ ಜನತೆಗೆ ಆತಂಕ ಬೇಡ: ಶಾಸಕ ಪೊನ್ನಣ್ಣ



ಎ.ಎಸ್.ಪೊನ್ನಣ್ಣ

ಮಡಿಕೇರಿ, ಫೆ.15–ವನ್ಯಜೀವಿಗಳಿಂದ ತಯಾರಿಸಿದ ವಸ್ತುಗಳ ಬಳಕೆ ನಿಷೇಧದ ಬಗ್ಗೆ ಕೊಡಗಿನ ಜನತೆಗೆ ಆತಂಕ ಬೇಡ ಎಂದು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಹಾಗೂ ಶಾಸಕ ಎ.ಎಸ್.ಪೊನ್ನಣ್ಣ ತಿಳಿಸಿದರು.

ಬೆಂಗಳೂರಿನ ವಿಧಾನಸಭೆಯ ಮೊಗಸಾಲೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಶಾಸಕರು, ಅರಣ್ಯ ಇಲಾಖೆ ಇಂತಹ ವಸ್ತುಗಳನ್ನು ಹಿಂದುರಿಗಿಸಲು ದಿನ ನಿಗದಿಪಡಿಸಿರುವ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗಿರುವುದನ್ನು ಗಮನಿಸಲಾಗಿದೆ. ಇದರಿಂದ ಕೊಡಗಿನ ಜನತೆಗೆ ತೊಂದರೆಯಾಗಲಿದೆ. ಕೊಡಗಿನಲ್ಲಿ ಪಾರಂಪರಿಕ ಮತ್ತು ಸಾಂಪ್ರದಾಯಿಕವಾಗಿ ಐನ್‌ಮನೆ, ದೇವಸ್ಥಾನ ಹಾಗೂ ಪೀಚೆ ಕತ್ತಿ ಮುಂತಾದ ಆಭರಣಗಳಲ್ಲಿ ತಲತಲಾಂತರದಿಂದ ವನ್ಯಜೀವಿಯ ಉತ್ಪನ್ನಗಳನ್ನು ಬಳಕೆ ಮಾಡಲಾಗಿದ್ದು, ಇವುಗಳ ರಕ್ಷಣೆಯ ಜವಾಬ್ದಾರಿ ತಮ್ಮ ಮೇಲಿದೆ ಎಂದರು.

ಈ ವಿಚಾರವನ್ನು ಮುಖ್ಯಮಂತ್ರಿಗಳು ಹಾಗೂ ಅರಣ್ಯ ಸಚಿವರ ಗಮನಕ್ಕೆ ತರಲಾಗಿದೆ. ಸರ್ಕಾರದ ಮಟ್ಟದಲ್ಲಿ ಪರಿಹಾರ ಸಿಗದೇ ಇದ್ದಲ್ಲಿ ನ್ಯಾಯಾಂಗ ವ್ಯವಸ್ಥೆಯಲ್ಲಿ ಪರಿಹಾರ ಒದಗಿಸಲು ಬದ್ಧರಿದ್ದು, ಯಾರು ಕೂಡ ಆತಂಕಕ್ಕೆ ಒಳಗಾಗುವುದು ಬೇಡ ಎಂದು ಹೇಳಿದರು.

ಬಾಲಕಿ ಅತ್ಯಾಚಾರ ಪ್ರಕರಣದ ಸೂಕ್ತ ತನಿಖೆಗೆ ಆಗ್ರಹ



ಗೋಣಿಕೊಪ್ಪದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಡಿಎಸ್‌ಎಸ್ ವಿಭಾಗೀಯ ಸಂಚಾಲಕ ಕೃಷ್ಣಪ್ಪ ಮಾತನಾಡಿದರು. ರಮೇಶ್ ಮಾಯಮುಡಿ, ಕಾವೇರಿ, ರಜನಿಕಾಂತ್, ಸುರೇಶ್ ಇದ್ದರು.

ಗೋಣಿಕೊಪ್ಪ, ಫೆ.15–ಕುಟ್ಟ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬಾಲಕಿ ಮೇಲೆ ನಡೆದ ಅತ್ಯಾಚಾರ ವೆಸಗಿ ಆಕೆಯ ಆತ್ಮಹತ್ಯೆ ಕಾರಣನಾದವನನ್ನು ಬಂಧಿಸಿ ಕ್ರಮಕ್ಕೆ ಮುಂದಾಗದಿದ್ದಲ್ಲಿ ಪೊಲೀಸ್ ಉಪ ಅಧೀಕ್ಷಕರ ಕಚೇರಿ ಎದುರು ಹೋರಾಟ ನಡೆಸುವುದಾಗಿ ದಸಂಸ ಮತ್ತು ವಿವಿಧ ಸಂಘಟನೆಗಳ ಪ್ರಮುಖರು ಎಚ್ಚರಿಸಿದರು.

ಆರೋಪಿ ಶ್ರೀಕಾಂತ್ ಬಂಧನ ಆಗಿಲ್ಲ. ಆತನೊಂದಿಗೆ ಮತ್ತೊಬ್ಬ ಕೂಡ ಇದ್ದ ಎಂಬವುದನ್ನು ಪೊಲೀಸರು ಪತ್ತೆ ಹಚ್ಚಿ ತನಿಖೆ ನಡೆಸಬೇಕು ಎಂದು ಡಿಎಸ್‌ಎಸ್ ವಿಭಾಗೀಯ ಸಂಚಾಲಕ ಕೃಷ್ಣಪ್ಪ ಗುರುವಾರ ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

ಬಾಲಕಿ ಮೇಲೆ ಅತ್ಯಾಚಾರ ನಡೆದ ಮೇಲೆ ಪ್ರಕರಣ ದಾಖಲಿಸಲು ಕುಟ್ಟ ಪೊಲೀಸರು ಹಿಂದೇಟು ಹಾಕಿದ್ದಾರೆ. ಇದರಿಂದಾಗಿ ಬಾಲಕಿ ಆತ್ಮಹತ್ಯೆ ಮಾಡಿಕೊಳ್ಳಲು ಪೊಲೀಸ್ ಇಲಾಖೆಯೇ ಕಾರಣವಾಗಿದೆ. ರಾಜಿಸಂಧಾನದ ಮೂಲಕ ಬಾಲಕಿ ಕುಟುಂಬಕ್ಕೆ ಆರೋಪಿಗಳಿಂದ 3.5 ಲಕ್ಷ ರೂ. ಹಾಗೂ ಪೊಲೀಸರಿಗೆ 1 ಲಕ್ಷ ರೂ. ನೀಡಲಾಗಿದೆ ಎಂದು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಆಲ್ ಇಂಡಿಯಾ ದಲಿತ್ ರೈಟ್ಸ್ ಜಿಲ್ಲಾ ಸಂಚಾಲಕ ರಮೇಶ್ ಮಾಯಮುಡಿ, ಪ್ರಗತಿಪರ ಹೋರಾಟಗಾರ್ತಿ ಕಾವೇರಿ, ಡಿಎಸ್‌ಎಸ್ ಜಿಲ್ಲಾ ಸಂಚಾಲಕ ರಜನಿಕಾಂತ್, ಸದಸ್ಯ ಸುರೇಶ್ ಇದ್ದರು.

ಪುಟಾಣಿಗಳೊಂದಿಗೆ ಬೆರೆತಾಗ, ಭಾವನೆ ಅರಿಯಲು ಸಾಧ್ಯ



ವಿರಾಜಪೇಟೆಯ ಚೋಟಾ ಚಾಂಪ್ಸ್ ಗುರುಕುಲಂ ಶಾಲೆ ವಾರ್ಷಿಕೋತ್ಸವದಲ್ಲಿ ಮಕ್ಕಳು ಹಾಡುಗಳನ್ನು ಹಾಡಿದರು.

ವಿರಾಜಪೇಟೆ: ಮಕ್ಕಳ ಮನಸ್ಸು ಮೃದುವಾಗಿದ್ದು, ಪುಟ್ಟ ಮಕ್ಕಳೊಂದಿಗೆ ಬೆರೆತಾಗ ಮಾತ್ರ ಅವರ ಭಾವನೆಗಳನ್ನು ಅರಿತುಕೊಳ್ಳಲು ಸಾಧ್ಯವಾಗುತ್ತದೆ ಎಂದು ಅಖಿಲ ಕೊಡವ ಸಮಾಜ ಯೂತ್ ವಿಂಗ್ ಅಧ್ಯಕ್ಷ ಚಮ್ಮಟೀರ ಪ್ರವೀಣ್ ಉತ್ತಪ್ಪ ಹೇಳಿದರು.

ವಿರಾಜಪೇಟೆಯ ರಾಜೇಶ್ವರಿ ಮಿನಿ ಕನ್ವೆನ್ ಹಾಲ್‌ನಲ್ಲಿ ಆಯೋಜಿಸಿದ್ದ ಚೋಟಾ ಚಾಂಪ್ಸ್ ಗುರುಕುಲಂ ಮಾದರಿ ಶಾಲೆಯ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಪೋಷಕರು ಮಕ್ಕಳಿಗೆ ಆಚಾರ, ವಿಚಾರ, ಸಂಸ್ಕೃತಿ, ಸಂಸ್ಕಾರವನ್ನು ಕಲಿಸುವಂತಾಗಬೇಕು. ದುಶ್ಚಟಗಳಿಂದ ಮಕ್ಕಳನ್ನು ದೂರವಿರುವಂತೆ ನೋಡಿಕೊಳ್ಳಬೇಕು. ಪುಟ್ಟ ಮಕ್ಕಳು ತಮ್ಮ ಸುತ್ತಮುತ್ತ ನಡೆಯುತ್ತಿರುವುದನ್ನೇ ಕಲಿತು ಅನುಸರಿಸುತ್ತಾರೆ. ಮಕ್ಕಳು ತನ್ನದೆಯಾದ ವಿಭಿನ್ನ ಕೌಶಲ್ಯಗಳನ್ನು ಹೊಂದಿರುತ್ತಾರೆ. ನಾವು ಅವರನ್ನು ಪ್ರೋತ್ಸಾಹಿಸಿದಾಗ ಅವರಲ್ಲಿರುವ ಪ್ರತಿಭೆಗಳು ಹೊರಬರಲು ಸಾಧ್ಯ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಚೋಟಾ ಚಾಂಪ್ಸ್ ಗುರುಕುಲಂ ಶಾಲೆಯ ಮುಖ್ಯಸ್ಥ ಧನುಕುಮಾರ್ ಮಾತನಾಡಿ, ಮಾತೃ ಎಜುಕೇಷನ್ ಟ್ರಸ್ಟ್ ಅಡಿಯಲ್ಲಿರುವ ವಿರಾಜಪೇಟೆ ವಿಜಯನಗರದ ಚೋಟಾ ಚಾಂಪ್ಸ್ ಗುರುಕುಲಂ ಶಾಲೆಗೆ ತನ್ನದೆಯಾದ ಕಲಿಕಾ ಕೌಶಲ್ಯವಿದೆ. ಗುರುಕುಲಂ ಮಾದರಿಯಲ್ಲಿ ಪುಟ್ಟ ಮಕ್ಕಳಿಗೆ ಕಲಿಕೆ ನೀಡಲಾಗುತ್ತಿದೆ. ವಿದ್ಯಾರ್ಥಿಗಳಿಗೆ ಕಲಿಕೆ ಜೊತೆಗೆ ಉತ್ತಮ ನಡೆನುಡಿ ಹಾಗೂ ಸಂಸ್ಕಾರವನ್ನು ಕಲಿಸುವ ಉದ್ದೇಶದಿಂದ ಶಾಲೆ ಆರಂಭಿಸಲಾಗಿದೆ ಎಂದರು. ಶಾಲೆಯ ಪ್ರಾಂಶುಪಾಲೆ ಚುಂಗೇಟೀರ ಅಕ್ಕಮ್ಮ ಧನುಕುಮಾರ್ ಮಾತನಾಡಿದರು. ಇದೇ ವೇಳೆ ಪುಟಾಣಿಗಳಿಂದ ವಿವಿಧ ನೃತ್ಯ ಕಾರ್ಯಕ್ರಮ ನಡೆಯಿತು. ವಿವಿಧ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಮಗುವಿನ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದ ಕಾಮುಕನ ಬಂಧನ

ಮಡಿಕೇರಿ: ಎರಡು ವರ್ಷದ ಮಗುವಿನ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದ ಕಾಮುಕನನ್ನು ಸಿದ್ದಾಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸಿದ್ದಾಪುರ ಸಮೀಪದ ಪ್ರತಿಷ್ಠಿತ ಎಸ್ಟೇಟ್‌ವೊಂದರ ಚಾಲಕ ಮಣಿ (37) ಬಂಧಿತನಾಗಿದ್ದು, ಈತ ಬುಧವಾರ ಯಾರು ಇಲ್ಲದ ಸಮಯದಲ್ಲಿ ಮನೆಗೆ ನುಗ್ಗಿ ಕುಡಿದ ಅಮಲಿನಲ್ಲಿ ಎರಡು ವರ್ಷದ ಮಗುವಿನ ಮೇಲೆ ಲೈಂಗಿಕ ದೌರ್ಜನ್ಯವೆಸಗಿದ್ದಾನೆ. ಮಗುವಿನ ದೇಹದಲ್ಲಿ ಕಚ್ಚಿದ ಗುರುತುಗಳು ಪತ್ತೆಯಾಗಿದೆ. ನಂತರ ಎಸ್ಟೇಟ್ ಕಾರ್ಮಿಕರು ಆರೋಪಿಯನ್ನು ಹಿಡಿದು ಸಿದ್ದಾಪುರ ಠಾಣೆ ಪೊಲೀಸರಿಗೆ ಒಪ್ಪಿಸಿದ್ದಾರೆ. ಪ್ರಕರಣವನ್ನು ಮಡಿಕೇರಿಯ ಕೊಡಗು ಮಹಿಳಾ ಪೊಲೀಸ್ ಠಾಣೆಗೆ ವರ್ಗಾಯಿಸಲಾಗಿದೆ. ಮಗುವಿನ ಪೋಷಕರು ಹೊರ ರಾಜ್ಯದವರಾಗಿದ್ದು, ಜಿಲ್ಲೆಯಲ್ಲಿ ಎಸ್ಟೇಟ್ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದಾರೆ ಎನ್ನಲಾಗಿದೆ. ಮಗುವಿಗೆ ಮಡಿಕೇರಿಯ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದ್ದು, ಮಗುವಿಗೆ ಯಾವುದೇ ಅಪಾಯವಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಇಂದು, ನಾಳೆ ಕಾಳಿಕಾಂಬ ದೇವಿ ಪ್ರತಿಷ್ಠಾಪನೆ



ಯಳಂದೂರು ತಾಲೂಕಿನ ಯರಿಯೂರು ಗ್ರಾಮದಲ್ಲಿರುವ ಕಾಳಿಕಾಂಬ ದೇಗುಲ.

ಯಳಂದೂರು, ಫೆ.15–ತಾಲೂಕಿನ ಯರಿಯೂರು ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಕಾಳಿಕಾಂಬ ಅಮ್ಮನವರ ದೇವಸ್ಥಾನದ ವಿವಿಧ ಧಾರ್ಮಿಕ ಪೂಜಾ ಕಾರ್ಯಕ್ರಮಗಳು ಶುಕ್ರವಾರ ಹಾಗೂ ಶನಿವಾರ ನಡೆಯಲಿವೆ.

ಶುಕ್ರವಾರ ಸಂಜೆ ಗಂಗಾವರಣ ನಡೆಯಲಿದ್ದು, ಗ್ರಾಮ ಪ್ರದಕ್ಷಿಣೆ ನಡೆಯಲಿದೆ. ನಂತರ ಯಾಗಶಾಲಾ ಪ್ರವೇಶ, ಗಣಪತಿ ಪೂಜೆ, ಪುಣ್ಯಾಹವಾಹನ, ಮಾತೃಕಾರಾಧನೆ, ಗ್ರಹಾರಾಧನೆ, ಅಂಕುರಾರರ್ಪಣೆ, ವಿವಿಧ ಹೋಮ ಹವನಗಳು ನಡೆಯಲಿವೆ. ಹಾಸನ ಜಿಲ್ಲೆಯ ಅರಕಲಗೂಡ ತಾಲೂಕಿನ ಅರೇಮಾದನಹಳ್ಳಿಯ ಶ್ರೀ ಶಿವಸುಜ್ಞಾನತೀರ್ಥಸ್ವಾಮೀಜಿ ನೇತೃತ್ವದಲ್ಲಿ ಪೂಜಾ ಕಾರ್ಯಕ್ರಮ ನಡೆಯಲಿವೆ.

ಶನಿವಾರ ವೇದಿಕಾರ್ಚನೆ, ತತ್ವನ್ಯಾಸಾದಿ ಹೋಮ, ಕುಂಭಾಭಿಷೇಕ, ಮಹಾಮಂಗಳಾರತಿ ಹಾಗೂ ಪ್ರಸಾದ ವಿನಿಯೋಗ ನಡೆಯಲಿದೆ. ದೇಗುಲದ ಮುಂಭಾಗವನ್ನು ಸ್ವಚ್ಛತೆ, ಹಸಿರು ಚಪ್ಪರ, ತಳಿರು ತೋರಣಗಳಿಂದ ಸಿಂಗರಿಸಿ, ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿದೆ.

ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ರಾಜ್ಯಾಧ್ಯಕ್ಷ ಕೆ.ಪಿ.ನಂಜುಂಡಿ, ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಸಿ.ಪುಟ್ಟರಂಗಶೆಟ್ಟಿ, ಮಾಜಿ ಶಾಸಕರಾದ ಎನ್.ಮಹೇಶ್, ಎಸ್.ಜಯಣ್ಣ, ಜಿ.ಎನ್.ನಂಜುಂಡಸ್ವಾಮಿ, ಎಸ್.ಬಾಲರಾಜು ಮತ್ತಿತರರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಬಿಜೆಪಿಯ ಐತಿಹಾಸಿಕ ಗೆಲುವಿಗೆ ಒಗ್ಗಟ್ಟಿನಿಂದ ಶ್ರಮಿಸಿ

• ಚಾ.ನಗರ ಲೋಕಸಭಾ ಕ್ಷೇತ್ರದ ಚುನಾವಣಾ ಸಹ ಪ್ರಭಾರಿ ಫಣೀಶ್ ಮನವಿ • ಪ್ರಚಾರ ಕಚೇರಿ ಉದ್ಘಾಟನೆ



ಚಾಮರಾಜನಗರ ಲೋಕಸಭಾ ಕ್ಷೇತ್ರದ ಬಿಜೆಪಿ ಚುನಾವಣಾ ಪ್ರಚಾರ ಕಚೇರಿಯನ್ನು ಪಕ್ಷದ ಪ್ರಭಾರಿ ಎಸ್.ವಿ.ಫಣೀಶ್ ಉದ್ಘಾಟಿಸಿದರು. ಪ್ರೊ.ಕೆ.ಆರ್.ಮಲ್ಲಿಕಾರ್ಜುನಪ್ಪ, ಸಿ.ಎಸ್.ನಿರಂಜನ್‌ಕುಮಾರ್, ಎನ್.ಮಹೇಶ್, ಎಸ್.ಬಾಲರಾಜು, ಹರ್ಷವರ್ಧನ್, ಎಂ.ರಾಮಚಂದ್ರ, ಎಸ್.ಮಹದೇವಯ್ಯ ಇದ್ದರು.

> ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ ವೈಫಲ್ಯವನ್ನು ಜನರಿಗೆ ತಿಳಿಸುವ ಜೊತೆಗೆ ಪ್ರಧಾನಿ ನರೇಂದ್ರ ಮೋದಿ ಅವರ ಸಾಧನೆಯನ್ನು ಮನದಟ್ಟು ಮಾಡಿಸೋಣ. ಗ್ಯಾರಂಟಿ ಯೋಜನೆಯ ನೆಪದಲ್ಲಿ ಜನರನ್ನು ವಂಚಿಸುತ್ತಿರುವ ಕಾಂಗ್ರೆಸ್ ಅಭಿವೃದ್ಧಿಯನ್ನು ಕಡೆಗಣಿಸಿದೆ. ಅಧಿಕಾರಕ್ಕೆ ಬಂದು 10 ತಿಂಗಳಾಗುತ್ತಿದ್ದು, ಕ್ಷೇತ್ರದಲ್ಲಿ ಒಂದೇ ಒಂದು ಅಭಿವೃದ್ಧಿ ಕೆಲಸಗಳು ಆಗಿಲ್ಲ. ನಮ್ಮ ಸರ್ಕಾರದ ಅವಧಿಯಲ್ಲಿ ಅಭಿವೃದ್ಧಿ ಪರ್ವವೇ ನಡೆಯಿತು. ಆದರೆ, ಈ ಸರ್ಕಾರ ಒಂದು ಪೈಸೆ ಬಿಡುಗಡೆ ಮಾಡುತ್ತಿಲ್ಲ. ಗ್ಯಾರಂಟಿಗೆ 54 ಸಾವಿರ ಕೋಟಿ ರೂ. ಬೇಕು ಎಂದು ಹಣ ಹೊಂದಿಸುವುದರಲ್ಲೇ ರಾಜ್ಯ ಸರ್ಕಾರ ಕಾಲಾಹರಣ ಮಾಡುತ್ತಿದೆ.
> —ಸಿ.ಎಸ್.ನಿರಂಜನ್‌ಕುಮಾರ್, ಬಿಜೆಪಿ ಜಿಲ್ಲಾಧ್ಯಕ್ಷ

ಚಾಮರಾಜನಗರ, ಫೆ.15–ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯ ಐತಿಹಾಸಿಕ ಗೆಲುವಿಗಾಗಿ ಪಕ್ಷದ ಎಲ್ಲರೂ ಒಗ್ಗಟ್ಟಿನಿಂದ ಶ್ರಮಿಸಬೇಕು ಎಂದು ಚಾಮರಾಜನಗರ ಲೋಕಸಭಾ ಕ್ಷೇತ್ರದ ಚುನಾವಣಾ ಸಹ ಪ್ರಭಾರಿ ಎಸ್.ವಿ.ಫಣೀಶ್ ಮನವಿ ಮಾಡಿದರು.

ನಗರದಲ್ಲಿ ಗುರುವಾರ ಚಾ.ನಗರ ಲೋಕಸಭಾ ಕ್ಷೇತ್ರದ ಬಿಜೆಪಿ ಚುನಾವಣಾ ಪ್ರಚಾರ ಕಚೇರಿ ಉದ್ಘಾಟಿಸಿ ಮಾತನಾಡಿದ ಅವರು, ನರೇಂದ್ರ ಮೋದಿ ಮತ್ತೊಮ್ಮೆ ಪ್ರಧಾನಿಯಾಗಬೇಕೆಂದು ದೇಶದ ಜನರು ಬಯಸಿದ್ದಾರೆ. ಹೀಗಾಗಿ ನಾವೆಲ್ಲರು ಒಗ್ಗಟ್ಟಿನಿಂದ ಮೋದಿ ಅವರ ಹತ್ತು ವರ್ಷಗಳ ಸಾಧನೆಯನ್ನು ಪ್ರತಿ ಮನೆ ಹಾಗೂ ಮನಗಳಿಗೆ ತಲುಪಿಸುವ ಕೆಲಸವನ್ನು ಮಾಡೋಣ ಎಂದರು.

ದೇಶದಲ್ಲಿ ನರೇಂದ್ರ ಮೋದಿ ಹಾಗೂ ಬಿಜೆಪಿ ಹೆಸರಿನಲ್ಲಿ ವೋಟ್ ಬ್ಯಾಂಕ್ ಆಗಿದ್ದು, ಚಾ.ನಗರ ಲೋಕಸಭಾ ಕ್ಷೇತ್ರದಿಂದ ಯಾರು ಅಭ್ಯರ್ಥಿ ಎಂಬುವುದು ನಮಗೆ ಬೇಕಿಲ್ಲ. ಕಮಲ ಮತ್ತು ಮೋದಿ ಅವರನ್ನು ಗೆಲ್ಲಿಸಲು ಮತಯಾಚಿಸಬೇಕು. ಚಾ.ನಗರ ಕ್ಷೇತ್ರದಲ್ಲಿ ಬಿಜೆಪಿ ಗೆಲ್ಲುವ ಅವಕಾಶವಿದೆ. ಕಳೆದ ಬಾರಿ ವಿ.ಶ್ರೀನಿವಾಸಪ್ರಸಾದ್ ಸ್ಪರ್ಧೆ ಮಾಡಿದ್ದರು. ಹೀಗಾಗಿ ಬಿಜೆಪಿ ಸುಲಭವಾಗಿ ಜಯಗಳಿಸಿತ್ತು. ಆದರೆ, ಈ ಬಾರಿ ಹೊಸಮುಖವನ್ನು ಕಣಕ್ಕಿಳಿಸಬೇಕಾಗಿದೆ. ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಪಕ್ಷದ ಗೆಲುವಿಗೆ ಹಗಲು ರಾತ್ರಿ ಎನ್ನದೇ ದುಡಿಯಬೇಕು ಎಂದರು.

ಲೋಕಸಭಾ ಕ್ಷೇತ್ರದ ಚುನಾವಣೆ ಉಸ್ತುವಾರಿ ಪ್ರೊ.ಕೆ.ಆರ್.ಮಲ್ಲಿಕಾರ್ಜುನಪ್ಪ ಮಾತನಾಡಿ, ದೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಸಾಧನೆ, ವರ್ಚಸ್ಸು ಹಾಗೂ ರಾಜ್ಯದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಮಾರ್ಗದರ್ಶನ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ಚುನಾವಣೆ ನಡೆಯಲಿದೆ. ಈ ನಿಟ್ಟಿನಲ್ಲಿ 3ನೇ ಬಾರಿ ಮೋದಿ ಪ್ರಧಾನಿಯಾಗಬೇಕೆಂದು ವಿಶ್ವವೇ ಎದುರು ನೋಡುತ್ತಿದೆ. ಈ ದೊಡ್ಡ ಸಮರದಲ್ಲಿ ಬಿಜೆಪಿ 400ರ ಗಡಿ ದಾಟಲು ರಾಜ್ಯದಲ್ಲಿ 28 ಕ್ಷೇತ್ರಗಳಲ್ಲೂ ಬಿಜೆಪಿ ಅಭ್ಯರ್ಥಿಗಳನ್ನು ಗೆಲ್ಲಿಸಿ ಕಳುಹಿಸುವ ಜವಾಬ್ದಾರಿ ನಮ್ಮೆಲ್ಲರದಾಗಿದೆ. ಚಾ.ನಗರ ಕ್ಷೇತ್ರ ವ್ಯಾಪ್ತಿಯ ಪ್ರತಿ ಬೂತ್‌ಗಳಲ್ಲಿ ತಳಮಟ್ಟದಿಂದ ಪಕ್ಷ ಸಂಘಟನೆಗೆ ಶ್ರಮಿಸೋಣ ಎಂದರು.

ಕಾರ್ಯಕ್ರಮದಲ್ಲಿ ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್, ಮಾಜಿ ಶಾಸಕರಾದ ಎಸ್.ಬಾಲರಾಜು, ಹರ್ಷವರ್ಧನ್, ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಮುಖಂಡ ಎಸ್.ಮಹದೇವಯ್ಯ, ರಾಷ್ಟ್ರೀಯ ಓಬಿಸಿ ಕಾರ್ಯಕಾರಣಿ ಸದಸ್ಯ ನೂರೊಂದುಶೆಟ್ಟಿ, ಚಾಮುಲ್ ಅಧ್ಯಕ್ಷ ವೈ.ಸಿ.ನಾಗೇಂದ್ರ, ಮುಖಂಡರಾದ ಅಶೋಕ್, ಕೃಷ್ಣಪ್ಪಗೌಡ, ಗುಂಡ್ಲುಪೇಟೆ ಮಲ್ಲೇಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಮುಡ್ನಾಕೂಡು ಪ್ರಕಾಶ್, ಪಿ.ವೃಷಭೇಂದ್ರಪ್ಪ ಹೊನ್ನೂರು ಮಹದೇವಸ್ವಾಮಿ, ನಗರಸಭಾ ಮಾಜಿ ಅಧ್ಯಕ್ಷೆ ಆಶಾ ನಟರಾಜು, ಮಾಜಿ ಉಪಾಧ್ಯಕ್ಷೆ ಸುಧಾ, ಸದಸ್ಯರಾದ ಮಮತಾ ಬಾಲಸುಬ್ರಮಣ್ಯ, ಕುಮುದಾ, ಮಂಡಲದ ಅಧ್ಯಕ್ಷ ಅರಕಲವಾಡಿ ಮಹೇಶ್, ನಗರಾಧ್ಯಕ್ಷ ಶಿವಕುಮಾರ್ ಇದ್ದರು.

ವಿದ್ಯುತ್ ಅವಘಡ ಬಗ್ಗೆ ಎಚ್ಚರಿಕೆ ಇರಲಿ



ಚಾಮರಾಜನಗರ ತಾಲೂಕಿನ ಚಂದಕವಾಡಿ ಸೆಸ್ಕ್ ಕಚೇರಿಯಲ್ಲಿ ನಡೆದ ವಿದ್ಯುತ್ ಸೇವೆಗಳ ಅರಿವು ಕಾರ್ಯಕ್ರಮದಲ್ಲಿ ಪ್ರಭಾರ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಕೆ.ಎಂ.ಮುದ್ದುರಾಜ್ ಮಾತನಾಡಿದರು.

ಚಾಮರಾಜನಗರ, ಫೆ15–ಬೇಸಿಗೆ ಮತ್ತು ಮಳೆಗಾಲದಲ್ಲಿ ವಿದ್ಯುತ್ ಅವಘಡಗಳು ಸಂಭವಿಸುವ ಸಾಧ್ಯತೆ ಇದ್ದು, ಜನರು ಎಚ್ಚರಿಕೆಯಿಂದ ಇರಬೇಕು ಎಂದು ಸೆಸ್ಕ್‌ನ ಸಂತೆಮರಳ್ಳಿ ಉಪವಿಭಾಗದ ಪ್ರಭಾರ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಕೆ.ಎಂ.ಮುದ್ದುರಾಜ್ ತಿಳಿಸಿದರು.

ತಾಲೂಕಿನ ಚಂದಕವಾಡಿ ಗ್ರಾಮದ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಕಾಗಲವಾಡಿ ಶಾಖಾ ಕಚೇರಿಯಲ್ಲಿ ನಡೆದ ವಿದ್ಯುತ್ ಸೇವೆಗಳು ಮತ್ತು ಸುರಕ್ಷತಾ ಅರಿವು ಸಪ್ತಾಹ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬೇಸಿಗೆ ಮತ್ತು ಮಳೆಗಾಲದಲ್ಲಿ ವಿದ್ಯುತ್ ತಂತಿಗಳು ತುಂಡಾಗುವ ಸಾಧ್ಯತೆ ಹೆಚ್ಚು. ಇಂತಹ ಸಂದರ್ಭದಲ್ಲಿ ತಂತಿಗಳನ್ನು ಮುಟ್ಟಬಾರದು. ತಕ್ಷಣ ಸೆಸ್ಕ್‌ಗೆ ತಿಳಿಸಬೇಕು ಎಂದು ಸಲಹೆ ನೀಡಿದರು.

ಸೆಸ್ಕ್ ಸಿಬ್ಬಂದಿ ಕರ್ತವ್ಯದಲ್ಲಿದ್ದಾಗ ಕರೆ ಸ್ವೀಕರಿಸದಿದ್ದರೆ, ಸಹಾಯವಾಣಿ 1912ಕ್ಕೆ ಕರೆ ಮಾಡಿ ದೂರು ದಾಖಲಿಸಿದರೆ ಅಲ್ಲಿಂದ ನಮಗೆ ಮಾಹಿತಿ ರವಾನೆಯಾಗುತ್ತದೆ. ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಯಾದ ಗೃಹಜ್ಯೋತಿ ಯೋಜನೆಗೆ ನೋಂದಾಯಿಸಿಕೊಳ್ಳದಿರುವ ಗ್ರಾಹಕರು ಸೆಸ್ಕ್ ಕಚೇರಿಗೆ ಬಂದು ನೋಂದಾಯಿಸಿಕೊಳ್ಳಬೇಕು ಎಂದರು.

ರೈತರು ತಮ್ಮ ಗದ್ದೆಗಳಲ್ಲಿನ ವಿದ್ಯುತ್ ಮಾರ್ಗ ಅರಿತು ಕಬ್ಬು ಬೆಳೆ ಬೆಳೆಯಬೇಕು. ವಿದ್ಯುತ್ ತಂತಿ ಕಬ್ಬಿನ ಗರಿಗಳಿಗೆ ತಗುಲಿದರೆ ಬೆಳೆ ನಷ್ಟವಾಗುತ್ತದೆ. ಸೆಸ್ಕ್ ನೀಡುವ ಪರಿಹಾರಕ್ಕಿಂತ ಬೆಳೆ ರಕ್ಷಿಸಿಕೊಳ್ಳುವುದು ಮುಖ್ಯ ಎಂದು ತಿಳಿಸಿದರು.

ಇದೇ ವೇಳೆ ಕೆಲ ಗ್ರಾಹಕರು, ನಂದಿ ಬಸವೇಶ್ವರ ದೇವಾಲಯಕ್ಕೆ ಎರಡು ಕಂಬ ಅಳವಡಿಸಿಕೊಡಬೇಕು ಮತ್ತು ಜಮೀನಿನಲ್ಲಿ ವಿದ್ಯುತ್ ತಂತಿಗಳು ಅಪಾಯಕಾರಿ ಸ್ಥಿತಿಯಲ್ಲಿದ್ದಾಗ ತಕ್ಷಣ ಸ್ಪಂದಿಸುವಂತೆ ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಕಿರಿಯ ಇಂಜಿನಿಯರ್ ಮರಿಸ್ವಾಮಿ, ಕಿರಿಯ ಸಹಾಯಕ ರಿಯಾಜ್, ಗ್ರಾಮ ವಿದ್ಯುತ್ ಪ್ರತಿನಿಧಿಗಳ ಸಂಘದ ಪ್ರಧಾನ ಕಾರ್ಯದರ್ಶಿ ರಮೇಶ್, ಮೇಸ್ತ್ರಿ ರವಿ ಇತರರು ಇದ್ದರು.

ಇಂದು ವಿದ್ಯುತ್ ಸುರಕ್ಷತೆ ಅರಿವು ಕಾರ್ಯಕ್ರಮ

ಕೊಳ್ಳೇಗಾಲ, ಫೆ.15–ವಿದ್ಯುತ್ ಸುರಕ್ಷತೆ ಮತ್ತು ಸೇವೆಗಳ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸುವ ಕಾರ್ಯಕ್ರಮ ಫೆ.16ರಂದು ಬೆಳಗ್ಗೆ 10 ಗಂಟೆಗೆ ಪಟ್ಟಣದ ಶಾಖಾ ಕಚೇರಿ ಆವರಣದಲ್ಲಿ ನಡೆಯಲಿದೆ ಎಂದು ಸೆಸ್ಕ್ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಿ.ಪ್ರೇಮಾಗೆ ಪಿಎಚ್‌ಡಿ



ಯಳಂದೂರು: ತಾಲೂಕಿನ ವೈ.ಕೆ.ಮೋಳೆ ಗ್ರಾಮದ ಪಿ.ಪ್ರೇಮಾ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಡಾ.ಜಿ.ಬಿ.ಪಾಂಡುರಂಗ ನಾಯಕ ಮಾರ್ಗದರ್ಶನದಲ್ಲಿ 'ಕನ್ನಡ ಮಹಿಳಾ ಚಿಂತನ ಸಾಹಿತ್ಯ ಸ್ತ್ರೀ ಸಂವೇದನೆಯ ನೆಲೆಗಳು' (ಆಯ್ದ ಲೇಖಕಿಯರನ್ನು ಅನುಲಕ್ಷಿಸಿ) ಎಂಬ ಕುರಿತು ಮಂಡಿಸಿದ ಮಹಾಪ್ರಬಂಧಕ್ಕೆ ಹಂಪಿ ಕನ್ನಡ ವಿಶ್ವವಿದ್ಯಾಲಯ ಪಿಎಚ್.ಡಿ ಪದವಿ ನೀಡಿದೆ.

ನಾಗ ಮಾರ್ಷಲ್ ಆರ್ಟ್ಸ್ ಅಕಾಡೆಮಿಗೆ ಸಮಗ್ರ ಪ್ರಶಸ್ತಿ



ರಾಷ್ಟ್ರೀಯ ಮಟ್ಟದ ಕರಾಟೆ ಪಂದ್ಯಾವಳಿಯಲ್ಲಿ ಸಮಗ್ರ ಪ್ರಶಸ್ತಿ ಪಡೆದ ಚಾಮರಾಜನಗರ ನಾಗ ಮಾರ್ಷಲ್ ಅಕಾಡೆಮಿಯ ಕರಾಟೆಪಟುಗಳನ್ನು ತರಬೇತುದಾರರಾದ ಸೆನ್ಸಾಯ್ ರಾಜೇಂದ್ರ, ಸೆನ್ಸಾಯ್ ಯೋಗೀಶ್, ಸೆನ್ಸಾಯ್ಜನನ ರಮೇಶ್, ಸೆಂಪಾಯ್ ಅಬ್ದುಲ್ ಫೈಸಲ್ ಅಭಿನಂದಿಸಿದರು.

ಚಾಮರಾಜನಗರ, ಫೆ.15–ಮೈಸೂರಿನ ನಾಗ ಮಾರ್ಷಲ್ ಆರ್ಟ್ಸ್ ಅಕಾಡೆಮಿಯ 20ನೇ ವಾರ್ಷಿಕೋತ್ಸವ ಪ್ರಯುಕ್ತ ಆಯೋಜಿಸಿದ್ದ 18ನೇ ರಾಷ್ಟ್ರೀಯ ಮಟ್ಟದ ಕರಾಟೆ ಪಂದ್ಯಾವಳಿಯಲ್ಲಿ ಚಾಮರಾಜನಗರದ ನಾಗ ಮಾರ್ಷಲ್ ಅಕಾಡೆಮಿಯ ಕರಾಟೆ ಪಟುಗಳು ಉತ್ತಮ ಪ್ರದರ್ಶನ ನೀಡುವ ಮೂಲಕ ಸಮಗ್ರ ಪ್ರಶಸ್ತಿ ಪಡೆದಿದ್ದಾರೆ.

ಕಟ, ಕುಮಿತೆ ವಿಭಾಗದಲ್ಲಿ ಬ್ಲಾಕ್‌ಬೆಲ್ಟ್ ಕೆ.ವಿಜಯ್, ಲಿಖಿತ್, ರಾಹುಲ್ ಮೌರ್ಯ, ಸೋಹನ್, ಹರ್ಷವರ್ಧನ್, ಮಿಲನ್‌ಗೌಡ, ಹೇಮಂತ್, ಎಂ.ಚಿರಂತ್, ವಿವೇಕ್, ಗೌತಮ್, ಕೀರ್ತಿವರ್ಧನ್, ಮಂಜುನಾಥ್, ಧೃವಿಕಾ, ಅಮಿತ್ ನಾಗಸೇನಾ, ಮೊಹಮ್ಮದ್, ಮೊಹಮ್ಮದ್ ಸೀಜ್, ಭೂಮಿಕಾ, ಭೌಮಿಕಾ, ವಿಕ್ರಂ, ಪೃಥ್ವಿ, ಹರ್ಷವರ್ಧನ್ ಪ್ರಶಸ್ತಿ ಗಳಿಸಿದ್ದಾರೆ.

ವಿಜೇತ ಕರಾಟೆಪಟುಗಳನ್ನು ಸಂಸ್ಥೆಯ ಮುಖ್ಯ ತರಬೇತುದಾರ ಸೆನ್ಸಾಯ್ ರಾಜೇಂದ್ರ, ತರಬೇತುದಾರರಾದ ಸೆನ್ಸಾಯ್ ಯೋಗೀಶ್, ಸೆನ್ಸಾಯ್ ರಮೇಶ್, ಸೆಂಪಾಯ್ ಅಬ್ದುಲ್ ಫೈಸಲ್ ಅಭಿನಂದಿಸಿದ್ದಾರೆ.

ಅಂಗನವಾಡಿಗೆ ನ್ಯಾಯಾಧೀಶರ ಭೇಟಿ



ಕೋಡಿಮೋಳೆ ಮತ್ತು ಬಸವನಪುರ ಅಂಗನವಾಡಿಗೆ ನ್ಯಾ. ಎಂ.ಶ್ರೀಧರ ಭೇಟಿ ನೀಡಿ, ಪರಿಶೀಲಿಸಿದರು.

ಚಾಮರಾಜನಗರ, ಫೆ.15–ತಾಲೂಕಿನ ಕೋಡಿಮೋಳೆ ಮತ್ತು ಬಸವನಪುರ ಗ್ರಾಮಗಳ ಅಂಗನವಾಡಿ ಕೇಂದ್ರಗಳಿಗೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ನ್ಯಾಯಾಧೀಶ ಎಂ.ಶ್ರೀಧರ ಭೇಟಿ ನೀಡಿ, ಪರಿಶೀಲಿಸಿದರು.

ಕೋಡಿಮೋಳೆ ಗ್ರಾಮದ 1ರಿಂದ 3ನೇ ಕೇಂದ್ರದ ಅಂಗನವಾಡಿಗಳಿಗೆ ಭೇಟಿ ನೀಡಿದ ನ್ಯಾಯಾಧೀಶರು, ಅಂಗನವಾಡಿ ಕಟ್ಟಡಗಳ ವ್ಯವಸ್ಥೆ, ಮಕ್ಕಳಿಗೆ ನೀಡುವ ಪೌಷ್ಟಿಕ ಆಹಾರ ಹಾಗೂ ಸ್ವಚ್ಛತೆ ಬಗ್ಗೆ ಪರಿಶೀಲನೆ ನಡೆಸಿದರು. ಬಳಿಕ ಚಂದಕವಾಡಿ ಹೋಬಳಿಯ ಬಸವನಪುರ ಗ್ರಾಮದ 1 ಮತ್ತು 2ರ ಅಂಗನವಾಡಿಗಳಿಗೆ ಭೇಟಿ ನೀಡಿ, ಸರ್ಕಾರದಿಂದ ಮಕ್ಕಳಿಗೆ ನೀಡುವ ಪೌಷ್ಟಿಕ ಆಹಾರ ಹಾಗೂ ಸಿಬ್ಬಂದಿ ಕರ್ತವ್ಯದ ಬಗ್ಗೆ ಮಾಹಿತಿ ಪಡೆದರು.

ಕೋಡಿಮೋಳೆ ಅಂಗನವಾಡಿ ಮುಂಭಾಗದ ಚರಂಡಿಗಳಲ್ಲಿ ಸ್ಲ್ಯಾಬ್ ವ್ಯವಸ್ಥೆ ಇಲ್ಲದಿರುವುದು, ಇದರಿಂದ ಮಕ್ಕಳು ಸುಗಮವಾಗಿ ದಾಟಲು ಗೇಟಿಗೆ ಸಂಪೂರ್ಣ ಚಪ್ಪಡಿ ಹಾಕದೇ ಇರುವುದು ಹಾಗೂ ಚರಂಡಿ ನೀರು ಶೇಖರಣೆ ಆಗುವುದರಿಂದ ದುರ್ವಾಸನೆ ಉಂಟಾಗಿ ಮಕ್ಕಳ ಆರೋಗ್ಯಕ್ಕೆ ತೊಂದರೆಯಾಗದಂತೆ ಕ್ರಮ ವಹಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಬಸವನಪುರ ಅಂಗನವಾಡಿ ಕಟ್ಟಡದ ಚಾವಣಿ ದಿನೇ ದಿನೆ ಶೀತಲಗೊಳ್ಳುತ್ತಿದ್ದು, ಕುಸಿಯುವ ಸಂಭವ ಇರುವುದರಿಂದ ಶೀಘ್ರ ಕ್ರಮ ವಹಿಸಲು ಅಧಿಕಾರಿಗಳಿಗೆ ಪತ್ರ ವ್ಯವಹಾರ ನಡೆಸುವಂತೆ ನ್ಯಾಯಾಧೀಶರು ತಿಳಿಸಿದರು.

ಸುಪ್ರೀಂಕೋರ್ಟ್‌ನಿಂದ ಚುನಾವಣಾ ಬಾಂಡ್‌ಗಳ ನಿಷೇಧ

ನವದೆಹಲಿ, ಫೆ.15– ಸುಪ್ರೀಂಕೋರ್ಟ್ ತಕ್ಷಣದಿಂದ ಜಾರಿಗೆ ಬರುವಂತೆ ಚುನಾವಣಾ ಬಾಂಡ್‌ಗಳನ್ನು ನಿಷೇಧಿಸಿದ್ದು, ಚುನಾವಣಾ ಬಾಂಡ್‌ಗಳ ಯೋಜನೆ ಅಸಂವಿಧಾನಿಕ ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ, ಬಿ.ಆರ್.ಗವಾಯಿ, ಜೆ.ಬಿ.ಪರ್ದಿವಾಲಾ ಮತ್ತು ಮನೋಜ್ ಮಿಶ್ರಾ ಅವರನ್ನೊಳಗೊಂಡ ಐವರು ನ್ಯಾಯಾಧೀಶರ ಪೀಠ ಗುರುವಾರ ಸರ್ವಾನುಮತದ ತೀರ್ಪು ನೀಡಿದೆ. ಕೇಂದ್ರ ಸರ್ಕಾರದ ಚುನಾವಣಾ ಬಾಂಡ್‌ಗಳ ಯೋಜನೆಯ ಕಾನೂನು ಸಿಂಧುತ್ವವನ್ನು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಗಳ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್, ಚುನಾವಣಾ ಬಾಂಡ್‌ಗಳನ್ನು ನಿಷೇಧಿಸಿದ್ದು, ಮಾರ್ಚ್ 6ರೊಳಗೆ ಚುನಾವಣಾ ಬಾಂಡ್‌ಗಳ ಬಗ್ಗೆ ಮಾಹಿತಿಯನ್ನು ಚುನಾವಣಾ ಆಯೋಗಕ್ಕೆ ಸಲ್ಲಿಸಬೇಕು ಎಂದು ಎಸ್‌ಬಿಐಗೆ ಸೂಚಿಸಿದೆ.

ಒಂದನೇ ಪುಟದಿಂದ

ಚುನಾವಣೆಯ ಕಾರ್ಯಾಲಯ ಉದ್ಘಾಟನೆ

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಉಸ್ತುವಾರಿ ಡಾ.ಅಶ್ವತ್ಥ್‌ನಾರಾಯಣ್ ಉದ್ಘಾಟಿಸಿದರು. ಇದೇ ವೇಳೆ ಮಂಡ್ಯ, ಚಾಮರಾಜನಗರ, ಹಾಸನ ಲೋಕಸಭಾ ಕ್ಷೇತ್ರಗಳ ಕಾರ್ಯಾಲಯವನ್ನು ಸಹ ಉದ್ಘಾಟನೆ ಮಾಡಲಾಗಿದೆ. ಕ್ಲಸ್ಟರ್ ಮುಖ್ಯಸ್ಥ ಎಸ್.ಎ.ರಾಮದಾಸ್, ಲೋಕಸಭಾ ಸದಸ್ಯ ಪ್ರತಾಪ್ ಸಿಂಹ, ಮಡಿಕೇರಿ ಮಾಜಿ ಶಾಸಕ ಅಪ್ಪಚ್ಚು ರಂಜನ್, ನಗರ ಬಿಜೆಪಿ ಅಧ್ಯಕ್ಷರೂ ಆದ ಮಾಜಿ ಶಾಸಕ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಬಿಜೆಪಿ ರಾಜ್ಯ ಉಪಾಧ್ಯಕ್ಷ ರಾಜೇಂದ್ರ, ಮಾಜಿ ಸಂಸದ ಸಿ.ಹೆಚ್.ವಿಜಯಶಂಕರ್, ಬಿಜೆಪಿ ಮುಖಂಡರಾದ ಮೈ.ವಿ.ರವಿಶಂಕರ್, ರವಿ ಕಾಳಪ್ಪ, ಮಾಜಿ ಮೇಯರ್‌ಗಳಾದ ಸಂದೇಶ್ ಸ್ವಾಮಿ, ಶಿವಕುಮಾರ್ ಸೇರಿದಂತೆ ಹಲವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಲೋಕಸಭಾ ಚುನಾವಣಾ ಕಾರ್ಯಾಲಯವನ್ನು ಉದ್ಘಾಟಿಸಿ ಮಾತನಾಡಿದ ಡಾ.ಅಶ್ವತ್ಥ್ ನಾರಾಯಣ್, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರವನ್ನು ಪ್ರತಾಪ್ ಸಿಂಹ ನಾಲ್ವಡಿ ಕೃಷ್ಣರಾಜ ಒಡೆಯರ್ ರೀತಿ ಅಭಿವೃದ್ಧಿ ಮಾಡಿದ್ದಾರೆ. ತಾವು ಮಾಡಿರುವ ಅಭಿವೃದ್ಧಿ ಕಾರ್ಯ ಹಾಗೂ ನರೇಂದ್ರ ಮೋದಿ ನೀಡಿರುವ ಕೊಡುಗೆ ಮುಂದಿಟ್ಟುಕೊಂಡು ಮತ ಕೇಳಲಿದ್ದಾರೆ. ಆದರೆ ಮತ್ತೆ ಪ್ರತಾಪ್ ಸಿಂಹ ಅವರಿಗೆ ಟಿಕೆಟ್ ಅನ್ನು ಬಿಜೆಪಿ ಸಂಸದೀಯ ಮಂಡಳಿ ನಿರ್ಧರಿಸಲಿದೆ ಎಂದು ಸ್ಪಷ್ಟಪಡಿಸಿದರು.

ಅಯೋಧ್ಯೆಯ ರಾಮಮಂದಿರದ ಬಾಲರಾಮನ ಶಿಲ್ಪಿ ಅರುಣ್‌ಯೋಗಿರಾಜ್ ತವರಾದ ಮೈಸೂರನ್ನು ಮತ್ತಷ್ಟು ಅಭಿವೃದ್ಧಿಗೊಳಿಸುವುದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಆಶಯವಾಗಿದೆ ಎಂದು ತಿಳಿಸಿದರು. ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ 400 ಸ್ಥಾನಗಳಲ್ಲಿ ಗೆಲ್ಲುವ ಗುರಿ ಹೊಂದಲಾಗಿದೆ. ಒಗ್ಗಟ್ಟಿನಲ್ಲಿ ಬಲವಿದೆ ಎಂಬ ಮಾತಿನಂತೆ ಗುರಿ ತಲುಪಲು ಬಿಜೆಪಿ ನಾಯಕರೆಲ್ಲಾ ಒಟ್ಟಾಗಿದ್ದೇವೆ. ಆದರೆ ಶಾಸಕ ಬಸವನಗೌಡ ಪಾಟೀಲ್ ಯತ್ನಾಳ್ ತಮ್ಮದೇ ಅಭಿಪ್ರಾಯ ವ್ಯಕ್ತಪಡಿಸಿರಬಹುದು. ಆದರೆ ಅದು ಅಪಸ್ವರವಲ್ಲ. ನರೇಂದ್ರ ಮೋದಿ ಅವರನ್ನು ಪ್ರಧಾನಮಂತ್ರಿ ಮಾಡಲು ನನ್ನ ಸಂಪೂರ್ಣ ಬೆಂಬಲವಿದೆ ಎಂದು ಯತ್ನಾಳ್ ಕೂಡ ಹೇಳಿದ್ದಾರೆ ಎಂದು ಅಶ್ವಥ್ ನಾರಾಯಣ್ ತಿಳಿಸಿದರು.

ಮಹಿಳೆಯರು, ರೈತರು, ಯುವಕರು ಹಾಗೂ ಬಡವರಿಗಾಗಿ ಕೇಂದ್ರ ಬಿಜೆಪಿ ಸರ್ಕಾರ ಹಲವು ಯೋಜನೆ ಅನುಷ್ಠಾನಗೊಳಿಸಿದೆ. ಇದರಿಂದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ಉತ್ತಮ ಬೆಂಬಲ ವ್ಯಕ್ತವಾಗಿದೆ. ಕಳೆದ ಬಾರಿ ಕೊಡಗು ಜಿಲ್ಲೆಯಲ್ಲಿ ಬಿಜೆಪಿಗೆ 85 ಸಾವಿರ ಮತ ಬಂದಿತ್ತು. ಈ ಬಾರಿ ಒಂದು ಲಕ್ಷ ಲೀಡ್ ಬರಲಿದೆ ಎಂದು ಮಾಜಿ ಶಾಸಕ ಅಪ್ಪಚ್ಚು ರಂಜನ್ ವಿಶ್ವಾಸ ವ್ಯಕ್ತಪಡಿಸಿದರು.

ಕ್ಲಸ್ಟರ್‌ನಲ್ಲಿ ಬಿಜೆಪಿ, ಜೆಡಿಎಸ್ ಒಗ್ಗಟ್ಟಿನಿಂದ ಕೆಲಸ

ಕರ್ನಾಟಕದಲ್ಲಿ ಬಿಜೆಪಿ ಹಾಗೂ ಜೆಡಿಎಸ್ ನಡುವೆ ಚುನಾವಣಾ ಮೈತ್ರಿ ಏರ್ಪಟ್ಟಿರುವ ಕಾರಣ ನಾಲ್ಕು ಲೋಕಸಭಾ ಕ್ಷೇತ್ರದಲ್ಲಿ ಮೈತ್ರಿ ಅಭ್ಯರ್ಥಿ ಗೆಲ್ಲಿಸುವ ನಿಟ್ಟಿನಲ್ಲಿ ಕ್ಲಸ್ಟರ್‌ನಲ್ಲಿ ಬಿಜೆಪಿ ಹಾಗೂ ಜೆಡಿಎಸ್ ನಾಯಕರು ಒಟ್ಟಾಗಿ ಕುಳಿತು ಕೆಲಸ ಮಾಡಲಿದ್ದೇವೆ ಎಂದು ಕ್ಲಸ್ಟರ್ ಮುಖ್ಯಸ್ಥರೂ ಆದ ಮಾಜಿ ಸಚಿವ ಎಸ್.ಎ.ರಾಮದಾಸ್ ತಿಳಿಸಿದರು. ಮೈತ್ರಿ ಅಭ್ಯರ್ಥಿ ಗೆಲ್ಲಿಸುವ ನಿಟ್ಟಿನಲ್ಲಿ ಈ ಕ್ಲಸ್ಟರ್ ಎರಡು ಪಕ್ಷಗಳ ನಾಯಕರಲ್ಲಿ ಸಮನ್ವಯ ಸಾಧಿಸಲಿದೆ. ಗೆಲುವಿಗಾಗಿ ಕಾರ್ಯತಂತ್ರ ಹಾಗೂ ಯೋಜನೆಗಳು ಕ್ಲಸ್ಟರ್‌ನಲ್ಲಿ ರೂಪುಗೊಳ್ಳಲಿವೆ ಎಂದು ಹೇಳಿದರು.

ಕಳೆದ ಹತ್ತು ವರ್ಷದಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಮಾಡಿರುವ ಜನಪರ ಯೋಜನೆಗಳು ಹಾಗೂ ಮುಂದಿನ ಐದು ವರ್ಷದಲ್ಲಿ ಮಾಡಬೇಕಿರುವ ಅಭಿವೃದ್ಧಿಯ ಮುನ್ನೋಟ ಮುಂದಿಟ್ಟು ಜನರಲ್ಲಿ ಮತ ಕೇಳಲಿದ್ದೇವೆ. ಈ ಮೂಲಕ 400 ಸ್ಥಾನಗಳ ಗಡಿ ದಾಟುತ್ತೇವೆ. ಇದನ್ನು ವಿಶ್ವಾಸದಿಂದ ಮಾತ್ರ ಹೇಳದೆ ವಾಸ್ತವತೆಯ ನೆಲೆಗಟ್ಟಿನಲ್ಲಿ ಹೇಳುತ್ತಿದ್ದೇನೆ ಎಂದು ರಾಮದಾಸ್ ಹೇಳಿದರು. ಪ್ರಧಾನಮಂತ್ರಿ ಸುನಿಧಿಯಲ್ಲಿ 788 ಕೋಟಿ ಹಣ ಬಿಡುಗಡೆಯಾಗಿದ್ದು, ಕರ್ನಾಟಕ ಶೇ.100ರಷ್ಟು ಬಳಕೆ ಮಾಡಿಕೊಂಡಿದೆ. ಇನ್ನು ವಿಶ್ವಕರ್ಮ ಸಮುದಾಯದ ಶ್ರೇಯೋಭಿವೃದ್ಧಿಗೆ ಕರ್ನಾಟಕದ 23 ಲಕ್ಷ ಸೇರಿದಂತೆ ರಾಜ್ಯದಲ್ಲಿನ 93 ಲಕ್ಷ ಜನರು ಅರ್ಜಿ ಸಲ್ಲಿಸಿದ್ದು, ಪರಿಶೀಲನೆ ನಡೆಯುತ್ತಿದೆ. ಈಗಾಗಲೇ 20 ಸಾವಿರ ಜನರ ಬ್ಯಾಂಕ್ ಖಾತೆಗೆ ಒಂದು ಲಕ್ಷ ರೂಪಾಯಿ ಜಮಾ ಆಗಿದೆ. ಇಂತಹ ಹತ್ತು ಹಲವು ಜನಪರ ಯೋಜನೆಗಳಿಂದ ಮತ್ತೆ ನರೇಂದ್ರ ಮೋದಿ ಸರ್ಕಾರ ಅಧಿಕಾರಕ್ಕೆ ಬರಲಿದೆ ಎಂದು ರಾಮದಾಸ್ ವಿಶ್ವಾಸ ವ್ಯಕ್ತಪಡಿಸಿದರು.

ಮೈತ್ರಿ ಪಕ್ಷದ ಗೆಲುವಿನ ಕಾರ್ಯತಂತ್ರ ಫಲಿತಾಂಶದ ನಂತರ ತಿಳಿಯುತ್ತೆ

ರಾಜ್ಯಸಭಾ ಚುನಾವಣೆಯಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿಯ 2ನೇ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವ ಕುಪೇಂದ್ರ ರೆಡ್ಡಿ ಗೆಲುವಿನ ನಮ್ಮ ಕಾರ್ಯತಂತ್ರ ಚುನಾವಣಾ ಫಲಿತಾಂಶದ ನಂತರ ತಿಳಿಯಲಿದೆ ಎಂದು ಮಾಜಿ ಉಪ ಮುಖ್ಯಮಂತ್ರಿ ಅಶ್ವಥ್ ನಾರಾಯಣ್ ತಿಳಿಸಿದರು. ಈಗ ಕುಪೇಂದ್ರ ರೆಡ್ಡಿ ನಾಮಪತ್ರ ಸಲ್ಲಿಸಿದ್ದಾರೆ. ಗೆಲುವಿಗಾಗಿ ಮಾತುಕತೆಗಳು ನಡೆಯುತ್ತಿವೆ. ನಮ್ಮ ಗೆಲುವಿನ ತಂತ್ರಗಾರಿಕೆಗಳು ಫಲಿತಾಂಶದ ನಂತರ ತಿಳಿಯುತ್ತದೆ ಎಂದರು.

ಕರ್ನಾಟಕದಲ್ಲಿ ಲೂಟಿಕೋರ, ಭಂಡತನದ ಸರ್ಕಾರ ಅಸ್ತಿತ್ವದಲ್ಲಿದೆ. ಒಂದು ವರ್ಗದ ತುಷ್ಟೀಕರಣಕ್ಕಾಗಿ ಭಾರತದ ಧರ್ಮ, ಸಂಸ್ಕೃತಿ ವಿರುದ್ಧವಾಗಿ ಮುಖ್ಯಮಂತ್ರಿ, ಉಪಮುಖ್ಯಮಂತ್ರಿಯಿಂದ ಹಿಡಿದು ಎಲ್ಲರೂ ಮನ ಬಂದಂತೆ ಮಾತನಾಡುತ್ತಿದ್ದಾರೆ ಎಂದು ಟೀಕಿಸಿದರು. ಈ ಸರ್ಕಾರ ಕಾಂಗ್ರೆಸ್ ಶಾಸಕರ ವಿಧಾನಸಭಾ ಕ್ಷೇತ್ರಗಳ ಅಭಿವೃದ್ಧಿಗೆ ಹಣ ಕೊಡುತ್ತಿಲ್ಲ. ಇನ್ನು ಪ್ರತಿಪಕ್ಷ ಶಾಸಕ ಕ್ಷೇತ್ರಗಳ ಅಭಿವೃದ್ಧಿಯತ್ತ ಸರ್ಕಾರ ತಿರುಗಿ ಕೂಡ ನೋಡುತ್ತಿಲ್ಲ. ಇದೊಂದು ಎಟಿಎಂ ಸರ್ಕಾರವಾಗಿದ್ದು, ಅಧಿಕಾರದಲ್ಲಿರುವ ಕುಟುಂಬಸ್ಥರು, ಏಜೆಂಟರು ಹಾಗೂ ಬ್ರೋಕರ್‌ಗಳು ದರ್ಬಾರು ನಡೆಸುತ್ತಿದ್ದಾರೆ ಎಂದು ಅಶ್ವಥ್ ನಾರಾಯಣ್ ಆರೋಪಿಸಿದರು.

ಮೋಜಿಗೆ ಪತಿ ಬಲಿ

ಎಂದು ರೀಲ್ಸ್ ಮಾಡಿ, ಅಪ್ಲೋಡ್ ಮಾಡಿರುವುದು ಗೊತ್ತಾಗಿದೆ. ಸಿಟ್ಟಿಗೆದ್ದ ಕುಮಾರ್, ಪತ್ನಿಗೆ ಕರೆ ಮಾಡಿ ರೀಲ್ಸ್ ಡಿಲೀಟ್ ಮಾಡುವಂತೆ ಹೇಳಿದ್ದಾರೆ. ನಾನು ನನ್ನ ಸೋದರಿ ಹಾಗೂ ಸೋದರ ಮಾವನೊಂದಿಗೆ ರೀಲ್ಸ್ ಮಾಡಿದ್ದರಲ್ಲಿ ತಪ್ಪೇನಿದೆ? ಎಂದು ರೂಪಾ ಪ್ರಶ್ನಿಸಿದ್ದಾರೆ. ಹೀಗೆ ಮಾತಿಗೆ ಮಾತು ಬೆಳೆದು ಗಲಾಟೆ ಆಗಿದೆ.

ಈ ಎಲ್ಲಾ ಬೆಳವಣಿಗೆಯಿಂದ ಮನನೊಂದಿದ್ದ ಕುಮಾರ್ ಬುಧವಾರ ರಾತ್ರಿ ಮನೆಯಿಂದ ಸೀರೆಯೊಂದನ್ನು ತೆಗೆದುಕೊಂಡು ಹೋಗಿ, ಪಕ್ಕದಲ್ಲೇ ಇರುವ ಮರಕ್ಕೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮೃತ ಕುಮಾರ್‌ನ ಸೋದರ ಮಹಾದೇವಸ್ವಾಮಿ, ರೂಪಾ, ಆಕೆಯ ಸಹೋದರಿ ಯಶೋದಾ ಹಾಗೂ ಸೋದರ ಮಾವ ಗೋವಿಂದ ವಿರುದ್ಧ ಹನೂರು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಹನೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆ ಬಳಿಕ ಶವವನ್ನು ಕುಟುಂಬಸ್ಥರಿಗೆ ನೀಡಿದರು.ದಶಕಗಳ ಹಿಂದಿನ ಪ್ರಸಿದ್ಧ ಗೀತೆಗಳ ಒಂದೆರಡು ಸಾಲುಗಳಿಗೆ ಆಧುನಿಕ ಟಚ್ ನೀಡಿ, ಅದಕ್ಕೆ ರೀಲ್ಸ್ ಮಾಡುವ ಟ್ರೆಂಡ್ ಶುರುವಾಗಿದೆ. ಇತ್ತೀಚೆಗೆ ಉಪೇಂದ್ರ ಚಿತ್ರದ 'ಕರಿಮಣಿ ಮಾಲೀಕ ನೀನಲ್ಲ' ಭಾರೀ ವೈರಲ್ ಆಗಿದೆ. ಈ ಹಾಡಿಗೆ ಎಲ್ಲಾ ವಯೋಮಾನದವರೂ ರೀಲ್ಸ್ ಮಾಡಿ, ಹಂಚಿಕೊಳ್ಳುತ್ತಿದ್ದಾರೆ. ಆದರೆ ಈ ರೀಲ್ಸ್‌ಗೆ ಒಂದು ಜೀವ ಬಲಿಯಾಗಿದ್ದು ದುರ್ದೈವ. ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಜಾಲತಾಣದಲ್ಲಿ ಸಿಕ್ಕಾಪಟ್ಟೆ ವೈರಲ್ ಆಗುವ ಹಾಡು, ಸಂಭಾಷಣೆಯ ಹೀರೋ–ಹೀರೋಯಿನ್ ದುರಂತ ಸಾವಿಗೀಡಾಗುವ ಘಟನೆಗಳು ಹೆಚ್ಚಾಗಿ ವರದಿ ಆಗುತ್ತಿವೆ.

ಶೇ.60ರಷ್ಟು ಕನ್ನಡ ಕಡ್ಡಾಯ

ಸರ್ಕಾರ ಕಾನೂನು ಜಾರಿಗೊಳಿಸಲು ನಿಯಮಗಳನ್ನು ರೂಪಿಸುತ್ತಿದೆ ಎಂದು ಹೇಳಿದರು. ನಿಯಮ ಉಲ್ಲಂಘಿಸಿದರೆ ನಾವು ಪರವಾನಗಿ ರದ್ದುಗೊಳಿಸುತ್ತೇವೆ. ಪರವಾನಗಿಗಳನ್ನು ರದ್ದುಗೊಳಿಸಿದಾಗ ಮಾತ್ರ ವ್ಯಾಪಾರಿಗಳು ಮತ್ತು ಸಂಸ್ಥೆಗಳು ಎಚ್ಚೆತ್ತುಕೊಳ್ಳುತ್ತವೆ. ನಿಯಮ ಉಲ್ಲಂಘನೆಗಾಗಿ ದಂಡ ವಿಧಿಸಲು ಸರ್ಕಾರ ನಿಯಮಗಳನ್ನು ಸೇರಿಸುತ್ತದೆ ಎಂದು ಅವರು ಶಾಸಕರಿಗೆ, ವಿಶೇಷವಾಗಿ ಪ್ರತಿಪಕ್ಷ ಬಿಜೆಪಿಯವರಿಗೆ ಸಚಿವರು ಭರವಸೆ ನೀಡಿದರು. ಕನ್ನಡ ನಾಮಫಲಕಗಳನ್ನು ಖಚಿತಪಡಿಸಿಕೊಳ್ಳಲು ಪ್ರತಿ ಜಿಲ್ಲೆಯಲ್ಲಿ ಪೊಲೀಸ್ ಸಿಬ್ಬಂದಿಯನ್ನು ಒಳಗೊಂಡ ಜಾರಿ ವಿಭಾಗವನ್ನು ಹೊರತುಪಡಿಸಿ ಸರ್ಕಾರ ಕಾರ್ಯಪಡೆಗಳನ್ನು ರಚಿಸುತ್ತದೆ ಎಂದು ಸಚಿವರು ಹೇಳಿದರು. ನಾಮಫಲಕಗಳಲ್ಲಿ ಕನ್ನಡ ಬಳಸದಿರುವ ಸಮಸ್ಯೆ ಇರುವುದು ಬೆಂಗಳೂರಿನಲ್ಲಿ ಮಾತ್ರ ಎಂದರು.

ಚಿಕ್ಕನಹಳ್ಳಿ ಬಳಿ ಬೋನಿಗೆ ಬಿದ್ದ ಗಂಡು ಹುಲಿ



ಸೆರೆ ಸಿಕ್ಕ ಹುಲಿಗೆ ರೇಡಿಯೋ ಕಾಲರ್ ಅಳವಡಿಸಿರುವುದು

ಮೈಸೂರು,ಫೆ.15(ಎಂಟಿವೈ)– ಕಾಡಂಚಿನ ಗ್ರಾಮಗಳಲ್ಲಿ ಕಾಣಿಸಿಕೊಂಡು ಗ್ರಾಮಸ್ಥರಲ್ಲಿ ಆತಂಕವುಂಟು ಮಾಡಿದ್ದ ಗಂಡು ಹುಲಿಯೊಂದು ಅರಣ್ಯ ಇಲಾಖೆ ಇಟ್ಟಿದ್ದ ಬೋನಿಗೆ ಬಿದ್ದು ಸೆರೆ ಸಿಕ್ಕಿದ್ದು, ಆರೋಗ್ಯವಂತವಾಗಿರುವ ಹುಲಿಗೆ ರೇಡಿಯೋ ಕಾಲರ್ ಅಳವಡಿಸಿ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಬಿಡುಗಡೆ ಮಾಡಲು ನಿರ್ಧರಿಸಲಾಗಿದೆ.

ಮೈಸೂರು ತಾಲೂಕಿನ ಚಿಕ್ಕನಹಳ್ಳಿ ಮೀಸಲು ಅರಣ್ಯ ಪ್ರದೇಶದ ಕಾಡಂಚಿನ ಗ್ರಾಮಗಳಲ್ಲಿ ಕಳೆದ 4–5 ತಿಂಗಳಿನಿಂದ ಪದೇ ಪದೇ ಕಾಣಿಸಿಕೊಂಡು ಗ್ರಾಮಸ್ಥರಲ್ಲಿ ಭಯದ ವಾತಾವರಣ ಮೂಡಿಸಿದ್ದ 5 ವರ್ಷದ ಗಂಡು ಹುಲಿ ಅರಣ್ಯ ಇಲಾಖೆ ಕಳೆದ 3 ತಿಂಗಳಿಂದ ಸತತವಾಗಿ ನಡೆಸಿದ ಕಾರ್ಯಾಚರಣೆಯ ಫಲವಾಗಿ ಗುರುವಾರ(ಫೆ.15) ಮುಂಜಾನೆ ಕುರಿಯನ್ನು ಬೇಟೆಯಾಡಲು (ಲೈವ್ ಬೈಟ್) ಬೋನಿನೊಳಗೆ ನುಸುಳಿ ಸೆರೆ ಸಿಕ್ಕಿದೆ. ಸೆರೆ ಸಿಕ್ಕಿರುವ ಹುಲಿ ಆರೋಗ್ಯ ಹಾಗೂ ಸದೃಢವಾಗಿದ್ದು, ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳ ಹಾಗೂ ಟೈಗರ್ ಸೆಲ್ ಸೂಚನೆ ಮೇರೆ ರೇಡಿಯೋ ಕಾಲರ್ ಅಳವಡಿಸಿ, ಜನವಸತಿ ಪ್ರದೇಶದಿಂದ ದೂರವಿರುವ ಹುಲಿ ಸಂರಕ್ಷಿತ ಪ್ರದೇಶ ದುಪ್ಪಟ್ಟದಲ್ಲಿ ಬಿಡುಗಡೆ ಮಾಡಲು ನಿರ್ಧರಿಸಲಾಗಿದೆ

ಕಳೆದ 3 ತಿಂಗಳಿಂದ ಕಣ್ಣಾಮುಚ್ಚಾಲೆ ಆಡುತ್ತಿದ್ದ ಹುಲಿ

ಚಿಕ್ಕಕಾನ್ಯ, ದೊಡ್ಡಕಾನ್ಯ ಹುಲಿಯೇ ಬೇರೆ, ಸೆರೆ ಸಿಕ್ಕ ಹುಲಿಯೇ ಬೇರೆ

ಇಂದು ಸೆರೆ ಸಿಕ್ಕಿದ ಹುಲಿಯು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಜನಿಸಿದ ಗಂಡು ಹುಲಿಯಾಗಿದೆ. ಬಂಡೀಪುರದ ದಾಖಲೆಯಲ್ಲಿ ಟಿ–23 ಎಂದು ಗುರುತಿಸಲ್ಪಟ್ಟ ಹುಲಿ ಇದಾಗಿದ್ದು, ಅರಣ್ಯ ಪ್ರದೇಶದಿಂದ ಹೊರ ಬಂದು ಸರಹದ್ದು ಗುರುತಿಸಿಕೊಳ್ಳುವ ಪ್ರಯತ್ನ ನಡೆಸಿತ್ತು ಎಂಬ ಶಂಕೆ ವ್ಯಕ್ತವಾಗಿದೆ. ಚಿಕ್ಕಕಾನ್ಯ, ದೊಡ್ಡಕಾನ್ಯ ಬಳಿ ಕಾಣಿಸಿಕೊಂಡ ಹುಲಿ ಮೈಸೂರು ವಿಭಾಗದ ಟಿ–7 ಸಂಖ್ಯೆಯ ಹುಲಿಯಾಗಿದೆ. ಅಲ್ಲದೆ, ಎರಡು ದಿನದ ಹಿಂದೆಯೂ ದೊಡ್ಡಕಾನ್ಯ ಬಳಿ ಹುಲಿ ನೋಡಿದ್ದಾಗಿ ಕೆಲವರು ಮಾಹಿತಿ ನೀಡಿದ್ದಾರೆ. ಈ ಹುಲಿ ಸೆರೆಗೂ ಕ್ರಮ ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಹುಲಿಯದ್ದೇ ಭಯ: ಮೈಸೂರು ತಾಲೂಕಿನ ಮಾರ್ಬಳ್ಳಿ, ಅರಸಿನಕೆರೆ, ಗುಜ್ಜೇಗೌಡಪುರ, ದೊಡ್ಡಕಾನ್ಯ, ಚಿಕ್ಕಕಾನ್ಯ, ಬೆಟ್ಟದಬೀಡು, ಕಣಿಯನಹುಂಡಿ, ಮಾವಿನಹಳ್ಳಿ, ಜಯಪುರ, ದೂರ, ಗುಂಚನಹಳ್ಳಿ ಸೇರಿದಂತೆ ವಿವಿಧ ಗ್ರಾಮಗಳ ಜಮೀನು, ತೋಟಗಳಲ್ಲಿ 2023ರ ಅಕ್ಟೋಬರ್ ತಿಂಗಳಿಂದ ಆಗ್ಗಿಂದಾಗ್ಗೆ ಕಾಣಿಸಿಕೊಂಡು ಜನರಲ್ಲಿ ಆತಂಕ ಉಂಟುಮಾಡುತ್ತಿದ್ದ ಹುಲಿ ಅರಣ್ಯ ಇಲಾಖೆಗೆ ದೊಡ್ಡ ಸವಾಲಾಗಿ ಪರಿಣಮಿಸಿತ್ತು. ನಗರ ಹುಲಿ(ಅರ್ಬನ್ ಟೈಗರ್) ಎಂದು ಗುರುತಿಸಲ್ಪಟ್ಟ, ದಟ್ಟ ಅರಣ್ಯದಿಂದ ದೂರವಿರುವ ಹುಲಿಗಳು ಕಾಡಂಚಿನ ಗ್ರಾಮಗಳಲ್ಲಿಯೇ ನೆಲೆ ಕಂಡುಕೊಂಡಿರುವ ಕೆಲ ಹುಲಿಗಳಲ್ಲಿ ಇಂದು ಸೆರೆ ಸಿಕ್ಕಿರುವ ಹುಲಿಯೂ ಒಂದಾಗಿದೆ. ನವೆಂಬರ್‌ನಲ್ಲಿ ಹುಲಿ ಉಪಟಳ ಹೆಚ್ಚಾದ ಹಿನ್ನೆಲೆಯಲ್ಲಿ 2023ರ ನ.29ರಿಂದ ಚಿಕ್ಕನಹಳ್ಳಿ ಸುತ್ತಮುತ್ತ ಹುಲಿ ಸೆರೆಗೆ ಕಾರ್ಯಾಚರಣೆ ಆರಂಭಿಸಲಾಗಿತ್ತು

ಕ್ಯಾಮರಾ ಟ್ರ್ಯಾಪ್‌ನಲ್ಲಿ ಸೆರೆ: ಬೋನಿಗೆ ಬಿದ್ದ ಹುಲಿ ಚಿಕ್ಕನಹಳ್ಳಿ ಮೀಸಲು ಅರಣ್ಯ ಪ್ರದೇಶದ ಸುತ್ತ ಕೆಲವೆಡೆ ಅಳವಡಿಸಿದ್ದ ಕ್ಯಾಮರಾ ಟ್ರ್ಯಾಪ್‌ನಲ್ಲಿ ಸೆರೆಯಾಗಿತ್ತು



ಹುಲಿ ಸೆರೆಗಾಗಿ ವಿನ್ಯಾಸಗೊಳಿಸಿರುವ ವಾಕ್ ಥ್ರೋ ಬೋನ್

ಇದರಿಂದ ಚಿರತೆ ಕಾರ್ಯಪಡೆ, ನೆಟ್ವರ್ಕ್ ಕ್ಯಾಮರಾ, ಥರ್ಮಲ್ ಡ್ರೋನ್, ಐಆರ್ ಕ್ಯಾಮರಾ, ಬೋನ್ ಅಳವಡಿಸಿ ಕಾರ್ಯಾಚರಣೆ ಆರಂಭಿಸಲಾಗಿತ್ತು.

ಎರಡು ಬಾರಿ ದಾಳಿಯ ಯತ್ನ: ಈ ಹುಲಿ ಎರಡು ಬಾರಿ ಹಸುವಿನ ಮೇಲೆ ದಾಳಿ ಮಾಡಿ ಬೇಟೆಯಾಡುವ ವಿಫಲ ಯತ್ನ ನಡೆಸಿತ್ತು. ಇದರಿಂದ ಹುಲಿ ಬೇಟೆಯಾಡುವ ಕಲೆ ಸರಿಯಾಗಿ ಕಲಿಯದೇ ಇರುವುದು ದೃಢಪಟ್ಟಿತ್ತು.

ಚಿಕ್ಕ ಪ್ರಾಣಿಗಳನ್ನೇ ಅವಲಂಬಿಸಿದ್ದ ಹುಲಿ: ಕಾಡಿಂದ ಹೊರಬಂದು ಮೀಸಲು ಅರಣ್ಯ ಪ್ರದೇಶದಲ್ಲಿ ನೆಲೆ ಕಂಡುಕೊಳ್ಳುವ ಪ್ರಯತ್ನ ಮಾಡುತ್ತಿದ್ದ ಹುಲಿ ಕಾಡಂದಿ, ಜಿಂಕೆ, ಮೊಲ, ನವಿಲು ಬೇಟೆಯಾಡಿ ಜೀವಿಸುತ್ತಿತ್ತು. ಅಲ್ಲದೆ, ಕಾಡಂಚಿನ ಗ್ರಾಮಗಳ ಜಮೀನಿನ ಬಳಿ ಮೇಯುತ್ತಿದ್ದ ಜಾನುವಾರುಗಳನ್ನು ಬೇಟೆಯಾಡಲು ಪ್ರಯತ್ನಿಸುತ್ತಿತ್ತು.

ಇದೇ ಮೊದಲ ಬಾರಿಗೆ ನೂತನ ವಿನ್ಯಾಸದ ವಾಕ್ ಥ್ರೂ ಬೋನ್‌ಗೆ ಹುಲಿ ಬಿದ್ದಿದೆ. 32 ಅಡಿ ಉದ್ದ, 10 ಅಡಿ ಅಗಲ ಹಾಗೂ 10 ಅಡಿ ಎತ್ತರದ ಈ ಬೋನ್‌ಗೆ ಎಡಹೂ ಕಡೆ ಬಾಗಿಲು ಇದೆ. ಒಳಗಡೆ ಕಟ್ಟಿ ಹಾಕಿರುವ ಪ್ರಾಣಿಯನ್ನು ಬೇಟೆಯಾಡಲು ಯಾವುದೇ ಬಾಗಿಲಿನ ಮೂಲಕ ಹುಲಿ ಅಥವಾ ಚಿರತೆ ಹೊಕ್ಕರೂ ಒಂದೇ ಬಾರಿಗೆ ಎರಡೂ ಬಾಗಿಲು ಮುಚ್ಚಿಕೊಳ್ಳುತ್ತವೆ ಈ ಹೊಸ ತಂತ್ರಜ್ಞಾನದ ವಾಕ್ ಥ್ರೂ ಬೋನ್ ಯಶಸ್ವಿಯಾಗಿದೆ.

ಮೈಸೂರು ವಿಭಾಗದ ಸಿಎಫ್ ಡಾ.ಮಾಲತಿ ಪ್ರಿಯಾ, ಡಿಸಿಎಫ್ ಡಾ.ಕೆ.ಎನ್.ಬಸವರಾಜ್ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಎಸಿಎಫ್ ಎನ್.ಲಕ್ಷ್ಮೀಕಾಂತ್, ಆರ್‌ಎಫ್‌ಓ ಕೆ.ಸುರೇಂದ್ರ, ಡಿಆರ್‌ಎಫ್‌ಗಳು, ಗಾರ್ಡ್‌ಗಳು, ಇಟಿಎಫ್ ತಂಡ ಸೇರಿದಂತೆ ಇನ್ನಿತರ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

ಕಾಣಸಿಗದೇ ಮಾಯವಾದ ಹುಲಿ ಜಾಡು

ಕಡಕೊಳದಿಂದ ಶ್ರೀರಂಗಪಟ್ಟಣ ತಾಲೂಕಿನ ಮಹದೇವಪುರ, ಬಿದರಳ್ಳಿಹುಂಡಿ, ಚನ್ನಹಳ್ಳಿ ಬಳಿ ಕಾಣಿಸಿಕೊಂಡಿದ್ದ ಟಿ–9 ಹುಲಿ ಹಾಗೂ ನಾಲ್ಕು ದಿನದ ಹಿಂದಷ್ಟೇ ಬನ್ನೂರಿನ ಬಳಿ ಕಾಣಿಸಿಕೊಂಡ ಹುಲಿ ಜಾಡು ಪತ್ತೆಯಾಗಿಲ್ಲ. ಅರಣ್ಯ ಇಲಾಖೆ ಥರ್ಮಲ್ ಡ್ರೋನ್ ಬಳಸಿ ಕಾರ್ಯಾಚರಣೆ ನಡೆಸಿದ್ದರೂ ಹುಲಿ ಇರುವಿಕೆ ಪತ್ತೆಯಾಗಿಲ್ಲ. ಥರ್ಮಲ್ ಡ್ರೋನ್ ಕಾರ್ಯಾಚರಣೆ ವೇಳೆ ಕಬ್ಬಿನ ಗದ್ದೆಯಲ್ಲಿ ಕಾಡುಹಂದಿ ಸೇರಿದಂತೆ ಇನ್ನಿತರ ಪ್ರಾಣಿಗಳಿರುವಿಕೆ ಪತ್ತೆಯಾಗಿದೆ. ಆದರೆ, ಹುಲಿ ಮಾತ್ರ ಸುಳಿವು ನೀಡಿಲ್ಲ. ಇದರಿಂದ ಈ ಎರಡು ಸ್ಥಳದಲ್ಲಿ ಕಾಣಿಸಿಕೊಂಡು ಹುಲಿ ನಿಗೂಢವಾಗಿದೆ.

ರಾಜ್ಯದಲ್ಲಿ ಮೊದಲ ಹುಲಿ

ರಾಜ್ಯದಲ್ಲಿ ರೇಡಿಯೋ ಕಾಲರ್ ಅಳವಡಿಸಿ ಅರಣ್ಯಕ್ಕೆ ಬಿಡುಗಡೆ ಮಾಡಲಾದ ಮೊದಲ ಹುಲಿ ಎಂಬ ಹೆಗ್ಗಳಿಕೆ ಬೋನಿಗೆ ಬಿದ್ದು ಸೆರೆಯಾದ ಟಿ–23 ಹುಲಿಗೆ ಸಲ್ಲುತ್ತದೆ. ಈಗಾಗಲೇ ವಿವಿಧೆಡೆ ಹಿಡಿದು ಸ್ಥಳಾಂತರ ಮಾಡಿರುವ 30ಕ್ಕೂ ಹೆಚ್ಚು ಆನೆಗಳಿಗೆ ರೇಡಿಯೋ ಕಾಲರ್ ಅಳವಡಿಸಲಾಗಿದೆ. ಆದರೆ, ಹುಲಿಗೆ ಮಾತ್ರ ಇದುವರೆಗೂ ರೇಡಿಯೋ ಕಾಲರ್ ಅಳವಡಿಸುವ ಹಾಗೂ ಸೆರೆ ಸಿಕ್ಕ ನಂತರ ಬಿಡುಗಡೆ ಮಾಡುವ ನಿರ್ಧಾರ ಕೈಗೊಂಡಿರಲಿಲ್ಲ.

ಮೈಸೂರು ಪಾಲಿಕೆ ಪ್ರಧಾನ ಕಚೇರಿ ಪಾರಂಪರಿಕ ಕಟ್ಟಡ ಸಂರಕ್ಷಣೆ

ಜಿಲ್ಲಾಧಿಕಾರಿ ಡಾ.ರಾಜೇಂದ್ರ ನೇತೃತ್ವದ ಪಾರಂಪರಿಕ ಸಮಿತಿ ನಿರ್ಧಾರ



ಮೈಸೂರು,ಫೆ15(ಆರ್‌ಕೆ)– ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿರುವ ಮೈಸೂರು ಮಹಾನಗರ ಪಾಲಿಕೆ ಪ್ರಧಾನ ಕಚೇರಿ ಪಾರಂಪರಿಕ ಕಟ್ಟಡವನ್ನು ಸಂರಕ್ಷಿಸಲು ಜಿಲ್ಲಾ ಪಾರಂಪರಿಕ ಸಮಿತಿಯು ನಿರ್ಧರಿಸಿದೆ.

ಸಮಿತಿ ಅಧ್ಯಕ್ಷರಾದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಸಭೆಯಲ್ಲಿ ಪಾಲಿಕೆ ಕಚೇರಿ ಕಟ್ಟಡದ ಚಾವಣಿ ಸೋರಿಕೆಯಾಗಿ ಶಿಥಿಲಗೊಳ್ಳುತ್ತಿದ್ದು, ಅಪಾಯ ಸಂಭವಿಸುವ ಸ್ಥಿತಿಯಲ್ಲಿದೆ ಎಂದು ಸದಸ್ಯರು ದೂರಿದರು.

ಈ ಹಿಂದೆ ಚಾವಣಿಯಲ್ಲಿ ಸೋಲಾರ್ ಉಪಕರಣ ಅಳವಡಿಸುವಾಗ ಮೊಳೆ ಹೊಡೆದು ರಂಧ್ರ ಮಾಡಿದ್ದ ಕಾರಣ ಅಲ್ಲಿಂದ ಮಳೆ ನೀರು ಜಿನುಗಿ ಗೋಡೆಗಳು ಶಿಥಿಲಗೊಳ್ಳುತ್ತಿವೆ ಎಂದು ಪಾರಂಪರಿಕ ತಜ್ಞರು ಸಭೆಯಲ್ಲಿ ಪ್ರಸ್ತಾಪಿಸಿ, ಕೂಡಾ ರಿಪೇರಿ ಮಾಡಿ ಸಂರಕ್ಷಿಸದಿದ್ದರೆ, ಮುಂದೆ ಲ್ಯಾನ್ಸ್‌ಡೌನ್ ಮತ್ತು ದೇವರಾಜ ಮಾರುಕಟ್ಟೆ ಕಟ್ಟಡಗಳಂತೆ ಪಾಲಿಕೆ ಕಚೇರಿ ಪಾರಂಪರಿಕ ಕಟ್ಟಡವೂ ಶಿಥಿಲಾವಸ್ಥೆ ತಲುಪುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.



ಅಲ್ಲಲ್ಲಿ ಸಣ್ಣ ಬಿರುಕು ಕಾಣಿಸಿಕೊಂಡು ಗಿಡಗಳು ಬೆಳೆಯುತ್ತಿವೆ. ಆಗಿಂದಾಗ್ಗೆ ರಿಪೇರಿ ಮಾಡಿ ನಿರ್ವಹಣೆಯನ್ನು ಸರಿಯಾಗಿ ಮಾಡದಿದ್ದಲ್ಲಿ ಅಪಾಯ ಸಂಭವಿಸುವ ಸಾಧ್ಯತೆ ಇದೆ ಎಂದೂ ಪಾರಂಪರಿಕ ತಜ್ಞ ಪ್ರೊ.ಎನ್.ಎಸ್. ರಂಗರಾಜು ಸಮಿತಿಗೆ ವರದಿ ನೀಡಿದ್ದರು.

ಈ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಅತೀ ಶೀಘ್ರ ಮಹಾನಗರಪಾಲಿಕೆ ಕಚೇರಿ ಕಟ್ಟಡವನ್ನು ಪಾರಂಪರಿಕ ವಿನ್ಯಾಸಕ್ಕೆ ಧಕ್ಕೆ ಬಾರದಂತೆ ದುರಸ್ತಿ ಮಾಡಿ ಸಂರಕ್ಷಣಾ ಕಾಮಗಾರಿಯನ್ನು ಆರಂಭಿಸಿ ಪಾರಂಪರಿಕ ಕಟ್ಟಡಗಳ ಸಂರಕ್ಷಣೆ ಕಾರ್ಯದಲ್ಲಿ ನುರಿತ ಗುತ್ತಿಗೆದಾರರಿಗೆ ಒಪ್ಪಿಸುವಂತೆಯೂ ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಸೂಚಿಸಿದರು.

ಪಾಲಿಕೆ ಆಯುಕ್ತ ಆಶಾದ್ ಉರ್ ರೆಹಮಾನ್ ಷರೀಫ್, ಪಾರಂಪರಿಕ ಆಯುಕ್ತ ಎ.ದೇವರಾಜ್, ಉಪನಿರ್ದೇಶಕಿ ಮಂಜುಳಾ, ಮುಡಾ ನಗರ ಯೋಜಕ ಸದಸ್ಯ ಶೇಷ, ಸಮಿತಿ ಸದಸ್ಯರಾದ ಪ್ರೊ.ಎನ್.ಎಸ್.ರಂಗರಾಜು, ವಿಜಯರಾವ್, ಲೋಕೇಶ್ ಹಾಗೂ ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.

ಬೆಳಗಾವಿ ಮಹಾನಗರ ಪಾಲಿಕೆ ಮೇಯರ್ ಪಟ್ಟ ಮತ್ತೆ ಬಿಜೆಪಿ ತೆಕ್ಕೆಗೆ

ಮಾಜಿ ಪೌರಕಾರ್ಮಿಕ ಮಹಿಳೆ ಸವಿತಾ ಕಾಂಬಳೆ ಮೇಯರ್

ಬೆಳಗಾವಿ, ಫೆ.15– ಬೆಳಗಾವಿ ಮಹಾನಗರಪಾಲಿಕೆ ಮೇಯರ್ ಪಟ್ಟ ಮತ್ತೆ ಬಿಜೆಪಿಗೆ ಒಲಿದಿದ್ದು, ಪೌರ ಕಾರ್ಮಿಕ ಮಹಿಳೆ ಕನ್ನಡತಿ ಸವಿತಾ ಕಾಂಬಳೆ ಅವರು ಮೇಯರ್ ಆಗಿ ಆಯ್ಕೆಯಾಗಿದ್ದು ಉಪಮೇಯರ್ ಆಗಿ ಮರಾಠಿಯ ಆನಂದ್ ಚವ್ಹಾಣ್ ಆಯ್ಕೆಯಾಗಿದ್ದಾರೆ.



ಬಿಜೆಪಿ ಈ ಬಾರಿ ಕನ್ನಡ ಹಾಗೂ ಮರಾಠ ಸಮುದಾಯಗಳನ್ನು ಓಲೈಕೆ ಮಾಡಿದೆ ಬಿಜೆಪಿಯ ಆನಂದ್ ಚವ್ಹಾಣ್ 39 ಮತ ಹಾಗೂ ಕಾಂಗ್ರೆಸ್‌ನ ಜ್ಯೋತಿ ಕಡೋಲ್ಕರ್ 20 ಮತಗಳನ್ನು ಮಾತ್ರ ಪಡೆದಿದ್ದರು.

ಮೇಯರ್ ಆಗಿ ಆಯ್ಕೆಯಾಗಿರುವ ಸವಿತಾ ಕಾಂಬಳೆ ಅವರು ಕೆಲ ವರ್ಷಗಳ ಹಿಂದೆ ಇದೇ ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ಪೌರಕಾರ್ಮಿಕರಾಗಿ ಕೆಲಸ ಮಾಡಿದ್ದರು. ಬಳಿಕ ಖಾಸಗಿ ಕಂಪನಿಯೊಂದರಲ್ಲಿ ದಿನಗೂಲಿ ಕೆಲಸ ಮಾಡಿದ್ದ ಅವರು ಸ್ವಂತವಾಗಿ ಊದು ಬತ್ತಿ ತಯಾರಿಕಾ ಘಟಕ ಶುರು ಮಾಡಿದ್ದರು.

2021ರಲ್ಲಿ ಅವರಿಗೆ ಒಲಿದು ಬಂದ ಅವಕಾಶ ಬಳಸಿಕೊಂಡು ಬಿಜೆಪಿಯಿಂದ ಪಾಲಿಕೆ ಸದಸ್ಯರಾಗಿ ಆಯ್ಕೆಯಾಗಿದ್ದರು. ಇದೀಗ ಸವಿತಾ ಕಾಂಬಳೆ ಬೆಳಗಾವಿ ಮೇಯರ್ ಆಗಿ ಆಯ್ಕೆಯಾಗಿದ್ದಾರೆ.

ಮಾರ್ಚ್ 6ರೊಳಗೆ ಚುನಾವಣಾ ಬಾಂಡ್‌ಗಳ ಬಗ್ಗೆ ಚುನಾವಣಾ ಆಯೋಗಕ್ಕೆ ಮಾಹಿತಿ ಸಲ್ಲಿಸಿ

ಎಸ್‌ಬಿಐಗೆ ಸುಪ್ರೀಂಕೋರ್ಟ್ ಸೂಚನೆ



ನವದೆಹಲಿ, ಫೆ.15– ಸುಪ್ರೀಂಕೋರ್ಟ್ ತಕ್ಷಣದಿಂದ ಜಾರಿಗೆ ಬರುವಂತೆ ಚುನಾವಣಾ ಬಾಂಡ್‌ಗಳನ್ನು ನಿಷೇಧಿಸಿದ್ದು, ಚುನಾವಣಾ ಬಾಂಡ್‌ಗಳ ಯೋಜನೆ ಅಸಂವಿಧಾನಿಕ ಎಂದು ಮುಖ್ಯ ನ್ಯಾಯಮೂರ್ತಿ ಡಿವೈ ಚಂದ್ರಚೂಡ್, ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ, ಬಿಆರ್ ಗವಾಯಿ, ಜೆಬಿ ಪರ್ದಿವಾಲಾ ಮತ್ತು ಮನೋಜ್ ಮಿಶ್ರಾ ಅವರನ್ನೊಳಗೊಂಡ ಪೀಠ ಗುರುವಾರ ಸರ್ವಾನುಮತದ ತೀರ್ಪು ನೀಡಿದೆ.

ಕೇಂದ್ರ ಸರ್ಕಾರದ ಚುನಾವಣಾ ಬಾಂಡ್‌ಗಳ ಯೋಜನೆಯ ಕಾನೂನು ಸಿಂಧುತ್ವವನ್ನು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಗಳ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್, ಚುನಾವಣಾ ಬಾಂಡ್‌ಗಳನ್ನು ನಿಷೇಧಿಸಿದ್ದು, ಮಾರ್ಚ್ 6, 2024ರೊಳಗೆ ಎಸ್‌ಬಿಐ, ಚುನಾವಣಾ ಬಾಂಡ್‌ಗಳ ಬಗ್ಗೆ ಮಾಹಿತಿಯನ್ನು ಚುನಾವಣಾ ಆಯೋಗಕ್ಕೆ ಸಲ್ಲಿಸಬೇಕು ಎಂದು ಸುಪ್ರೀಂಕೋರ್ಟ್ ಸೂಚಿಸಿದೆ.

ಎಸ್‌ಬಿಐ ನಗದೀಕರಣದ ದಿನಾಂಕ, ಮುಖಬೆಲೆಯ ದಿನಾಂಕ ಸೇರಿದಂತೆ ರಾಜಕೀಯ ಪಕ್ಷಗಳು ಎನ್‌ಕ್ಯಾಶ್ ಮಾಡಿದ ಪ್ರತಿಯೊಂದು ಚುನಾವಣಾ ಬಾಂಡ್‌ನ ವಿವರಗಳನ್ನು ಬಹಿರಂಗಪಡಿಸಬೇಕು.

ಚುನಾವಣಾ ಆಯೋಗವು ತನ್ನ ಅಧಿಕೃತ ವೆಬ್‌ಸೈಟ್‌ನಲ್ಲಿ ಮಾರ್ಚ್ 13ರೊಳಗೆ ಎಸ್‌ಬಿಐ ಹಂಚಿಕೊಂಡ ಮಾಹಿತಿಯನ್ನು ಪ್ರಕಟಿಸಬೇಕು ಎಂದು ಸುಪ್ರೀಂಕೋರ್ಟ್ ತನ್ನ ತೀರ್ಪಿನಲ್ಲಿ ಹೇಳಿದೆ. 2019ರಿಂದ ಎಷ್ಟು ದೇಣಿಗೆ ಬಂದಿದೆ, ಎಷ್ಟು ಹಣವನ್ನು ರಾಜಕೀಯ ಪಕ್ಷಗಳು ಬಳಸಿಕೊಂಡಿದೆ ಎಂದು ಮಾಹಿತಿ ನೀಡಲು ಇದೇ ವೇಳೆ ಸುಪ್ರೀಂಕೋರ್ಟ್ ಚುನಾವಣಾ ಆಯೋಗಕ್ಕೆ ಸೂಚನೆ ನೀಡಿದೆ. ಕಪ್ಪು ಹಣಕ್ಕೆ ಕಡಿವಾಣ ಹಾಕಲು ಚುನಾವಣಾ ಬಾಂಡ್ ಯೋಜನೆ ಒಂದೇ ದಾರಿಯಲ್ಲ ಅದಕ್ಕೆ ಪರ್ಯಾಯ ಮಾರ್ಗಗಳಿವೆ ಎಂದಿದೆ.



ಜೆಡಿಎಸ್ ರಾಜ್ಯಾಧ್ಯಕ್ಷ ಹೆಚ್.ಡಿ.ಕುಮಾರಸ್ವಾಮಿ ಮಾಜಿ ಸಚಿವ ಸಾ.ರಾ.ಮಹೇಶ್ ರವರನ್ನು ಜೆಡಿಎಸ್ ಪಕ್ಷದ ರಾಜ್ಯ ಕಾರ್ಯಾಧ್ಯಕ್ಷರನ್ನಾಗಿ ನೇಮಕ ಮಾಡಿದ್ದು, ಅವರನ್ನು ಜನತಾದಳ (ಜಾತ್ಯಾತೀತ) ಪಕ್ಷದ ರಾಜ್ಯ ವಕ್ತಾರ ಎನ್ ಆರ್. ರವಿಚಂದ್ರೇಗೌಡ ಅಭಿನಂದಿಸಿದರು. ಈ ವೇಳೆ ಜೆ.ಡಿ.ಎಸ್. ಮುಖಂಡರಾದ ಎಸ್.ಪ್ರಕಾಶ್ ಪ್ರಿಯಾದರ್ಶನ್, ಪಿಎಸ್ ರಾಜಶೇಖರ ಮೂರ್ತಿ, ರವಿಕುಮಾರ್, ವೀರಭದ್ರ ಸ್ವಾಮಿ ಉಪಸ್ಥಿತರಿದ್ದರು.

ಮೈಸೂರಲ್ಲಿ ಸಂವಿಧಾನದ ಮಹತ್ವ ಸಾರಿದ ಸೈಕಲ್ ಜಾಥಾ

ಮೈಸೂರು,ಫೆ.15(ಪಿಎಂ)– 'ಸಂವಿಧಾನ ಅರಿವು–ದೇಶದ ಅರಿವು', 'ಭಾರತದ ಸಂವಿಧಾನ–ವಿಶ್ವ ಶ್ರೇಷ್ಠ ಸಂವಿಧಾನ' ಎಂಬಿತ್ಯಾದಿ ಅಭಿಮಾನಪೂರ್ವಕ ಘೋಷವಾಕ್ಯಗಳೊಂದಿಗೆ ಸೈಕಲ್ ಜಾಥಾ ನಡೆಸುವ ಮೂಲಕ ಸಂವಿಧಾನದ ತತ್ವಗಳನ್ನು ಅರಿತು ನಿತ್ಯ ಬದುಕಿನಲ್ಲಿ ಪಾಲಿಸಬೇಕೆಂಬ ಸಂದೇಶ ಸಾರಲಾಯಿತು.

ರಾಜ್ಯಾದ್ಯಂತ ಹಮ್ಮಿಕೊಂಡಿರುವ ಸಂವಿಧಾನ ಜಾಗೃತಿ ಜಾಥಾದ ಪ್ರಯುಕ್ತ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಮೈಸೂರಿನಲ್ಲಿ ಗುರುವಾರ ಹಮ್ಮಿಕೊಂಡಿದ್ದ ಸೈಕಲ್ ಜಾಥಾದಲ್ಲಿ ಪಾಲ್ಗೊಂಡಿದ್ದ ಶಾಲಾ–ಕಾಲೇಜು ವಿದ್ಯಾರ್ಥಿಗಳು ಹಾಗೂ ಇಲಾಖೆ ಸಿಬ್ಬಂದಿ ಸೈಕಲ್ ಸವಾರಿ ನಡೆಸಿ ಸಂವಿಧಾನದ ಮಹತ್ವ ಸಾರಿದರು. ರಾಷ್ಟ್ರಧ್ವಜ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಅವರ ಚಿತ್ರ ಹಾಗೂ ಅಶೋಕ ಚಕ್ರ ಒಳಗೊಂಡ ನೀಲಿ ಬಾವುಟ ಅಳವಡಿಸಿದ್ದ ಟ್ರಿಣ್ ಟ್ರಿಣ್ ಸೈಕಲ್‌ಗಳಲ್ಲಿ ಸಾಗಿ ಸಂವಿಧಾನದ ಬಗ್ಗೆ ಅರಿವು ಮೂಡಿಸಲಾಯಿತು.

ಮೈಸೂರು ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಸೈಕಲ್ ಜಾಥಾಗೆ ಚಾಲನೆ ನೀಡಲಾಯಿತು. ಇದೇ ವೇಳೆ ಸಂವಿಧಾನ ಪೀಠಿಕೆಯ ಪ್ರತಿಜ್ಞಾ ವಿಧಿ ಬೋಧಿಸಿದ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಬಿ.ರಂಗೇಗೌಡ ಮಾತನಾಡಿ, ಭಾರತದ ಸಂವಿಧಾನವು ಜಾರಿಗೆ ಬಂದು 75 ವರ್ಷಗಳಾಗಿರುವ ನೆನಪಿಗಾಗಿ ರಾಜ್ಯ ಸರ್ಕಾರದ ವತಿಯಿಂದ ರಾಜ್ಯ ಮಟ್ಟದಲ್ಲಿ ಸಂವಿಧಾನ ಜಾಗೃತಿ ಜಾಥಾ ನಡೆಸಲಾಗುತ್ತಿದೆ ಎಂದು ತಿಳಿಸಿದರು.



ಮೈಸೂರಿನಲ್ಲಿ ಗುರುವಾರ ಸೈಕಲ್ ಜಾಥಾದ ಮೂಲಕ ಸಂವಿಧಾನ ಜಾಗೃತಿ ಮೂಡಿಸಲಾಯಿತು.

ರಾಜ್ಯಾದ್ಯಂತ ಸಂವಿಧಾನ ಜಾಗೃತಿ ಜಾಥಾ ನಡೆಯುತ್ತಿದ್ದು, ಅದರಂತೆ ಜಿಲ್ಲೆಯಲ್ಲಿ ಎರಡು ಸ್ತಬ್ಧಚಿತ್ರ ಒಳಗೊಂಡಂತೆ ಜಾಥಾ ನಡೆಸಲಾಗುತ್ತಿದೆ. ಇಂದು ಟಿ.ನರಸೀಪುರ ಹಾಗೂ ಹೆಚ್.ಡಿ.ಕೋಟೆಯಲ್ಲಿ ಜಾಥಾ ನಡೆಯುತ್ತಿದೆ. ಇದಕ್ಕೆ ಪೂರಕವಾಗಿ ಇಂದಿಲ್ಲಿ ಸೈಕಲ್ ಜಾಥಾ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಸೈಕಲ್ ಜಾಥಾಗೆ ಚಾಲನೆ ನೀಡಿದ ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಶರೀಫ್ ಮಾತನಾಡಿ, ಸಂವಿಧಾನದ ಮಹತ್ವವನ್ನು ದೇಶದ ಪ್ರತಿಯೊಬ್ಬರೂ ತಿಳಿದುಕೊಂಡು ಅದರ ತತ್ವ–ಸಿದ್ಧಾಂತ ಅಳವಡಿಸಿಕೊಳ್ಳಬೇಕು. ಡಾ.ಬಿ.ಆರ್.ಅಂಬೇಡ್ಕರ್ ಅವರು ಶ್ರೇಷ್ಠ ಸಂವಿಧಾನ ರಚಿಸಿಕೊಟ್ಟಿದ್ದು, ಅವರನ್ನು ನಾವು ಸ್ಮರಿಸಬೇಕು. ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಹೇಗೆ ಆಡಳಿತ ನಡೆಸಬೇಕು ಎಂಬುದನ್ನು ಸಂವಿಧಾನದಲ್ಲಿ ತಿಳಿಸಲಾಗಿದೆ. ನಾವು ಇಂದು ನೆಮ್ಮದಿ ಜೀವನ ನಡೆಸುತ್ತಿರುವುದು ಸಂವಿಧಾನದಿಂದಾಗಿದೆ ಎಂದು ತಿಳಿಸಿದರು.

ಚಾಮರಾಜ ಒಡೆಯರ್ ವೃತ್ತ, ಕೆಆರ್ ವೃತ್ತ, ಸಯ್ಯಾಜಿರಾವ್ ರಸ್ತೆ, ಬಸವೇಶ್ವರ ವೃತ್ತ, ಚಾಮರಾಜ ಜೋಡಿ ರಸ್ತೆ, ಗನ್‌ಹೌಸ್ ವೃತ್ತ, ಬೆಂಗಳೂರು–ನೀಲಗಿರಿ ರಸ್ತೆ, ಹಾರ್ಡಿಂಗ್ ವೃತ್ತ (ಜಯಚಾಮರಾಜ ಒಡೆಯರ್ ವೃತ್ತ), ಆಲ್ಬರ್ಟ್ ವಿಕ್ಟರ್ ರಸ್ತೆಯಲ್ಲಿ ಸಂಚರಿಸಿದ ಸೈಕಲ್ ಜಾಥಾವು ಮರಳಿ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಎದುರು ಸಮಾವೇಶಗೊಂಡು ಅಂತ್ಯಗೊಂಡಿತು.

ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಸಿದ್ದಲಿಂಗು, ತನಿಖಾ ಸಹಾಯಾಧಿಕಾರಿ ಶ್ರೀನಿವಾಸ ಪ್ರಸಾದ್, ಪಾಲಿಕೆ ವಲಯ–6ರ ವಲಯಾಧಿಕಾರಿ ಪ್ರತಿಭಾ, ವಲಯ 1ರ ವಲಯಾಧಿಕಾರಿ ಮಂಜುನಾಥರೆಡ್ಡಿ, ವಾರ್ತಾ ಇಲಾಖೆ ಸಹಾಯಕ ನಿರ್ದೇಶಕ ಟಿ.ಕೆ.ಹರೀಶ್ ಸೇರಿದಂತೆ ಇನ್ನಿತರ ಅಧಿಕಾರಿ ಮತ್ತು ಸಿಬ್ಬಂದಿ ಹಾಜರಿದ್ದರು.

ಶುಕ್ರವಾರ
16-2-2024

ಬೆಳ್ಳಿ ಬೆಳಕು

ಸಿನಿಮಾ ಪುರವಣಿ

ಮೈಸೂರು ಮಿತ್ರ

● ಸತ್ಯಮೂರ್ತಿ ತೋಳಹುಣಸೆ



ಚಿತ್ರೀಕರಣದಲ್ಲಿ ಗೌರಿ ಗ್ಲಾಮರ್

'ಗೌರಿ' ಇಂದ್ರಜಿತ್ ಲಂಕೇಶ್ ಅವರ ನಿರ್ದೇಶನದ ಚಿತ್ರ. ಈ ಸಿನಿಮಾದ ಚಿತ್ರೀಕರಣ ಭರದಿಂದ ಸಾಗುತ್ತಿದೆ. ಹಿರಿಯ ಸಾಹಿತಿ ಪಿ.ಲಂಕೇಶ್ ಅವರ ಮೊಮ್ಮಗ, ಲಂಕೇಶ್ ಕುಟುಂಬದ ಮೂರನೇ ತಲೆಮಾರು ಸಮರ್ಜಿತ್ ಲಂಕೇಶ್ ಈ ಚಿತ್ರದ ಮೂಲಕ ನಾಯಕನಾಗಿ ಕನ್ನಡ ಚಿತ್ರರಂಗಕ್ಕೆ ಎಂಟ್ರಿ ಕೊಡುತ್ತಿದ್ದು, ನಟಿ ಸಾನ್ಯಾ ಅಯ್ಯರ್ ನಾಯಕಿಯಾಗಿ ನಟಿಸುತ್ತಿದ್ದಾರೆ. ಬಹುದೊಡ್ಡ ತಾರಾಗಣವಿರುವ 'ಗೌರಿ' ಚಿತ್ರದ ವಿಭಿನ್ನ, ವಿಶಿಷ್ಟ ಶೈಲಿಯ ಫೋಟೋ ಶೂಟ್ ಇತ್ತೀಚೆಗೆ ನಡೆಯಿತು. ಛಾಯಾ ಗ್ರಾಹಕ ಕೆನಡಾದ ರೋಹಿತ್ ಅವರ ಕ್ಯಾಮೆರಾ ಕೈಚಳಕ, ದೀಪಿಕಾ ಪಡುಕೋಣೆ ಸೇರಿದಂತೆ ಅನೇಕ ಸೆಲಬ್ರೆಟಿಗಳ ಮೇಕಪ್ ಆರ್ಟಿಸ್ಟ್ ಗೌರಿ ಕಪೂರ್ ಅವರ ವರ್ಣಾಲಂಕಾರದಲ್ಲಿ ನಾಯಕ, ನಾಯಕಿ ಇಬ್ಬರ ಫೋಟೋಶೂಟ್ ನಡೆಸಲಾಗಿದೆ. ಚಿತ್ರದ ಕುರಿತು ಇಂದ್ರಜಿತ್ ಲಂಕೇಶ್ ಮಾತನಾಡಿ, ಈಗಾಗಲೇ ಚಿಕ್ಕಮಗಳೂರಿನ ರಮಣೀಯ ಸ್ಥಳಗಳಲ್ಲಿ ಮೊದಲ ಹಂತದ ಚಿತ್ರೀಕರಣ ಮುಗಿಸಿದ್ದು, ಎರಡನೇ ಹಂತದ ಚಿತ್ರೀಕರಣ ಬೆಂಗಳೂರಿನಲ್ಲಿ ನಡೆಯುತ್ತಿದೆ. ಸಮರ್ಜಿತ್ ನಾನು ಅಂದುಕೊಂಡದ್ದಕ್ಕಿಂತ ಚೆನ್ನಾಗಿ ಅಭಿನಯಿಸುತ್ತಿದ್ದಾರೆ. ಮುಖ್ಯಮಂತ್ರಿ ಚಂದ್ರು, ಸಿಹಿಕಹಿ ಚಂದ್ರು ಕೂಡ ಚಿತ್ರದಲ್ಲಿ ನಟಿಸುತ್ತಿದ್ದಾರೆ. ಹಿರಿಯ ಛಾಯಾಗ್ರಾಹಕ ಕೆ.ಕೆ. ಅವರ ನೂರನೇ ಚಿತ್ರವಿದು ಎಂದರು.



ತೆರೆಮೇಲೆ ಆಧುನಿಕ 'ನಟ್ವರ್‌ಲಾಲ್' ಕಥೆ

ನಟ್ವರ್‌ಲಾಲ್ ಯಾರೆಂದು ಈಗಿನ ಕಾಲದ ಸಾಕಷ್ಟು ಜನರಿಗೆ ಗೊತ್ತಿರಲಿಕ್ಕಿಲ್ಲ, ಜಗತ್ತಿನಲ್ಲಿ ನಾವು ಎಂತೆಂಥಾ ಕಳ್ಳರನ್ನೋ ನೋಡಿದ್ದೇವೆ, ಆದರೆ 1930-40ರ ದಶಕದಲ್ಲಿ ಬದುಕಿದ್ದ ಬಿಹಾರ ಮೂಲದ ಮಿಥಿಲೇಶ್ ಶ್ರೀವಾತ್ಸವ್ ಅಲಿಯಾಸ್ ನಟ್ವರ್‌ಲಾಲ್ ಎಲ್ಲರನ್ನೂ ಮೀರಿಸಿದವ. ಆತ ಒಬ್ಬ ನಟೋರಿಯಸ್ ಕ್ರಿಮಿನಲ್, ಮಾಸ್ಟರ್‌ಮೈಂಡ್. ಫೋರ್ಜರಿ ದಾಖಲೆ ಸೃಷ್ಟಿಸಿ ತಾಜ್‌ಮಹಲ್, ರೆಡ್‌ಫೋರ್ಟ್, ಪಾರ್ಲಿಮಂಟ್‌ನಂಥ ಸರ್ಕಾರಿ ಆಸ್ತಿಗಳನ್ನೇ ಮಾರಹೊರಟಿದ್ದ. ಈತ 9 ಬಾರಿ ಪೊಲೀಸರಿಂದ ಅರೆಸ್ಟಾಗಿ ತಪ್ಪಿಸಿಕೊಂಡಿದ್ದ. ಈತನಿಂದ ವಂಚನೆಗೊಳಗಾದವರ ಪಟ್ಟಿಯಲ್ಲಿ ಟಾಟಾ ಬಿರ್ಲಾ, ಅಂಬಾನಿ ಕೂಡ ಇದ್ದಾರೆ. ಈಗ ಈತನ ಹೆಸರಲ್ಲೇ ನಿರ್ಮಾಣವಾಗಿರುವ ಸಿನಿಮಾವೊಂದು ತೆರೆಗೆ ಬರುತ್ತಿದೆ, ಈ ಸಿನಿಮಾದ ನಾಯಕ ಕೂಡ ನಟವರಲಾಲ್‌ನಷ್ಟೇ ಕ್ರಿಮಿನಲ್ ಮೈಂಡ್ ಹೊಂದಿದವ, ಆನ್‌ಲೈನ್‌ನಲ್ಲಿ ಜನರಿಗೆ ವಂಚನೆ ಮಾಡುತ್ತಿದ್ದ ಆತನ ಕಥೆಯಲ್ಲಿ ಯುವನಟ ತನುಷ್ ಶಿವಣ್ಣ ಪ್ರಧಾನ ಪಾತ್ರ ನಿರ್ವಹಿಸಿದ್ದಾರೆ, ಮಿಸ್ಟರ್ ನಟ್ವರ್‌ಲಾಲ್ ಹೆಸರಿನ ಈ ಚಿತ್ರದ ಟ್ರೈಲರ್ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು, ಕುಣಿಗಲ್ ಶಾಸಕ ರಂಗನಾಥ್ ಮುಖ್ಯ ಅತಿಥಿಯಾಗಿ ಟ್ರೈಲರ್ ಲಾಂಚ್ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ನಿರ್ದೇಶಕ ಲವ, ನಟ್ವರ್‌ಲಾಲ್ ಕ್ರೈಂ, ಥ್ರಿಲ್ಲರ್ ಹಾಗೂ ಆಕ್ಷನ್ ಜಾನರ್ ಚಿತ್ರವಾಗಿದ್ದು, ನಮ್ಮ ಜನರನ್ನು ಹ್ಯಾಕರ್ಸ್ ಹೇಗೆಲ್ಲಾ ವಂಚಿಸುತ್ತಾರೆಂದು ಹೇಳಿದ್ದೇವೆ. ನಮ್ಮ ಸುತ್ತಮುತ್ತ ನಡೆಯುವ ವಂಚನೆ ಪ್ರಕರಣಗಳನ್ನೇ ಕಥೆಯಲ್ಲಿ ಹೇಳಿದ್ದೇನೆ. ಉದಾಹರಣೆಗೆ ಮೆಡಿಕಲ್ ಮಾಫಿಯಾ, ಪೊಲಿಟಿಕಲ್ ಮಾಫಿಯಾ ಹೀಗೆ ಎಲ್ಲಾ ಕಂಟೆಂಟ್ ಚಿತ್ರದಲ್ಲಿದೆ. ಬೆಂಗಳೂರು, ಮೈಸೂರು ಸಕಲೇಶಪುರ ಹಾಗೂ ಮಂಗಳೂರು, ಸುತ್ತಮುತ್ತ 95ಕ್ಕೂ ಹೆಚ್ಚು ದಿನ ಚಿತ್ರೀಕರಣ ಮಾಡಿದ್ದೇವೆ, ಚಿತ್ರವೀಗ ರಿಲೀಸ್ ಹಂತದಲ್ಲಿದೆ ಎಂದು ಹೇಳಿದರು. ನಾಯಕ ಹಾಗೂ ನಿರ್ಮಾಪಕ ತನುಷ್ ಶಿವಣ್ಣ ಮಾತನಾಡಿ, ನಟ್ವರ್‌ಲಾಲ್ ಗುಣಗಳನ್ನೇ ಮೈಗೂಡಿಸಿಕೊಂಡ ನಾಯಕನ ಕಥೆಯಿದು. ಇದರ ಜೊತೆ ಅನೇಕ ಕುತೂಹಲಕಾರಿ ಅಂಶಗಳು ಚಿತ್ರದ ಕಥೆಯಲ್ಲಿದೆ ಎಂದು ಲವ ಹೇಳಿದಾಗ, ನನಗೆ ತುಂಬಾ ಇಂಪ್ರೆಸ್ ಆಯ್ತು ಧರ್ಮವಿಶ್ ಅವರ ರೀರೆಕಾರ್ಡಿಂಗ್ ಚಿತ್ರದ ಪ್ಲಸ್ ಪಾಯಿಂಟ್. ಜೊತೆಗೆ ವಿಲಿಯಂ ಡೇವಿಡ್ ಅವರ ಕ್ಯಾಮೆರಾ ವರ್ಕ್ ಚಿತ್ರಕ್ಕೆ ಹೊಸ ರೂಪವನ್ನೇ ನೀಡಿದೆ ಎಂದು ಹೇಳಿದರು.



ಅಂಗಡಿ ಮುತ್ತಣ್ಣನಾಗಿ ನಾಗಾಭರಣ

ಬಹಳ ದಿನಗಳ ನಂತರ ಹಿರಿಯ ನಿರ್ದೇಶಕ ಟಿ.ಎಸ್. ನಾಗಾಭರಣ ಬಣ್ಣ ಹಚ್ಚುತ್ತಿದ್ದಾರೆ. ಪೆಟ್ಟಿಗೆ ಅಂಗಡಿ ಮಾಲೀಕ ಮುತ್ತಣ್ಣನಾಗಿ ಕಾಣಿಸಿಕೊಳ್ಳುತ್ತಿರುವ ಭರಣರ ಮಗಳು ಮೈನಾ ಆಗಿ ವಿಜಯಲಕ್ಷ್ಮಿ ನಟಿಸುತ್ತಿದ್ದಾರೆ. ಚಿಕ್ಕವಯಸಿನಲ್ಲೇ ಅಕ್ಕನ ಮದುವೆ ಮಾಡಿಸುವ ದೊಡ್ಡ ಜವಾಬ್ದಾರಿ ಹೊತ್ತ ಮೈನಾಳ ಹೋರಾಟದ ಕಥೆಗೆ ನಿರ್ದೇಶಕ ಸಂತೋಷ್‌ಗೌಡ ಆಕ್ಷನ್ ಕಟ್ ಹೇಳುತ್ತಿದ್ದಾರೆ. ಫೆ.19ರಿಂದ ಮೈನಾಳ ಜೀವನಗಾಥೆ ಉದಯ ವಾಹಿನಿಯಲ್ಲಿ ಮೂಡಿ ಬರಲಿದೆ. ಅಂಗಡಿ ಮುತ್ತಣ್ಣನ ಇಬ್ಬರು ಹೆಣ್ಣುಮಕ್ಕಳಲ್ಲಿ ಮೈನಾ ಕಿರಿಮಗಳು. ಅಕ್ಕ ರಾಧಾಗೆ ಮದುವೆ ವಯಸ್ಸು ಮೀರಿದರೂ ಸೂಕ್ತ ಸಂಬಂಧ ಕೂಡಿಬಂದಿರಲ್ಲ. ಒಂದಷ್ಟು ಸಂಬಂಧಗಳು ಮುರಿಯಲು ಮೈನಾಳೇ ಕಾರಣಳಾಗುತ್ತಾಳೆ. ಒಂದು ಹಂತದಲ್ಲಿ ಮೈನಾ ಅಕ್ಕನ ಮದುವೆಯ ಜವಾಬ್ದಾರಿ ಹೊರಬೇಕಾಗುತ್ತದೆ. ನಂತರ ದುಡಿಯಲು ಪಟ್ಟಣಕ್ಕೆ ಬಂದ ಮೈನಾಳ ಜೀವನವು ಹಲವು ತಿರುವುಗಳನ್ನು ಪಡೆದುಕೊಳ್ಳುತ್ತದೆ. ಹೀಗೆ ಮಹಿಳೆಯರ ಆತ್ಮಬಲದ ಪ್ರತೀಕವಾಗಿ ಮೂಡಿಬರಲಿರುವ ಮೈನಾ, ಆನಂದ್ ಆಡಿಯೋ ಕಂಪನಿಯ ಕೋಮಲ್ ಎಂಟರ್‌ಪ್ರೈಸಸ್ ಮೂಲಕ ನಿರ್ಮಾಣವಾಗುತ್ತಿದೆ. ಜಗದೀಶ್ ವಾಲಿ ಹಾಗೂ ದಯಾಕರ್ ಅವರ ಛಾಯಾಗ್ರಹಣ, ಮಣಿಕಾಂತಕದ್ರಿ ಅವರ ಸಂಗೀತ, ಕೆ.ಕಲ್ಯಾಣ್ ಅವರ ಸಾಹಿತ್ಯ ಇದಕ್ಕಿದ್ದು, ಅಪೂರ್ವ, ಅಂಜಲಿ, ಮಾನಸಿ ಜೋಶಿ, ಸಚಿನ್ ಸಿದ್ದಾರ್ಥ, ಪ್ರಭಂಜನ, ಸಾಗರ್, ಹರ್ಷಾರ್ಜುನ್, ಯಶಸ್ವಿನಿ, ಆಶಾ, ಅನುಷಾ ಅಲ್ಲದೆ ಹಿರಿಯನಟಿ ಭವ್ಯ ಅವರು ವಿಶೇಷ ಪಾತ್ರವೊಂದರಲ್ಲಿ ಕಾಣಿಸಿಕೊಂಡಿದ್ದಾರೆ.



ಕಪ್ಪು ಬಿಳುಪಿನ ನಡುವೆ ಹಾರರ್ ಆಟ



'ಕಪ್ಪು ಬಿಳುಪಿನ ನಡುವೆ' ಇದು ಚಿತ್ರದ ಟೈಟಲ್; ಹಾಗಂತ ಬ್ಲಾಕ್ ಅಂಡ್ ವೈಟ್ ಸಿನಿಮಾ ಅಲ್ಲ; ಅದಕ್ಕೆ ಟಿಪ್ಪಣಿ ಎನ್ನುವಂತೆ ಟೈಟಲ್‌ಗೂ, ಕಥೆಗೂ ನೇರ ಸಂಬಂಧವಿದೆ ಎಂದು ಹೇಳುತ್ತಾರೆ ಚಿತ್ರದ ನಿರ್ಮಾಪಕ ಧರ್ಮೇಂದ್ರ. ಇವರು ವೃತ್ತಿಯಲ್ಲಿ ಆಯುರ್ವೇದ ವೈದ್ಯರು.

ಚಿತ್ರೀಕರಣ ನಡೆದಿದ್ದು, ಕನಕಪುರಕ್ಕೆ ಮುವತ್ತು ಕಿ.ಮಿ. ದೂರದ ಕಾಡಿನಲ್ಲಿ. ಚಿತ್ರಕ್ಕೆ ಕಪ್ಪು ಬಿಳುಪಿನ ನಡುವೆ -ಟೈಟಲ್ ಯಾಕೆ ಬಂತು? ಎಂಬುದಕ್ಕೆ ನಿರ್ದೇಶಕ ವಸಂತ್ ವಿಷ್ಣು ಹೀಗೆ ವಿವರಣೆ ಕೊಡು ತ್ತಾರೆ. ಕಪ್ಪು ಬಿಳುಪನ್ನು ಕತ್ತಲು ಬೆಳಕಿಗೆ ಹೋಲಿಸಬಹುದು, ಪಾಸಿಟಿವ್ ಇಲ್ಲವೇ ನೆಗೆಟಿವ್ ಎನರ್ಜಿ ಅಂತಲೂ ಭಾವಿಸಬಹುದು. ಇಲ್ಲಿ ಕಥೆ ಯೂಟ್ಯೂಬರ್‌ಗಳ ಸುತ್ತ ಇದೆ. ಒಟ್ಟಿನಲ್ಲಿ ಹಾರರ್ ಚಿತ್ರ ಎನ್ನಲೂಬಹುದು. ಹಾಗಂತ ಇಲ್ಲಿ ದೆವ್ವಗಳ ಕಾಟವಿಲ್ಲ. ಹಾರರ್ ಜಾನರ್‌ನಲ್ಲಿ ಹೊಸ ರೀತಿಯಲ್ಲಿ ಕಥೆ ಹೇಳುವ ಪ್ರಯತ್ನ. ಪ್ರತಿ ಸನ್ನಿವೇಶದಲ್ಲೂ ಕುತೂಹಲ ಇದೆ. ಇದು ಕನ್ನಡ ಮಾತ್ರವಲ್ಲ, ತಮಿಳಿನಲ್ಲೂ ತಯಾರಾಗುತ್ತಿದೆ.

ನಿರ್ದೇಶಕ ವಸಂತ್ ವಿಷ್ಣುಗೆ ಚಿತ್ರರಂಗದ ನಂಟು ಮತ್ತು ಅನುಭವ ಬಹಳ ಕಾಲದಿಂದ ಇದೆ. ಆತ ಈಗಾಗಲೇ ಐದಾರು ಚಿತ್ರಗಳಲ್ಲಿ ಮುಖ್ಯ ಪಾತ್ರದಲ್ಲಿ ಅಭಿನಯಿಸಿದ್ದಾರೆ. ನಿರ್ಮಾಣ ಹಂತದಲ್ಲಿ ತೊಡಗಿಸಿಕೊಂಡ ಅನುಭವದ ನಂಟೂ ಇಟ್ಟುಕೊಂಡಿದ್ದಾರೆ. ಚಿತ್ರದಲ್ಲಿ ಆತ ನಾಯಕ ಕೂಡಾ. ಹೀಗಾಗಿ ವಸಂತ್ ಕಥೆಯನ್ನು ಎಳೆ ಎಳೆಯಾಗಿ ಬಿಡಿಸಿಟ್ಟರು. ನಿರ್ದೇಶಕರು ಹೇಳಿದ ಕಥೆ ತುಂಬಾನೆ ಇಷ್ಟವಾಯಿತು. ಇದೇ ವೇಳೆ ಒಂದು ಒಳ್ಳೆಯ ಚಿತ್ರ ನಿರ್ಮಿಸುವ ಭಾವನೆಯೂ ಬಂತು ಎಂದು ಹೇಳಿದ ನಿರ್ಮಾಪಕ ಧರ್ಮೇಂದ್ರ, ಈಗಾಗಲೇ ಚಿತ್ರದ ಚಿತ್ರೀಕರಣ ಮುಗಿದಿದೆ. ಬಿಡುಗಡೆಯ ಹಂತದಲ್ಲಿದ್ದೇವೆ ಎಂದರು. ಹಿರಿಯ ನಟ ಲೋಹಿತಾಶ್ವ, ಬಿರಾದಾರ್, ಹಾಸ್ಯ ನಟ ಹರೀಷ್, ನವೀನ್, ಮಾಹೀನ್, ತೇಜಸ್ವಿನಿ, ನಾಯಕಿ ವಿದ್ಯಾಶ್ರೀ ತಾರಾಗಣದಲ್ಲಿದ್ದಾರೆ. ಸಂಗೀತ ನಿರ್ದೇಶಕ ರಿಷಾಲ್ ಸಾಯಿ. ಚಿತ್ರಕ್ಕೆ ನಾಗೇಂದ್ರ ಪ್ರಸಾದ್ ಮೂರು ಹಾಡುಗಳನ್ನು ಬರೆದಿದ್ದಾರೆ.

ಸಿನಿಪದಬಂಧ-513

1				2	■	3	■	■	■	4
	■	■	■		■		■	5	■	
	■	6					■		■	
	■	■	■		■	7				
	■	8	■		■		■		■	■
9				■	■	■	10			11
■	■		■	12	■	13	■		■	
14					■		■	■	■	
	■		■	15					■	
	■		■		■		■	■	■	
	■	■	■		■	16				

ಹೆಸರು ______

ವಿಳಾಸ ______

______

ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1. ಪುಟ್ಟಣ್ಣನ ನಿರ್ದೇಶನದಲ್ಲಿ ಹಂಗು, ಅತಿಥಿ, ಮುನಿತಾಯಿ ಮಿಲನಗೊಂಡಿವೆ 5
6. ದೇವರಂತೆ ಬಂದು ಆಪತ್ತಾ ಕಳೆದು ಎಲ್ಲರನ್ನು ಕಾಪಾಡಿದ ವಿಷ್ಣುವರ್ಧನ್ 5
7. ಪುನೀತ್ ರಾಜ್‌ಕುಮಾರ್-ಗೌರಿ ಅಭಿನಯದ ಚಿತ್ರ 5
9. ತಾಯಿಯ ಹೊಣೆ ಚಿತ್ರದ ನಾಯಕಿ 4
10. ಸೇವೆಗೈಯಲು ಸಮರ್ಪಿತ ಯುವತಿಗೆ ಮಾಸ್ಟರ್ ಹಿರಣ್ಣಯ್ಯ ಕಾರಣೀಭೂತರು 4
14. ಪ್ರಭಾಕರ್ ಅಲ್ಲೋಲ-ಕಲ್ಲೋಲ ಎಬ್ಬಿಸಿದ್ದಾನೆ 5
15. ಇಟಗಿ ಭೀಮಾಂಬಿಕೆ ದೇವಿ ಕತೆಯಲ್ಲಿ ಶಿಲ್ಪಾ ಅಭಿನಯವಿದೆ 5
16. ಬಾಲರಾಜುವಿನ ಶಿವನ ಭಯಂಕರ ನೃತ್ಯ 5

ವಿಜೇತರು: ಎಸ್.ಮೀನಾಕ್ಷಿ, ಎಲ್‌ಐಸಿ ಏಜೆಂಟ್, ಕೆಆರ್‌ಎಸ್ ರೋಡ್, ಮೈಸೂರು.



ಉಮ್ಮತ್ತೂರು ಇಂದುಶೇಖರ್
ಮೊ.9880820462

ಸಿನಿ ಪದಬಂಧ 512ರ ಉತ್ತರ

ಮು	ತ್ತಿ	ನ	ಹಾ	ರ	■	ವಿ	■	■	■	ಪ್ರೇ
ಗಿ	■	■	■	ತಿ	■	ಜ	■	ಇಂ	■	ಮ
ಲ	■	ವಿ	ಷ್ಣು	ವಿ	ಜ	ಯ	■	ದು	■	ಲೋ
ಮ	■	■	■	ಜ್ಞಾ	■	ಖ	ಳ	ನಾ	ಯ	ಕ
ಲ್ಲಿ	■	ಅ	■	ನ	■	ಡ್ಗ	■	ಗ	■	■
ಗೆ	ಜ್ಜೆ	ನಾ	ದ	■	■	■	ಕಿ	ರಾ	ತ	ಕ
■	■	ಥ	■	ರೂ	■	ಚಿ	■	ಜ್	■	ಪೂರ್
ಸಾ	ಗ	ರ	ದೀ	ಪ	■	ನ್ನ	■	■	■	ರ
ಹು	■	ಕ್ಷ	■	ಗಂ	ಧ	ದ	ಗು	ಡಿ	■	ದ
ಕಾ	■	ಕ	■	ಗೂ	■	ಗೊಂ	■	■	■	ಗೊಂ
ರ	■	■	■	ಲಿ	■	ಬೆ	ದ	ರು	ಬೊಂ	ಬೆ

ಮೇಲಿನಿಂದ ಕೆಳಕ್ಕೆ

1. ಶ್ರೀನಾಥ್ ಕಂಡ ಸ್ವಪ್ನ ನಿಜವಾಗಿದೆ 6
2. ಸುನಾದ್ ರಾಜ್-ಸುಚಿತ್ರಾ ಅಭಿನಯದ ಗೆಳೆತನ ಸಿಹಿಯಾಗಿದೆ 5
3. ಶಂಕರ್ ನಾಗ್ ಕಂಡ ಸ್ವಪ್ನಕ್ಕೆ ವಿಜಯ್ ನಿರ್ದೇಶಕ 5
4. ಕಾಶೀನಾಥನಿಂದ ಅಭಿನಯಳಿಗೆ ಆದ ಪ್ರಾಯೋಗಿಕ ಜ್ಞಾನ 4
5. ರಾಜ್ ಕುಮಾರ್ ಚಿತ್ರದಲ್ಲಿ ಎಲ್ಲೆಂದರಲ್ಲಿ ಅಡ್ಡಾಡಿದವನಿಗೆ ಈ ಹೆಸರಿದೆ 6
8. ದುನಿಯಾದ 'ವಿಜಿ'ಯನ್ನು ನಾಯಕಿ ನಾ ನಿನ್ನಾ ಪ್ರೀತಿಸುವೆ ಅಂದಾಗ ಇಲ್ಲಿ ತಲೆಕೆಳಗು 6
11. ತ್ಯಾಗರಾಜ್ ಕೈಲಾಸವಾಸಿ ಹೆಸರಿನಲ್ಲಿ ಸ್ಫೋಟಗೊಂಡಿದ್ದಾನೆ 6
12. ಕಾಮನ ಬಿಲ್ಲು ಅರ್ಥ ಹೋಲುವ ಶಿವಣ್ಣನ ಚಿತ್ರ 5
13. "ದುಂಡು ಮಲ್ಲಿಗೆ ಮಾತಾಡೆಯ ಕೆಂಡ ಸಂಪಿಗೆ....", ಗೀತೆಯ ಚಿತ್ರ 5
14. ರಾಮಕೃಷ್ಣ ಹೆಗ್ಗಡೆಯ ಜನಬಲ 4

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ವಸತಿ, ಭೂ ಸಮಸ್ಯೆ ಬಗೆಹರಿಸದ ಅಧಿಕಾರಿಗಳ ನಿರ್ಲಕ್ಷ್ಯ ಖಂಡಿಸಿ

ಕೋಟೆಯಲ್ಲಿ ದಸಂಸದಿಂದ ಅನಿರ್ದಿಷ್ಟಾವಧಿ ಧರಣಿ ಆರಂಭ



ಅಧಿಕಾರಿಗಳ ನಿರ್ಲಕ್ಷ್ಯ ಖಂಡಿಸಿ ದಸಂಸ ಕಾರ್ಯಕರ್ತರು ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸಿದರು.

ಹೆಚ್.ಡಿ.ಕೋಟೆ, ಫೆ.15– ಕೋಟೆ ಹಾಗೂ ಸರಗೂರು ತಾಲೂಕಿನಲ್ಲಿರುವ ವಸತಿ ಮತ್ತು ಭೂ ಸಮಸ್ಯೆಗಳನ್ನು ಬಗೆಹರಿಸದ ಅಧಿಕಾರಿಗಳ ನಿರ್ಲಕ್ಷ್ಯ ಖಂಡಿಸಿ ಪಟ್ಟಣದಲ್ಲಿ ಗುರುವಾರ ದಲಿತ ಸಂಘರ್ಷ ಸಮಿತಿ ಅನಿರ್ದಿಷ್ಟಾವಧಿ ಧರಣಿ ಆರಂಭಿಸಿದೆ.

ಪಟ್ಟಣದ ತಾಲೂಕು ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಅನಿರ್ದಿಷ್ಟಾವಧಿ ಪ್ರತಿಭಟನೆ ಆರಂಭಿಸಿ ಅಧಿಕಾರಿಗಳ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ದಲಿತ ಸಂಘರ್ಷ ಸಮಿತಿ ರಾಜ್ಯ ಸಂಘಟನಾ ಸಂಯೋಜಕ ದೇವಗಳ್ಳಿ ಸೋಮಶೇಖರ್ ಮಾತನಾಡಿ, ಹೆಚ್.ಡಿ.ಕೋಟೆ ಹಾಗೂ ಸರಗೂರು ತಾಲೂಕಿನ ಭೂ ಸಮಸ್ಯೆ ಹಾಗೂ ವಸತಿ ರಹಿತರಿಗೆ ಮನೆ ಮಂಜೂರು ಮಾಡಿಲ್ಲ. ಇನ್ನು ಕೆರೆಗಳ ಒತ್ತುವರಿ ತೆರವುಗೊಳಿಸದೇ ಮೀನಾಮೇಷ ಎಣಿಸುತ್ತಿರುವ ಸರಗೂರು ತಾಪಂ ಇಓ ಹಾಗೂ ಕೋಟೆ ತಹಸೀಲ್ದಾರ್, ಇಓ ವಿರುದ್ಧ ಕ್ರಮ ಕೈಗೊಳ್ಳಬೇಕು. ಅಲ್ಲದೇ ಸಮಸ್ಯೆಗಳ ಬಗೆಹರಿಸದಿದ್ದರೆ ನಮ್ಮ ಚಳವಳಿ ಮುಂದುವರಿಯುತ್ತದೆ ಎಂದು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಸಂಘಟನಾ ಸಂಚಾಲಕ ಗೋವಿಂದ, ಕುಮಾರ್, ಜೈಕುಮಾರ್, ರಾಜಮ್ಮ, ಚೆಲುವರಾಜು, ಜಿಲ್ಲಾ ಸಂಯೋಜಕ ಕಾರ್ಯ ಬಸವಣ್ಣ, ಮಂಜು, ತಾಲೂಕು ಸಂಯೋಜಕ ಕುಮಾರ್, ನಾಗರಾಜು, ಜಯಕುಮಾರ್, ಚೆಲುವರಾಜು, ಮಹೇಶ್, ಕುಮಾರ್ ಇನ್ನಿತರರಿದ್ದರು.

–: ಪ್ರತಿಭಟನಾಕಾರರ ಪ್ರಮುಖ ಬೇಡಿಕೆಗಳು :–

- ಹೆಚ್.ಡಿ.ಕೋಟೆ ತಾಲೂಕು ಹೊಮ್ಮರಗಳ್ಳಿ ಗ್ರಾಮದಲ್ಲಿ ಸುಮಾರು 30 ದಲಿತ ಕುಟುಂಬಗಳು ಮಳೆ ಹಾನಿಯಿಂದ ಮನೆ ಕಳೆದುಕೊಂಡಿದ್ದು, ಕೂಡಲೇ ಮನೆ ಮಂಜೂರು ಮಾಡಿಕೊಡಬೇಕು.
- ಸರಗೂರು ತಾಲೂಕು ಕಂದಲಿಕೆ ಹೋಬಳಿ ದೇವಲಾಪುರ ಗ್ರಾಮದ ಸರ್ವೇ ನಂ.14ರಲ್ಲಿ 3 ಎಕರೆ 17 ಗುಂಟೆ ಸರ್ಕಾರಿ ಇದ್ದು ಮಹದೇವಪ್ಪ ಬಿನ್ ಕಾಳಪ್ಪ ಎಂಬುವರು ಕೆರೆ ಒತ್ತುವರಿ ಮಾಡಿಕೊಂಡಿದ್ದಾರೆ. ಕೂಡಲೇ ಕೆರೆ ಒತ್ತುವರಿ ತೆರವುಗೊಳಿಸಬೇಕು.
- ಸರಗೂರು ತಾಲೂಕು ದೇವಲಾಪುರ ಗ್ರಾಮದ ಸರ್ವೇ ನಂ.42ರಲ್ಲಿ 560 ಎಕರೆ ಸರ್ಕಾರಿ ಬಂಜರು ಭೂಮಿ ಇದ್ದು ಅದರಲ್ಲಿ 3 ಎಕರೆ ಜಮೀನನ್ನು ಸುಮಾರು 40 ಮತ್ತು 50 ವರ್ಷದಿಂದ ಉಳುಮೆ ಮಾಡಿಕೊಂಡು ಅಕ್ರಮ ಸಕ್ರಮ ಅಡಿ ಅರ್ಜಿ ಹಾಕಿಕೊಂಡಿರುವ ವೆಂಕಟರಮಣಚಾರಿ ಅವರನ್ನು ಹೆದರಿಸಿ, ಬೆದರಿಸಿ ಪಕ್ಕದ ಜಮೀನಿನವರು ಒಕ್ಕಲೆಬ್ಬಿಸಲು ಪ್ರಯತ್ನಿಸುತ್ತಿದ್ದು, ಇವರ ಮೇಲೆ ಕ್ರಮ ಜರುಗಿಸಿ ವೆಂಕಟರಮಣಚಾರಿ ಮತ್ತು ದೊಡ್ಡಮ್ಮ ಎಂಬುವರಿಗೆ ಭೂ ಮಂಜೂರಾತಿ ನೀಡಬೇಕು.
- ಹೆಚ್.ಡಿ.ಕೋಟೆ ತಾಲೂಕು ಹೊಮ್ಮರಗಳ್ಳಿ ಗ್ರಾಮದ ದಲಿತರು ವಾಸಿಸುತ್ತಿರುವ ನೂರಾರು ಕುಟುಂಬಗಳಿಗೆ ಗ್ರಾಮ ಠಾಣಾ ಜಾಗಕ್ಕೆ ಸರ್ವೇ ಮಾಡಿ ಅಸೆಸ್ಮೆಂಟ್ ಮತ್ತು ಇ–ಸ್ವತ್ತು ದಾಖಲೆಗಳನ್ನು ಮಾಡಿಕೊಡಬೇಕು.
- ಹೊಮ್ಮರಗಳ್ಳಿ ಹೆಚ್.ಡಿ.ಕೋಟೆ ಮುಖ್ಯರಸ್ತೆಯಲ್ಲಿರುವ ಚಾಮುಂಡೇಶ್ವರಿ ವೈನ್ ಶಾಪ್ ಗ್ರಾಮಕ್ಕೆ ಅಂಟಿಕೊಂಡಿದ್ದು, ಕುಡುಕರ ಹಾವಳಿಯಿಂದ ಶಾಲಾ–ಕಾಲೇಜು ಮಕ್ಕಳಿಗೆ ಓಡಾಡಲು ತೊಂದರೆಯಾಗುತ್ತಿದೆ ಹೀಗಾಗಿ ವೈನ್‌ಶಾಪ್ ತೆರವುಗೊಳಿಸಬೇಕು.
- ಕೋಳಗಾಲ ಗ್ರಾಮದ ಪರಿಶಿಷ್ಟ ಜಾತಿ ಸಮುದಾಯದ ಆಶ್ರಮ ಬಡಾವಣೆ ನಿವೇಶನ ಮಂಜೂರಾಗಿರುತ್ತದೆ. ಅಲ್ಲಿ ಸುಮಾರು 35 ದಲಿತ ಕುಟುಂಬಗಳು ವಾಸಿಸುತ್ತಿದ್ದು, ಈ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯನ್ನು ಕೆಲವರು ಒತ್ತುವರಿ ಮಾಡಿಕೊಂಡಿದಾರೆ. ಕೂಡಲೇ ಒತ್ತುವರಿ ತೆರವುಗೊಳಿಸಬೇಕು ಎಂಬುದು ಸೇರಿದಂತೆ ಹಲವು ಸಮಸ್ಯೆಗಳ ಬಗ್ಗೆ ಅರ್ಜಿ ಸಲ್ಲಿಸಿದರೂ, ಯಾವುದೇ ಪ್ರಯೋಜನವಾಗಿಲ್ಲ. ಹೀಗಾಗಿ ಈ ಎಲ್ಲಾ ಸಮಸ್ಯೆಗಳನ್ನು ಸಂಬಂಧಪಟ್ಟ ಜಿಲ್ಲಾ ಮಟ್ಟದ ಅಧಿಕಾರಿಗಳು ಬಗೆಹರಿಸಿ, ನಿರ್ಲಕ್ಷ್ಯ ವಹಿಸಿದ ತಾಲೂಕು ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	**(ದೂ: 2521923)**
5ಡಿ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಕಾಟೇರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
5ಡಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಒಂದು ಸರಳ ಪ್ರೇಮಕಥೆ (ಕ)	4 ಪ್ರದರ್ಶನಗಳು
ರಾಜಕಮಲ್	
ಸೈರನ್ (ತ)	4 ಪ್ರದರ್ಶನಗಳು
ಸಂಗಂ	
ಉಪಾಧ್ಯಕ್ಷ (ಕ)	4 ಪ್ರದರ್ಶನಗಳು
ಲಿಡೋ	
5ಡಿ (ಕ)	2 ಪ್ರದರ್ಶನಗಳು
ಕೆಟಿಎಂ (ಕ)	2 ಪ್ರದರ್ಶನಗಳು
ತಿಬ್ಬಾದೇವಿ	
5ಡಿ (ಕ)	4 ಪ್ರದರ್ಶನಗಳು
ಪ್ರಭಾ	
ಇ–ಮೇಲ್ (ಕ)	2 ಪ್ರದರ್ಶನಗಳು
ಲೇಡಿಸ್ ಬಾರ್ (ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಶಾಖಾಹಾರಿ (ಕ): ಬೆ.10.15ಕ್ಕೆ, ಕೆಟಿಎಂ (ಕ): ಮ.1.10ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಸಂ.4.15ಕ್ಕೆ, ಅಬ್ಬಬ್ಬ (ಕ): ರಾ.7.05ಕ್ಕೆ, ಭ್ರಮಯುಗಂ (ಮ): ರಾ.10ಕ್ಕೆ.
ಸ್ಕ್ರೀನ್ 2	ತುಂಡು (ಮ): ಬೆ.10.50ಕ್ಕೆ, ಬಾಬ್ ಮಾರ್ಲೆ: ಒನ್ ಲವ್ (ಇಂ): ಮ.1.40ಕ್ಕೆ, ರಾ.10.10ಕ್ಕೆ, ಕುಚ್ ಖಟ್ಟಾ ಹೋ ಜಾಯ್ (ಹಿಂ): ಸಂ.4.20ಕ್ಕೆ, ಪ್ರೇಮಲು (ಮ): ರಾ.7ಕ್ಕೆ.
ಸ್ಕ್ರೀನ್ 3	ಮಂಡ್ಯ ಹೈದ (ಕ): ಬೆ.10.15ಕ್ಕೆ, ಸೈರನ್ (ತ): ಮ.1.15ಕ್ಕೆ, ಮೇಡಮ್ ವೆಬ್ (ಇಂ): ಸಂ.4.35ಕ್ಕೆ, ರಾ.10ಕ್ಕೆ, ಭ್ರಮಯುಗಂ (ಮ): ರಾ.7.10ಕ್ಕೆ.
ಸ್ಕ್ರೀನ್ 4	ಸಾರಾಂಶ (ಕ): ರಾ.10.20ಕ್ಕೆ, ಉಪಾಧ್ಯಕ್ಷ (ಕ): ಮ.1.05ಕ್ಕೆ, ಫೈಟರ್ (ಹಿಂ): ಸಂ.4.10ಕ್ಕೆ, ಒಂದು ಸರಳ ಪ್ರೇಮಕಥೆ (ಕ): ರಾ.7.20ಕ್ಕೆ, ಊರು ಪೇರು ಭೈರವಕೋಣ (ತೆ): ರಾ.10.15ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಉಪಾಧ್ಯಕ್ಷ (ಕ): ಬೆ.10.05ಕ್ಕೆ, ಮೇಡಮ್ ವೆಬ್ (ಇಂ): ಮ.1.20ಕ್ಕೆ, ರಾ.7.05ಕ್ಕೆ, ರಾ.9.40ಕ್ಕೆ, ಊರು ಪೇರು ಭೈರವಕೋಣ (ತೆ): ಮ.3.55ಕ್ಕೆ
ಸ್ಕ್ರೀನ್ 2	ಮೇಡಮ್ ವೆಬ್ (ಇಂ): ಬೆ.9.55ಕ್ಕೆ, ಸೈರನ್ 108 (ತ): ಸಂ.4ಕ್ಕೆ, ರಾ.10.30ಕ್ಕೆ, ಉಪಾಧ್ಯಕ್ಷ (ಕ): ರಾ.7.15ಕ್ಕೆ.
ಸ್ಕ್ರೀನ್ 3	ಸೈರನ್ 108 (ತ): ಮ.12.15ಕ್ಕೆ, ಬಾಬ್ ಮಾರ್ಲೆ: ಒನ್ ಲವ್ (ಇಂ): ಸಂ.4.10ಕ್ಕೆ, ಪ್ರೇಮಲು (ಮ): ಸಂ.6.45ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ರಾ.10ಕ್ಕೆ.
ಸ್ಕ್ರೀನ್ 4	ಒಂದು ಸರಳ ಪ್ರೇಮಕಥೆ (ಕ): ಬೆ.10.05ಕ್ಕೆ, ಸಂ.4.20ಕ್ಕೆ, ಅಬ್ಬಬ್ಬ (ಕ): ಮ.1.15ಕ್ಕೆ, ತುಂಡು (ಮ): ರಾ.7.30ಕ್ಕೆ, ಭ್ರಮಯುಗಂ (ಮ): ರಾ.10.20ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಫೈಟರ್ (2ಡಿ)(ಹಿಂ): ಸಂ.6.35ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಬೆ.9.30ಕ್ಕೆ, ಮ.3.55ಕ್ಕೆ, ರಾ.7.10ಕ್ಕೆ, ರಾ.10.20ಕ್ಕೆ, ಉಪಾಧ್ಯಕ್ಷ (ಕ): ಮ.3.25ಕ್ಕೆ, ಅನ್ವೇಶಿಪಿನ್ ಕಂಡೆತುಂ (ಮ): ಸಂ.4.05ಕ್ಕೆ, ಸಾರಾಂಶ (ಕ): ಮ.1.15ಕ್ಕೆ, ಒಂದು ಸರಳ ಪ್ರೇಮಕಥೆ (ಕ): ಮ.12.15ಕ್ಕೆ, ಸೈರನ್ 108 (ತ): ಬೆ.10.10ಕ್ಕೆ, ಸಂ.4.20ಕ್ಕೆ, ರಾ.10.30ಕ್ಕೆ, ಮೇಡಮ್ ವೆಬ್ (ಇಂ): ಬೆ.10.50ಕ್ಕೆ, ಮ.1.25ಕ್ಕೆ, ಸಂ.4.35ಕ್ಕೆ, ರಾ.7.10ಕ್ಕೆ, ರಾ.9.45ಕ್ಕೆ, ಪ್ರೇಮಲು (ಮ): ಮ.12.40ಕ್ಕೆ, ರಾ.7.05ಕ್ಕೆ, ರಾ.10.20ಕ್ಕೆ, ಭ್ರಮಯುಗಂ (ಮ): ರಾ.10ಕ್ಕೆ, ಅಬ್ಬಬ್ಬ (ಕ): ಮ.2.55ಕ್ಕೆ, ವಾರನಂ ಆಯಿರಂ (ತ): ಸಂ.6ಕ್ಕೆ, ರವಿಕೆ ಪ್ರಸಂಗ (ಕ): ರಾ.9.50ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಜಯಪುರ ನಾಡ ಕಚೇರಿಗೆ ಡಿಸಿ ಭೇಟಿ, ಪರಿಶೀಲನೆ

ಮೈಸೂರು, ಫೆ.15– ತಾಲೂಕಿನ ಜಯಪುರ ನಾಡ ಕಚೇರಿಗೆ ಗುರುವಾರ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ದಿಢೀರ್ ಭೇಟಿ ನೀಡಿ ಪರಿಶೀಲಿಸಿದರು.



ನಾಡ ಕಚೇರಿಯಿಂದ ಜನರಿಗೆ ಸಿಗುವ ಸೌಲಭ್ಯಗಳ ಬಗ್ಗೆ ಮಾಹಿತಿ ಪಡೆದ ಅವರು, ಇ–ಆಫೀಸ್ ತಂತ್ರಾಂಶ ಏಕೆ ಅಳವಡಿಸಿಕೊಂಡಿಲ್ಲ ಎಂದು ಉಪ ತಹಸೀಲ್ದಾರ್ ಎನ್.ಎಂ.ನಿಂಗಪ್ಪ ಅವರನ್ನು ಪ್ರಶ್ನಿಸಿದರು. ಅಲ್ಲದೇ ವಾರದೊಳಗಾಗಿ ಇ–ಆಫೀಸ್ ತಂತ್ರಾಂಶ ಅಳವಡಿಸಿಕೊಂಡು ಸೇವೆ ನೀಡಬೇಕೆಂದು ಸೂಚಿಸಿದರು.

ಅಧಿಕೃತ ಡಾಟಾ ಎಂಟ್ರಿ ಆಪರೇಟರ್‌ಗಳನ್ನು ಹೊರತುಪಡಿಸಿ ಅನಧಿಕೃತವಾಗಿ ನೇಮಿಸಿಕೊಳ್ಳಬಾರದು. ಸರ್ಕಾರದ ಮಾರ್ಗಸೂಚಿಯಂತೆ ನೌಕರರನ್ನು ತೆಗೆದುಕೊಳ್ಳಬೇಕು. ಅನಧಿಕೃತ ನೌಕರರು ಕಂಡು ಬಂದರೆ ಸೂಕ್ತ ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

30 ಕೋಟಿ ಬರ ಪರಿಹಾರ: ಸರ್ಕಾರ ಮೈಸೂರು ಜಿಲ್ಲೆಗೆ 30 ಕೋಟಿ ರೂ. ಬರ ಪರಿಹಾರ ಹಣ ಮಂಜೂರು ಮಾಡಿದೆ. ಬರ ಪರಿಹಾರದ ಹಣವೆಲ್ಲವೂ ಖಜಾನೆಯಲ್ಲಿಯೇ ಉಳಿದಿದೆ. ಗ್ರಾಮ ಲೆಕ್ಕಿಗರು ಪ್ರತಿ ಗ್ರಾಮಕ್ಕೆ ಭೇಟಿ ನೀಡಬೇಕು. ಬರ ಪರಿಹಾರ ಬಾರದ ರೈತರಿಗೆ ಆಗಿರುವ ತಾಂತ್ರಿಕ ತೊಂದರೆ ಸರಿಪಡಿಸಿ ಮುತುವರ್ಜಿಯಿಂದ ಕೆಲಸ ಮಾಡಬೇಕು ಎಂದರು.

ಕುಡಿಯುವ ನೀರು, ಮೇವು, ಬರ ಪರಿಸ್ಥಿತಿ ಬಗ್ಗೆ ಉಪ ತಹಸೀಲ್ದಾರ್ ಎನ್.ಎಂ.ನಿಂಗಪ್ಪ ಅವರಿಂದ ಮಾಹಿತಿ ಪಡೆದ ಜಿಲ್ಲಾಧಿಕಾರಿಗಳು, ಕುಡಿಯುವ ನೀರಿನ ಕೊರತೆ ತಲೆದೋರದಂತೆ ಖಾಸಗಿ ಕೊಳವೆ ಬಾವಿಗಳ ಮಾಲೀಕರನ್ನು ಭೇಟಿ ಮಾಡಿ ನೀರನ್ನು ಪಡೆಯಲು ಒಪ್ಪಂದ ಮಾಡಿಕೊಳ್ಳಬೇಕು. ನೀರಿನ ಕೊರತೆ ಬಗ್ಗೆ ಗ್ರಾಪಂ ಅಧಿಕಾರಿಗಳು ಹಾಗೂ ಮೇವಿನ ಕೊರತೆ ಬಗ್ಗೆ ಪಶು ಇಲಾಖೆ ಅಧಿಕಾರಿಗಳು ವರದಿ ನೀಡುವಂತೆ ಸೂಚಿಸಿದರು. ಅಲ್ಲದೆ, ಅಕ್ರಮ–ಸಕ್ರಮ ಅರ್ಜಿಗಳ ಸ್ಥಿತಿಗತಿ ಬಗ್ಗೆ ಮಾಹಿತಿ ಕೇಳಿದರಲ್ಲದೆ, ಪೌತಿ ಖಾತೆ ಅಭಿಯಾನದ ಪ್ರಗತಿಯ ವರದಿ ಸಲ್ಲಿಸುವಂತೆ ಸೂಚನೆ ನೀಡಿದರು.

ತುರಗನೂರು ಹಾಲು ಉತ್ಪಾದಕರ ಸಹಕಾರ ಸಂಘದ ಚುನಾವಣೆ

ಟಿ.ಎಸ್.ರವಿ ಅಧ್ಯಕ್ಷ, ಉಪಾಧ್ಯಕ್ಷರಾಗಿ ಸಿದ್ದರಾಜು ಆಯ್ಕೆ



ತುರಗನೂರು ಡೈರಿ ಅಧ್ಯಕ್ಷರಾಗಿ ರವಿ, ಉಪಾಧ್ಯಕ್ಷರಾಗಿ ಸಿದ್ದರಾಜು ಆಯ್ಕೆಯಾದರು.

ತಿ.ನರಸೀಪುರ, ಫೆ.15– ತಾಲೂಕಿನ ತುರಗನೂರು ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಟಿ.ಎಸ್.ರವಿ, ಉಪಾಧ್ಯಕ್ಷರಾಗಿ ಸಿದ್ದರಾಜು ಆಯ್ಕೆಯಾಗಿದ್ದಾರೆ.

ಗ್ರಾಮದ ಡೈರಿ ಆವರಣದಲ್ಲಿ ಗುರುವಾರ ನಡೆದ ವಿಶೇಷ ಚುನಾವಣೆ ಸಭೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಟಿ.ಎಸ್.ರವಿ ಹಾಗೂ ಗುರುಲಿಂಗೇಗೌಡ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಮಹೇಶ್ ಹಾಗೂ ಸಿದ್ದರಾಜು ನಾಮಪತ್ರ ಸಲ್ಲಿಸಿದ್ದರು. ನಂತರ ನಡೆದ ಚುನಾವಣೆಯಲ್ಲಿ 7 ಮತ ಪಡೆದು ಟಿ.ಎಸ್.ರವಿ ಅಧ್ಯಕ್ಷರಾಗಿ, ಸಿದ್ದರಾಜು ಉಪಾಧ್ಯಕ್ಷರಾಗಿ ಆಯ್ಕೆಯಾದರೇ, 6 ಮತ ಪಡೆದ ಗುರುಲಿಂಗೇಗೌಡ ಹಾಗೂ ಮಹೇಶ್ ಪರಾಭವಗೊಂಡರು. ಚುನಾವಣಾಧಿಕಾರಿಯಾಗಿ ರಾಜಣ್ಣ ಕಾರ್ಯನಿರ್ವಹಿಸಿದರು.

ಈ ವೇಳೆ ನಿರ್ದೇಶಕರಾದ ನರೇಂದ್ರ, ಕೃಷ್ಣಯ್ಯ, ಜಯರಾಮು, ಮಹಾಲಿಂಗು, ಸಿದ್ದೇಗೌಡರು, ಸಾವಿತ್ರಮ್ಮ, ಬಸಣ್ಣಮ್ಮ ನಾಗರಾಜು ಹಾಗೂ ಮೋಳೆಗೌಡ ಚುನಾವಣೆಗೆ ಹಾಜರಾಗಿ ಅಧ್ಯಕ್ಷ–ಉಪಾಧ್ಯಕ್ಷರ ಆಯ್ಕೆಗೆ ಅನುಮೋದನೆ ನೀಡಿದರು.

ಡೈರಿ ನೂತನ ಅಧ್ಯಕ್ಷ ಟಿ.ಎಸ್.ರವಿ ಮಾತನಾಡಿ, ಹಾಲು ಉತ್ಪಾದಕರಿಗೆ ದೊರಕಬೇಕಾದ ಸವಲತ್ತು ಹಾಗೂ ಸೌಲಭ್ಯಗಳನ್ನು ದೊರಕಿಸಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ತುರಗನೂರು ಡೈರಿಯನ್ನು ತಾಲೂಕಿನಲ್ಲೇ ಮಾದರಿ ಮಾಡಬೇಕೆಂದು ಅಭಿಲಾಷೆ ಹೊಂದಿರುವ ನನ್ನ ಆಶಯಕ್ಕೆ ಸಂಘದ ನಿರ್ದೇಶಕರು ಸಹಕರಿಸಬೇಕು ಎಂದು ಮನವಿ ಮಾಡಿದರು. ಈ ವೇಳೆ ಕಾರ್ಯದರ್ಶಿ ನಾಗೇಂದ್ರ, ಮುಖಂಡರಾದ ಟಿ.ಎಸ್.ಮಹಾಲಿಂಗೇಗೌಡ, ಯುವ ಘಟಕದ ಅಧ್ಯಕ್ಷ ಟಿ.ಎಸ್.ಲೋಕೇಶ್, ಸಿದ್ದರಾಜು, ರಾಜಣ್ಣ, ಸಿದ್ದಪ್ಪ, ಸಂದೀಪ್, ರಮೇಶ, ಟಿ.ಎಸ್.ರಾಜು, ನಾಗರಾಜು, ಗಿರೀಶ್ ಸೇರಿದಂತೆ ಇನ್ನಿತರರಿದ್ದರು.

ಇಂದಿನಿಂದ ಶ್ರೀ ಆಂಜನೇಯಸ್ವಾಮಿ, ಜಮಾಲಮ್ಮನವರ ಉರುಸ್, ಗಂಧೋತ್ಸವ



ಹುಣಸೂರು, ಫೆ.15– ತಾಲೂಕಿನ ರತ್ನಪುರಿ ಕಾಲೋನಿಯಲ್ಲಿ ಹಿಂದೂ, ಮುಸ್ಲಿಂ ಭಾವೈಕ್ಯತೆ ಸಾರುವ ಪ್ರಸಿದ್ಧ ಶ್ರೀ ಆಂಜನೇಯ ಸ್ವಾಮಿ ಹಾಗೂ ಜಮಾಲಮ್ಮನವರ ಉರುಸ್ ಮತ್ತು ಗಂಧೋತ್ಸವ ಹಾಗೂ ದನಗಳ ಜಾತ್ರೆ ಫೆ.16ರಿಂದ 19ರವರೆಗೆ ನಡೆಯಲಿದೆ ಎಂದು ಜಾತ್ರಾ ಸಮಿತಿ ಅಧ್ಯಕ್ಷ ಆರ್.ಪ್ರಭು ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಾತ್ರಾ ಮಹೋತ್ಸವದಲ್ಲಿ ಬೆಂಗಳೂರು, ಆನೇಕಲ್, ಮಂಡ್ಯ, ತುಮಕೂರು, ಚಾಮರಾಜನಗರ ಸೇರಿದಂತೆ ವಿವಿಧೆಡೆಗಳಿಂದ ಸಾವಿರಕ್ಕೂ ಹೆಚ್ಚು ಹಳ್ಳಿಕಾರ್ ಜೋಡೆತ್ತುಗಳು ಪಾಲ್ಗೊಳ್ಳಲಿವೆ ಎಂದರು. 60ನೇ ವರ್ಷದ ಮಹಾಭಿಷೇಕ ಮತ್ತು ಪಲ್ಲಕ್ಕಿ ಉತ್ಸವ ಅಂಗವಾಗಿ ಫೆ.16ರಂದು ಬೆಳಗ್ಗೆ 6 ಗಂಟೆಗೆ ಆಂಜನೇಯಸ್ವಾಮಿಗೆ ಮಹಾಭಿಷೇಕ, ಹೋಮಹವನ ನಡೆಯಲಿದೆ. ಮಧ್ಯಾಹ್ನ 3 ಗಂಟೆಗೆ ಪುರುಷರು, ಮಹಿಳೆಯರಿಗಾಗಿ ರಾಜ್ಯ ಮಟ್ಟದ ಹೊನಲು ಬೆಳಕಿನ ಹಗ್ಗ ಜಗ್ಗಾಟ ಪಂದ್ಯಾವಳಿ ನಡೆಯಲಿದೆ.

ಫೆ.17ರಂದು ಬೆಳಗ್ಗೆ 7 ಗಂಟೆಗೆ ಧರ್ಮಾಪುರ ಗ್ರಾಮಸ್ಥರಿಂದ ಕೊಂಡೋತ್ಸವ, ಬೆಳಗ್ಗೆ 9 ಗಂಟೆಗೆ ಆಂಜನೇಯ ಸ್ವಾಮಿಗೆ ವಿಶೇಷ ಪೂಜೆ ಮತ್ತು ಮಹಾಮಂಗಳಾರತಿ ನಡೆಯಲಿದೆ. ಮಧ್ಯಾಹ್ನ 12ರಿಂದ 3 ರವರೆಗೆ ಅನ್ನಸಂತರ್ಪಣೆ, ಸಂಜೆ 6 ಗಂಟೆಗೆ ಆಂಜನೇಯಸ್ವಾಮಿ ಪಲ್ಲಕ್ಕಿ ಉತ್ಸವ ವಿವಿಧ ಜಾನಪದ ಕಲಾತಂಡಗಳೊಂದಿಗೆ ಅದ್ದೂರಿಯಾಗಿ ನೆರವೇರಲಿದೆ. ಬಳಿಕ ಚಲನಚಿತ್ರ ನಟರು ಸೇರಿದಂತೆ ಗಣ್ಯರನ್ನು ಸನ್ಮಾನಿಸಲಾಗುವುದು. ಅಲ್ಲದೇ ಅದೇ ದಿನ ರಾಜ್ಯ ಮಟ್ಟದ ಹೊನಲು ಬೆಳಕಿನ ಹಗ್ಗಜಗ್ಗಾಟ ಪಂದ್ಯಾವಳಿಯ ಸೆಮಿಫೈನಲ್, ಫೈನಲ್ ಪಂದ್ಯ ನಡೆಯಲಿದ್ದು, ಪುರುಷರ ವಿಭಾಗದಲ್ಲಿ ವಿಜೇತರಿಗೆ ಪ್ರಥಮ ಬಹುಮಾನ 25 ಸಾವಿರ ರೂ. ಮತ್ತು ಟ್ರೋಫಿ, ದ್ವಿತೀಯ ಬಹುಮಾನ 15 ಸಾವಿರ ರೂ. ಮತ್ತು ಟ್ರೋಫಿ ಹಾಗೂ 3ನೇ ಬಹುಮಾನ 10 ಸಾವಿರ ರೂ. ಮತ್ತು ಟ್ರೋಫಿ, ಮಹಿಳಾ ವಿಭಾಗದ ವಿಜೇತರಿಗೆ ಪ್ರಥಮ 10 ಸಾವಿರ, ದ್ವಿತೀಯ 5 ಸಾವಿರ ರೂ. ಮತ್ತು ಟ್ರೋಫಿ ಹಾಗೂ 9 ಸಮಾಧಾನಕರ ಬಹುಮಾನ ವಿತರಿಸಲಾಗುವುದು ಎಂದರು.

ಫೆ.18ರಂದು ರಾತ್ರಿ 7 ಗಂಟೆಗೆ ಜಮಾಲಮ್ಮನವರ ಉರುಸ್ ಮತ್ತು ಗಂಧೋತ್ಸವ ನಡೆಯಲಿದ್ದು, ರಾತ್ರಿ 8 ಗಂಟೆಗೆ ರಾಷ್ಟ್ರ ಪ್ರಶಸ್ತಿ ವಿಜೇತೆ ಜನಪದ ಗಾಯಕರಾದ ಅಮ್ಮ ರಾಮಚಂದ್ರ ತಂಡದವರಿಂದ ಜನಪದ ಮತ್ತು ಸುಗಮ ಸಂಗೀತ ನಡೆಯಲಿದೆ. ಫೆ.19ರಂದು ಬೆಳಗ್ಗೆ 11 ಗಂಟೆಗೆ ಜಾತ್ರೆಯಲ್ಲಿ ಪಾಲ್ಗೊಳ್ಳುವ ಉತ್ತಮ ರಾಸುಗಳಿಗೆ ಜಾತ್ರಾ ಮಹೋತ್ಸವ ಸಮಿತಿಯಿಂದ ನಗದು ಬಹುಮಾನ ನೀಡಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಜಮಾತೆ ಮುಸ್ಲಿಂ ಸಮಿತಿಯ ರಫೀಕ್, ಜಾತ್ರಾ ಸಮಿತಿಯ ಖಜಾಂಚಿ ಸತೀಶ್ ಪಾಪಣ್ಣ, ಸಲಹೆಗಾರ ನಂದೀಶ್, ಮೋಹನಚಾರಿ, ಸಹ ಕಾರ್ಯದರ್ಶಿ ರಾಜು, ಸುದರ್ಶನ್ ಸಿಂಗ್ ಇದ್ದರು.

ಮಿರ್ಲೆ ಡೈರಿಗೆ ಕಾಂತರಾಜ್ ಅಧ್ಯಕ್ಷ



ಅಧ್ಯಕ್ಷರಾಗಿ ಆಯ್ಕೆಯಾದ ಕಾಂತರಾಜ್ ಅವರನ್ನು ಮುಖಂಡರು ಸನ್ಮಾನಿಸಿದರು.

ಭೇರ್ಯ, ಫೆ.15– ಸಾಲಿಗ್ರಾಮ ತಾಲೂಕಿನ ಮಿರ್ಲೆ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಎಂ.ಆರ್.ಕಾಂತರಾಜ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ಹಿಂದಿನ ಅಧ್ಯಕ್ಷ ಎಂ.ಎಸ್. ಯೋಗೇಶ್ ಅವರ ರಾಜೀನಾಮೆಯಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಗುರುವಾರ ನಡೆದ ಚುನಾವಣೆಯಲ್ಲಿ ಎಂ.ಆರ್.ಕಾಂತರಾಜ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಸಹಕಾರ ಇಲಾಖೆ ಅಭಿವೃದ್ಧಿ ಅಧಿಕಾರಿ ಎಸ್.ರವಿ ಘೋಷಿಸಿದರು. ಈ ವೇಳೆ ಉಪಾಧ್ಯಕ್ಷೆ ಭಾಗ್ಯಮ್ಮ, ನಿರ್ದೇಶಕರಾದ ಎಂ.ಆರ್.ವಸಂತ ಕುಮಾರ್, ಶಾರದಬಾಯಿ, ಎಂ.ಕೆ. ಮಹೇಶ್, ಎಂ.ಎಸ್. ಯೋಗೇಶ್, ರಂಗಸ್ವಾಮಿ ಹಾಜರಿದ್ದರು.

ಕಾಡಾನೆ ದಾಳಿ: ಬಾಳೆ, ಮೆಣಸಿನಕಾಯಿ ಫಸಲು ನಾಶ



ಕಾಡಾನೆ ದಾಳಿಯಿಂದ ನಾಶಗೊಂಡ ಬಾಳೆ ಫಸಲು

ಹೆಚ್.ಡಿ.ಕೋಟೆ, ಫೆ.15– ಕಾಡಾನೆ ದಾಳಿಗೆ ಬಾಳೆ, ಮೆಣಸಿನಕಾಯಿ ಬೆಳೆ ಹಾಗೂ ಡ್ರಿಪ್ ಪೈಪ್‌ಗಳನ್ನು ನಾಶ ಮಾಡಿರುವ ಘಟನೆ ತಾಲೂಕಿನ ಹುನುಗನಹಳ್ಳಿಯಲ್ಲಿ ನಡೆದಿದೆ.

ಗ್ರಾಮದ ರೈತ ಸತೀಶ್‌ಗೌಡರ ಜಮೀನಿನ ಮೇಲೆ ದಾಳಿ ನಡೆಸಿರುವ ಕಾಡಾನೆ ಕಟಾವಿಗೆ ಬಂದಿದ್ದ ಬಾಳೆ, ಮೆಣಸಿನಕಾಯಿ ಫಸಲು ಹಾಗೂ ಡ್ರಿಪ್ ಪೈಪ್‌ಗಳನ್ನು ನಾಶ ಮಾಡಿದ್ದು, ಇದರಿಂದ ಲಕ್ಷಾಂತರ ರೂ. ನಷ್ಟ ಸಂಭವಿಸಿದೆ. ಈ ಸಂಬಂಧ ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿದ ಅರಣ್ಯಾಧಿಕಾರಿಗಳು ಪರಿಹಾರ ದೊರಕಿಸಿಕೊಡುವ ಭರವಸೆ ನೀಡಿದ್ದಾರೆ.

ಇಂದು ಪೌತಿ ಖಾತೆ ಆಂದೋಲನ

ಹಿರೀಕ್ಯಾತನಹಳ್ಳಿ, ಫೆ.15– ಹುಣಸೂರು ತಾಲೂಕಿನ ಗಾವಡಗೆರೆ ಹೋಬಳಿ ಕೇಂದ್ರದ ನಾಡಕಚೇರಿ ಆವರಣದಲ್ಲಿ ಫೆ.16 ರಂದು ಬೆಳಗ್ಗೆ 9.30ಕ್ಕೆ ಪೌತಿ ಖಾತೆ ಆಂದೋಲನ ಹಮ್ಮಿಕೊಳ್ಳಲಾಗಿದೆ ಎಂದು ಉಪ ತಹಸೀಲ್ದಾರ್ ಅರುಣ್ ಕುಮಾರ್ ತಿಳಿಸಿದ್ದಾರೆ.



ಗಾವಡಗೆರೆ ಹೋಬಳಿ ವ್ಯಾಪ್ತಿಯಲ್ಲಿ ಜಮೀನುಗಳ ಖಾತೆದಾರರು ನಿಧನರಾದರೂ, ವಾರಸುದಾರರಿಗೆ ಪೌತಿ ಖಾತೆಯಾಗದಿರುವುದರಿಂದ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಗಳಾದ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆ, ಬರ ಪರಿಹಾರ ಸೇರಿದಂತೆ ಇನ್ನಿತರ ಸವಲತ್ತುಗಳನ್ನು ಪಡೆಯಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ತಾಲೂಕು ಆಡಳಿತದಿಂದ ಪೌತಿ ಖಾತೆ ಆಂದೋಲನ ಹಮ್ಮಿಕೊಳ್ಳಲಾಗಿದ್ದು, ಇದನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪೌತಿ ಖಾತೆಗೆ ಸಲ್ಲಿಸಬೇಕಾದ ದಾಖಲೆಗಳು: ಪೌತಿ ಖಾತೆ ಕೋರಿ ಅರ್ಜಿ, ಆರ್‌ಟಿಸಿ, ಕಂದಾಯ ಇಲಾಖೆಯಿಂದ ಪಡೆದ ಆರ್‌ಡಿಎಸ್ ವಂಶವೃಕ್ಷ, ಮೃತ ಖಾತೆದಾರರ ಮರಣ ಪ್ರಮಾಣ ಪತ್ರ, ಅರ್ಜಿದಾರರು ಹಾಗೂ ವಾರಸುದಾರರ ಆಧಾರ್ ಕಾರ್ಡ್ ಪ್ರತಿ, ಪೌತಿ ಖಾತೆ ಕೋರಿ ಜಮೀನಿನ ಸಂಬಂಧ ಯಾವುದೇ ನ್ಯಾಯಾಲಯದಲ್ಲಿ ಪ್ರಕರಣ ಇಲ್ಲದಿರುವ ಬಗ್ಗೆ ಖಾತೆ ಮಾಡಲು ಯಾರಿಂದಲೂ ತಕರಾರು ಇಲ್ಲದಿರುವ ಬಗ್ಗೆ ನೋಟರಿ ಪ್ರಮಾಣ ಪತ್ರಗಳನ್ನು ತಮ್ಮ ವ್ಯಾಪ್ತಿಯ ಗ್ರಾಮ ಆಡಳಿತಾಧಿಕಾರಿಗಳಿಗೆ ಸಲ್ಲಿಸಿ ಪೌತಿ ಖಾತೆ ಮಾಡಿಸಿಕೊಳ್ಳಬಹುದು ಎಂದು ತಿಳಿಸಿದ್ದಾರೆ.

ಬಿ.ಸೋಮಶೇಖರ್‌ಗೆ ಚಾ.ನಗರ ಲೋಕಸಭಾ 'ಕೈ' ಟಿಕೆಟ್ ನೀಡಿ

ವಿವಿಧ ಸಂಘಟನೆಗಳ ಮುಖಂಡರ ನಿಯೋಗದಿಂದ ಸಿಎಂಗೆ ಮನವಿ



ಮಾಜಿ ಸಚಿವ ಬಿ.ಸೋಮಶೇಖರ್ ಅವರಿಗೆ ಲೋಕಸಭಾ ಟಿಕೆಟ್ ನೀಡುವಂತೆ ಒತ್ತಾಯಿಸಿ ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಚಾಮರಾಜನಗರ ಕ್ಷೇತ್ರದ ವಿವಿಧ ಸಂಘಟನೆಗಳ ಮುಖಂಡರು ಭೇಟಿ ಮಾಡಿ, ಮನವಿ ಸಲ್ಲಿಸಿದರು.

ತಿ.ನರಸೀಪುರ, ಫೆ.15– ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಚಾಮರಾಜನಗರ ಕ್ಷೇತ್ರದಿಂದ ಸ್ಪರ್ಧಿಸಲು ಮಾಜಿ ಸಚಿವ ಬಿ.ಸೋಮಶೇಖರ್ ಅವರಿಗೆ ಕಾಂಗ್ರೆಸ್ ವರಿಷ್ಠರು ಅವಕಾಶ ಮಾಡಿಕೊಡಬೇಕು ಎಂದು ಚಾ.ನಗರ ಲೋಕಸಭಾ ಕ್ಷೇತ್ರದ 8 ವಿಧಾನಸಭಾ ಕ್ಷೇತ್ರಗಳ ವಿವಿಧ ಸಂಘಟನೆಗಳ ಮುಖಂಡರ ನಿಯೋಗ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಭೇಟಿ ಮಾಡಿ, ಮನವಿ ಸಲ್ಲಿಸಿದೆ.


ಚಾ.ನಗರ ಲೋಕಸಭಾ ಕ್ಷೇತ್ರದ 8 ವಿಧಾನಸಭಾ ಕ್ಷೇತ್ರಗಳ ದಲಿತ ಸಂಘರ್ಷ ಸಮಿತಿ, ಪ್ರಗತಿಪರ ಸಂಘಟನೆಗಳು, ರೈತಪರ ಸಂಘಟನೆ, ಅಂಬೇಡ್ಕರ್ ಭೀಮ ಸೇನೆ, ವೀರಶೈವ ಮುಖಂಡರು, ಪ್ರಗತಿಪರ ಚಿಂತಕರು, ಕಾಂಗ್ರೆಸ್ ಮುಖಂಡರು ಹಾಗೂ ವಿವಿಧ ಸಂಘಟನೆಗಳನ್ನೊಳಗೊಂಡ ನಿಯೋಗ ಬೆಂಗಳೂರಿನ ಮುಖ್ಯಮಂತ್ರಿಗಳ ನಿವಾಸ ಕೃಷ್ಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಈ ಮನವಿ ಮಾಡಿ ಟಿಕೆಟ್ ನೀಡಿದರೆ ಸೋಮಶೇಖರ್ ಅವರನ್ನು ಗೆಲ್ಲಿಸಿಕೊಂಡು ಬರುವುದಾಗಿ ತಿಳಿಸಿದ್ದಾರೆ.

ವರುಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್‌ನ ಯುವ ಮುಖಂಡ ಜಿ.ಮರಹಳ್ಳಿ ರಂಗಸ್ವಾಮಿ ಮಾತನಾಡಿ, ಮಾಜಿ ಸಚಿವ ಬಿ.ಸೋಮಶೇಖರ್ ಅವರು ಈ ಹಿಂದೆ ಸಚಿವರಾಗಿ ಜನಪರ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿ ಮಣಿಸಲು ಬಿ.ಸೋಮಶೇಖರ್‌ಗೆ ಎಲ್ಲಾ ಅರ್ಹತೆ, ಶಕ್ತಿ ಇದೆ. ಇದನ್ನು ಹೈಕಮಾಂಡ್ ಪರಿಶೀಲಿಸಿ ಟಿಕೆಟ್ ನೀಡಿದರೆ ನಾವು ಶ್ರಮವಹಿಸಿ ಗೆಲುವಿಗೆ ಶ್ರಮಿಸುತ್ತೇವೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅಭಿವೃದ್ಧಿ ಪರ, ಗೆಲ್ಲುವ ಅವಕಾಶ ಹೊಂದಿರುವ, ಜನಾಭಿಪ್ರಾಯ ಇರುವವರಿಗೆ ಅವಕಾಶ ಮಾಡಿಕೊಡಬೇಕೆಂದು ಕೋರಿದರು. 10 ವರ್ಷ ಸಂಸದರಾಗಿದ್ದ ದಿ.ಆರ್.ಧ್ರುವನಾರಾಯಣ್ ಅವರು ಕ್ಷೇತ್ರವನ್ನು ಅಭಿವೃದ್ಧಿ ಪಡಿಸಲು ಸಾಕಷ್ಟು ಶ್ರಮಿಸಿ, ಹಲವಾರು ಯೋಜನೆಗಳನ್ನು ಜಾರಿಗೊಳಿಸಿ ಉತ್ತಮ ಕೆಲಸ ಮಾಡಿದ್ದರು. ಹಾಗಾಗಿ ಈಗಲೂ ಅಂತಹ ಅರ್ಹತೆ ಇರುವ ನಾಯಕರನ್ನು ಆಯ್ಕೆ ಮಾಡಿಕೊಳ್ಳಬೇಕಿದೆ. ಈ ದಿಸೆಯಲ್ಲಿ ಹಿರಿಯರು, ಅನುಭವಿಗಳೂ ಆದ ಮಳವಳ್ಳಿ ಕ್ಷೇತ್ರದ ಮಾಜಿ ಶಾಸಕ ಹಾಗೂ ಮಾಜಿ ಸಚಿವ ಬಿ.ಸೋಮಶೇಖರ್ ಅವರಿಗೆ ಕಾಂಗ್ರೆಸ್ ಪಕ್ಷ ಟಿಕೆಟ್ ನೀಡಬೇಕು. ಅವರಿಗೆ ಟಿಕೆಟ್ ನೀಡಿದರೆ ಪ್ರಗತಿಪರ ಸಂಘಟನೆಗಳ ಎಲ್ಲರೂ ಒಗ್ಗೂಡಿ ಅವರನ್ನು ಗೆಲ್ಲಿಸಲಿದ್ದೇವೆ ಎಂದರು.

ನಿಯೋಗದಲ್ಲಿ ದಸಂಸ ಮುಖಂಡರಾದ ಸೋಸಲೆ ಶಶಿಕಾಂತ್, ಕೆಬ್ಬೆಹುಂಡಿ ಲಿಂಗರಾಜು, ಶಿವಣ್ಣ, ಹೆಚ್.ಡಿ.ಕೋಟೆ ರಾಜಶೇಖರ್, ನಂಜುಂಡಮೂರ್ತಿ, ಜ್ಞಾನ ವೀಣೆ ಸಂಸ್ಥೆಯ ಸಂಸ್ಥಾಪಕ ಆನಗಟ್ಟಿ ದೇವರಾಜ್, ನನ್ನವ ಕಲಾ ತಂಡದ ವೈ.ಜಿ.ಮಹದೇವ್, ಶಿವಣ್ಣ, ನಿರಂಜನ್, ಸೋಸಲೆ ನಂಜುಂಡಯ್ಯ, ಕಾಂಗ್ರೆಸ್ ಮುಖಂಡ ನಾಗಸುಂದರ, ಚಾಮರಾಜನಗರ ಉಲ್ಲಾಸ್, ಗುಂಡ್ಲುಪೇಟೆ ಸುಂದರ್ ರಾಜು, ಸೋಮಣ್ಣ, ಸೋಮಶೇಖರ್, ನಂಜುಂಡಸ್ವಾಮಿ, ಕಾರ್ಯ ಕುಮಾರ್, ಗ್ರಾಪಂ ಸದಸ್ಯ ಕೃಷ್ಣಕುಮಾರ್, ಯೋಗೇಂದ್ರ, ಗ್ರಾಪಂ ಸದಸ್ಯರಾದ ಹಾರೋಹಳ್ಳಿ ನಟರಾಜು, ಕಾರ್ಯ ಕುಮಾರ್, ಕೃಷ್ಣಕುಮಾರ್, ಯಜಮಾನರಾದ ದತ್ತ ಯೋಗೇಂದ್ರ, ಕೊಳ್ಳೇಗಾಲ, ನಂಜನಗೂಡು ಭಾಗದ ಮುಖಂಡರು ಇದ್ದರು.

ಸಣ್ಣೇಗೌಡ ನಿಧನ



ಬೆಟ್ಟದಪುರ, ಫೆ.15– ಗ್ರಾಮದ ನಿವಾಸಿ, ಪತ್ರಿಕಾ ವಿತರಕ ವೆಂಕಟೇಶ್ ಅವರ ತಂದೆ ಸಣ್ಣೇಗೌಡ(73) ಗುರುವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ಮೃತರ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

11ನೇ ದಿನದ ಶಿವಗಣಾರಾಧನೆ ಆಹ್ವಾನ ಪತ್ರಿಕೆ

1036/5, 2ನೇ ಮುಖ್ಯರಸ್ತೆ, ಸಾರ್ವಜನಿಕ ಹಾಸ್ಟೆಲ್ ರಸ್ತೆ, ವಿದ್ಯಾರಣ್ಯಪುರಂ, ಮೈಸೂರು–8



ನಮ್ಮ ತಾಯಿ ಜಿ.ಮಂಗಳಾ ಅಂಗೈಕ್ಯ ವಿದ್ವಾನ್ ಎಂ.ಗಂಗಾಧರ ಶಾಸ್ತ್ರಿ ಧರ್ಮಪತ್ನಿ 06–02–24ರಂದು ಅಂಗೈಕ್ಯರಾಗಿದ್ದು ಇವರ ಶಿವಗಣಾರಾಧನೆಯನ್ನು 16–02–2024 ಶುಕ್ರವಾರ 11 ಗಂಟೆಗೆ ಸ್ವಗೃಹದಲ್ಲಿ ಏರ್ಪಡಿಸಿದೆ.

ಜಿ.ಮಂಗಳಾ

ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನು, ಕೋರಲು ವಿನಂತಿ.

ದುಃಖತಪ್ತರು: ಮಕ್ಕಳು, ಅಳಿಯಂದಿರು ಕುಟುಂಬವರ್ಗದವರು

LAYOUT LAUNCH OFFER

Sites Price @ 1149/- Sft

Only for first 5 sites

On Bannur Main Road, Before ATME College

Call 90083 12555 97424 73846

EXCELLENT COACHING CENTRE, MYSORE

"Join Toppers & Be A Topper"

ADMISSIONS OPEN for

1st and 2nd PUC PCMB, PCMC and commerce 2024-25 Batch

Coaching classes by reputed and experts lectures.

Best coaching for Long term, KCET, JEE and NEET.

Classes for 2024-25 batch by expert and Experienced Faculty.

For details contact: #1012, 2nd Main, 4th Cross, Ramalingeshwara Temple Road, Vidyaranyapuram, Mysore.

Join for SHORT Term KCET, JEE and NEET Classes for 2023-24

Batches Commence from MARCH 3rd week

Mob: 7022036829, 8867982454 9886625663

2.5 BHK HOME INTERIORS @ ₹ 2.5 Lacs*

Home Space Mart TM

TALK TO OUR DESIGN TEAM

✆ 8197310113

MUDA APPROVED SITES FOR SALE

Last 7

30X40 EAST FACING

Available.

Location: Adjacent J P Nagar, At Mysore-Ooty Road & Ring Road Junction.

Price @ Rs 68 lakhs onwards

Call: 96200 99122

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ

ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಧನಗಳ್ಳಿ ಅಂಚೆ, ದೊಡ್ಡಹುಂಡಿ ಗ್ರಾಮದಲ್ಲಿ ವಾಸವಾಗಿರುವ ಶ್ರೀ ಸೋಮಣ್ಣನವರು, ಧನಗಳ್ಳಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರು, ಇವರು ಮಾಡುವ ವಿಜ್ಞಾಪನೆಗಳು



ದಿನಾಂಕ: 05.02.2024ನೇ ಸೋಮವಾರ ನನ್ನ ಪೂಜ್ಯ ತಾಯಿಯವರಾದ

ಶ್ರೀಮತಿ ಲಕ್ಕಮ್ಮರವರು (ಲೇ॥ ಶ್ರೀ ಹಾ.ಮ.ಚಿಕ್ಕೇಗೌಡರ ಧರ್ಮಪತ್ನಿ)

ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇನೆ. ತತ್ಸಂಬಂಧವಾದ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ: 16.02.2024ನೇ ಶುಕ್ರವಾರ ಮಧ್ಯಾಹ್ನ 12.30ಕ್ಕೆ ಮೇಲ್ಕಂಡ ಮೃತರ ಸ್ವಗೃಹದಲ್ಲಿ ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನ ಪತ್ರಿಕೆ ಎಂದು ಭಾವಿಸಿ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು:

ಶ್ರೀ ಸೋಮಣ್ಣ, ಧನಗಳ್ಳಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರು ಶ್ರೀ ಸಿ.ಬಸವರಾಜು, ಚೆಸ್ಕಾಂ, ಸಹೋದರಿಯರು, ಮೃತರ ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು ಮತ್ತು ದೊಡ್ಡಹುಂಡಿ ಗ್ರಾಮಸ್ಥರು

ಭೋಜನ: ಮಧ್ಯಾಹ್ನ 1.00ಕ್ಕೆ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕೃಷ್ಣರಾಜನಗರ

ಹಾಸನ ಮೈಸೂರು ರಸ್ತೆ, ಮೈಸೂರು ಜಿಲ್ಲೆ, ಪಿನ್ ಕೋಡ್–571602

E-Mail ID: apmckrnagar@gmail.com Ph:08223-262352

ಸಂ:ಕೃಉಮಾಸ(ಕೃರಾನ)/701/2023–24 ದಿ: 15.02.2024

ಪ್ರಕಟಣೆ

ಕೆ.ಆರ್.ನಗರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ವ್ಯಾಪ್ತಿಯಲ್ಲಿ ಸಕ್ಷಮ ಪ್ರಾಧಿಕಾರದಿಂದ ವರ್ತಕರು/ದಲ್ಲಾಲರ ಲೈಸನ್ಸ್ ಪಡೆದು ಅಧಿಸೂಚಿತ ಕೃಷಿ ಹುಟ್ಟುವಳಿಗಳ ವ್ಯಾಪಾರ ವಹಿವಾಟು ನಡೆಸುತ್ತಿರುವ ಪೇಟೆ ಕಾರ್ಯಕರ್ತರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ರೈತರಿಂದ ಕೃಷಿ ಉತ್ಪನ್ನಗಳನ್ನು ನೇರವಾಗಿ ಖರೀದಿಸುವಾಗ ಯಾವುದೇ ದಲ್ಲಾಳಿ ಶುಲ್ಕ ಹಾಗು ಇತರೆ ಯಾವುದೇ ಶುಲ್ಕವನ್ನು ರೈತರಿಂದ ವಸೂಲಿ ಮಾಡುವಂತಿಲ್ಲ ಹಾಗೂ ಬಿಳಿ ಚೀಟಿ ಪ್ರಕರಣವನ್ನು ನಿಷೇದಿಸಲಾಗಿದೆ. ತಪ್ಪಿದ್ದಲ್ಲಿ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966 ರ ಕಾಯ್ದೆ ಕಲಂನಂತೆ ಕಾನೂನು ಕ್ರಮ ಜರುಗಿಸಲಾಗುವುದು.

ಸಹಿ/– ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕೆ.ಆರ್.ನಗರ

MysoreSilk

ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)

3ನೇ ಮತ್ತು 4ನೇ ಮಹಡಿ, ಜನೋಪಯೋಗಿ ಕಟ್ಟಡ, ಎಂ.ಜಿ. ರಸ್ತೆ, ಬೆಂಗಳೂರು–560 001.

ಫೋನ್: 080–2558 6550/2558 6399 ಫ್ಯಾಕ್ಸ್: 080–2558 7020

ಇ–ಮೇಲ್: info@ksicsilk.com

ಸಂಖ್ಯೆ: ಕೆಎಸ್ಐಸಿ/ಪಿಡಿ/ಎಸ್‌ಡಬ್ಲ್ಯೂಎಫ್/ಕ್ಯಾಂಟೀನ್/04/2023–24 ದಿನಾಂಕ: 14.02.2024

ಕೆಎಸ್ಐಸಿ ಎಸ್‌ಡಬ್ಲ್ಯೂಎಫ್ ಘಟಕ, ಮೈಸೂರಿನ ಕ್ಯಾಂಟೀನ್‌ಗೆ ಆರು ತಿಂಗಳ ಕಾಲಾವಧಿ ಮಾರ್ಚ್–2024 ರಿಂದ ಆಗಸ್ಟ್–2024ವರೆಗೆ ಅಗತ್ಯ ಪ್ರಾವಿಷನ್ ಐಟಂಗಳ ಖರೀದಿಗಾಗಿ ಟೆಂಡರ್. (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕೆಎಸ್ಐಸಿ ಎಸ್‌ಡಬ್ಲ್ಯೂಎಫ್ ಘಟಕ ಮೈಸೂರಿನ ಕ್ಯಾಂಟೀನ್‌ಗೆ ಆರು ತಿಂಗಳ ಕಾಲಾವಧಿ ಮಾರ್ಚ್–2024 ರಿಂದ ಆಗಸ್ಟ್–2024 ವರೆಗೆ ಪ್ರಾವಿಷನ್ ಐಟಂಗಳ ಖರೀದಿಗಾಗಿ ಹೆಸರಾಂತ ವ್ಯಕ್ತಿಗಳು/ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್ ದಸ್ತಾವೇಜು, ಟೆಂಡರ್ ಪ್ರಕಟಣೆಯ ವಿವರಗಳು, ವೇಳಾಪಟ್ಟಿ, ನಿಯಮಗಳು ಮತ್ತು ಷರತ್ತುಗಳನ್ನು https://kppp.karnataka.gov.in ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಬಹುದಾಗಿದೆ. ರೂ.34,000/– ಗಳ ಇ.ಎಮ್.ಡಿ.ಯೊಂದಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 26–02–2024ರ ಅಪರಾಹ್ನ 3:00 ಗಂಟೆವರೆಗೆ. ತಾಂತ್ರಿಕ ಬಿಡ್‌ಗಳನ್ನು ದಿನಾಂಕ: 27–02–2024ರ ಅಪರಾಹ್ನ 3:30 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ–080–46010000/68948777 ಯಿಂದ ಪಡೆದುಕೊಳ್ಳಬಹುದಾಗಿದೆ.

ಸಹಿ/–
ಪ್ರಧಾನ ವ್ಯವಸ್ಥಾಪಕರು(ಸಂ)

ವಾಪಾಸಂಇ/ವಾಪ್ರ/3595/MAA/2023–24

MYSORE FOODS

ಚಪಾತಿ	₹4.50/-
ಪೂರಿ	₹4/-
ಇಡ್ಲಿ ಹಿಟ್ಟು	₹40/-
ಪುಳಿಯೋಗರೆ ಪೇಸ್ಟ್	₹60/-
ಟೀ ಪುಡಿ	₹220/-

*ಷರತ್ತುಗಳು ಅನ್ವಯಿಸುತ್ತವೆ

81474 69991 96326 57007

ಬೇಕಾಗಿದ್ದಾರೆ

ಫಾಲ್ಕನ್ ಟೈರ್ಸ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಕಛೇರಿಗೆ ಕಾರ್ಯದರ್ಶಿ ರವರನ್ನು ನೇಮಕ ಮಾಡುವ ಸಲುವಾಗಿ:

ವಿದ್ಯಾರ್ಹತೆ: ಕನಿಷ್ಠ PUC ಉತ್ತೀರ್ಣ, GDC ತೇರ್ಗಡೆ. ಪರಿಣತಿ: ಕನ್ನಡ, ಇಂಗ್ಲೀಷ್ ಕಂಪ್ಯೂಟರ್ ಟೈಪಿಂಗ್, ಕಂಪ್ಯೂಟರ್ ಆಪರೇಷನ್ ಹಾಗೂ ಪತ್ರವ್ಯವಹಾರ ಆದ್ಯತೆ: ಗಂಡಸರಿಗೆ ಹಾಗೂ ಸ್ವಂತ ವಾಹನವುಳ್ಳವರಿಗೆ. ಆಸಕ್ತಿವುಳ್ಳವರು ಈ ಜಾಹೀರಾತು ಪ್ರಕಟಣೆ ಆದ 10 ದಿನದೊಳಗೆ ಕೆಳಗಿನ ವಿಳಾಸಕ್ಕೆ Bio-data ವನ್ನು ಕಳುಹಿಸುವುದು ಅಥವಾ ಕಛೇರಿಗೆ ಖುದ್ದು ಸಲ್ಲಿಸುವುದು. ವಿಳಾಸ: No. 1059, ಅಭಿಷೇಕ್ ಸರ್ಕಲ್ ಹತ್ತಿರ, ವಿಜಯನಗರ ಮುಖ್ಯ ರಸ್ತೆ, ಹೆಬ್ಬಾಳ, ಮೈಸೂರು. ಸಂಪರ್ಕ:

Mob: 9481814370, 9448743877, 9342126296

ಇಮೇಲ್: ftlhousingsociety@gmail.com

ಸಾರ್ವಜನಿಕರಿಗೆ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ನಮ್ಮ ಕಕ್ಷಿದಾರರಾದ ಮೈಸೂರು ಸಿಟಿ. ಸಾತಗಳ್ಳಿ. ಹಂಚ್ಯಾ ಬಿ ಜೋನ್. 1ನೇ ಮಹಡಿ. ಮನೆ ನಂ.2137 ರಲ್ಲಿ ವಾಸವಾಗಿರುವ ಶ್ರೀ 'ಮುನೀರ್ ಅಹ್ಮದ್ ರವರ ಮಗನಾದ ಸುಮಾರು 50 ವರ್ಷ ವಯಸ್ಸಿನ ಶ್ರೀ ಟಿಪ್ಪು ಸುಲ್ತಾನ್ ರವರು. ಮೈಸೂರು ಸಿಟಿ. ಗೋಕುಲಂ 3ನೇ ಹಂತ. ಕಾಂಟೂರ್ ರಸ್ತೆ. ಮನೆ ನಂ.789 ರಲ್ಲಿ ವಾಸವಾಗಿರುವ ಲೇಟ್ ಹೊಂಬಾಳೆಗೌಡ ರವರ ಮಗನಾದ ಸುಮಾರು 62 ವರ್ಷ ವಯಸ್ಸಿನ ಶ್ರೀ ಎಂ.ಹೆಚ್.ಸುರೇಶ್‌ಕುಮಾರ್ ರವರಿಂದ ಈ ಕೆಳಕಂಡ ಷೆಡ್ಯೂಲ್ ಸ್ವತ್ತುಗಳನ್ನು ಖರೀದಿಸಲು ಇಚ್ಚಿಸಿದ್ದು. ಈ ಸ್ವತ್ತುಗಳಿಗೆ ಸಂಬಂಧ ಪಟ್ಟಂತೆ ಯಾವುದಾದರೂ ಕೋರ್ಟ್ ಕೇಸು. ಆಧಾರ. ಭೋಗ್ಯ. ಯಾವುದೇ ತಂಟೆ. ತಕರಾರು. ಹಕ್ಕು. ಹೊಣೆಗಾರಿಕೆ ಇದ್ದರೆ ಅಂತಹವರುಗಳು ಈ ಪ್ರಕಟಣೆ ಆದ 15 ದಿನಗಳ ಒಳಗಾಗಿ ಲಿಖಿತ ತಕರಾರು ಹಾಗೂ ದಾಖಲೆಗಳ ಮುಖಾಂತರ ಈ ಕೆಳಗೆ ತಿಳಿಸಿರುವ ವಕೀಲರನ್ನಾಗಲೀ ಅಥವಾ ನಮ್ಮ ಕಕ್ಷಿದಾರರನ್ನಾಗಲೀ ಸಂಪರ್ಕಿಸಬೇಕೆಂದು ಈ ಮೂಲಕ ತಿಳಿಯಪಡಿಲಾಗುತ್ತದೆ.

15 ದಿನಗಳ ಒಳಗೆ ಯಾವುದೇ ತಂಟೆ ತಕರಾರುಗಳು ಬರದಿದ್ದಲ್ಲಿ ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತುಗಳನ್ನು ಖರೀದಿಸಲು ಯಾವುದೇ ತಂಟೆ ತಕರಾರು ಇಲ್ಲವೆಂದು ಪರಿಗಣಿಸಲಾಗುತ್ತದೆ. ನಂತರ ಬಂದ ತಂಟೆ ತಕರಾರುಗಳನ್ನು ಪರಿಗಣಿಸಲಾಗುವುದಿಲ್ಲ.

ಷೆಡ್ಯೂಲ್ ಸ್ವತ್ತುಗಳ ವಿವರ

1. ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹೆಬ್ಬಾಡಿ ಗ್ರಾಮಕ್ಕೆ ಸೇರಿದ ಸರ್ವೆ ನಂ.12/9 (ಹಳೆ ಸರ್ವೆ ನಂ.12/ಪಿ3) ರ ವಿಸ್ತೀರ್ಣ 2–00 (ಎರಡು) ಎಕರೆ ಜಮೀನಿಗೆ ಚಕ್ಕುಬಂದಿ:– ಪೂರ್ವಕ್ಕೆ : ಸಿದ್ದಯ್ಯ ರವರ ಜಮೀನು, ಪಶ್ಚಿಮಕ್ಕೆ : ಸರ್ವೆ ನಂ.12/4 (ಹಳೆ ನಂ.12/ಪಿ2) ರ ಜಮೀನು ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ಕರಿಯನ ಮಾದಯ್ಯ ರವರ ಜಮೀನು
2. ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹೆಬ್ಬಾಡಿ ಗ್ರಾಮಕ್ಕೆ ಸೇರಿದ ಸರ್ವೆ ನಂ.12/4 (ಹಳೆ ಸರ್ವೆ ನಂ.12/ಪಿ2) ರ ವಿಸ್ತೀರ್ಣ 0.31.08 (ಮೂವತ್ತೊಂದುವರೆ) ಗುಂಟೆ ಜಮೀನಿಗೆ ಚಕ್ಕುಬಂದಿ:– ಪೂರ್ವಕ್ಕೆ : ನಿಂಗರಾಜಮ್ಮ ರವರ ಜಮೀನು, ಪಶ್ಚಿಮಕ್ಕೆ: ಚಂದ್ರಪ್ರಕಾಶ್ ರವರ ಜಮೀನು, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ಫೀರ್ ಸಾಹೇಬ ರವರ ಜಮೀನು

ಸಹಿ/– ಪ್ರದೀಪ್.ಸಿ.ಕೆ., ಕೆ.ಎ.ಆರ್.1760/09
ಕೆ.ಪಿ.ಲಾ ಅಸೋಸಿಯೇಟ್ಸ್,#47, ಸಿ.ಎಚ್–4, 47/1, 1ನೇ ಮಹಡಿ, 5ನೇ ಕ್ರಾಸ್, 3ನೇ ಮುಖ್ಯರಸ್ತೆ, ಶ್ರೀನಿವಾಸ ದೇವಸ್ಥಾನದ ಎದುರು, ಜಯನಗರ, ಮೈಸೂರು,
ಮೊ: 7795721358 / 8861248007

On the Occasion of Wedding Presenting

New Crafts **ಸಿಲ್ಕ್ ಇಂಡಿಯಾ**

Silk India ® 2024

Exhibition & Sale

An opulent show of Ethnic & Traditional Silk, Cotton Handloom Products made by master 100 Weavers from all over India

Silk Saree | Suits | Dress Material | Stoles | Dupattas | Kurtas
Kurties | Pure & Probable Silk | Tussar Silk | Shanthipur Silk

NANJARAJ BHADDUR CHOULTRY

Vinoba Road, Devaraja Mohalla, Yadavagiri, Mysuru

From : 16th to 25th Feb. 2024

Products on Display - **Orissa :** Sambhalpuri Ikkat Silk Saree, **Bihar :** Oragnic Tassar Silk Sarees, Suit & Stoles, **Assam :** Muga & Eri Silk Sarees, **Karnataka :** Creap Silk, Georgette Silk, Arini Silk & Printed Sarees, **Tamilnadu :** Kanjeevaram Silk Sarees & Designer Fancy Sarees, **Andra Pradesh :** Dharmavara, Uppada, Gadwal, Mangalagiri & Pochampalli Sarees, **Uttar Pradesh :** Mulbari Silk, Jamdani, Jamawar Silk Sarees & Chiffon Silk, **Maharashtra :** Designer Dress materials, **Chhatisgarh :** Exclusive Raw Silk Sarees, Kosa Silk, Tassar Suit & Duppatta, **Madhya Pradesh :** Maheswari, Chanderi Silk Sarees & Suit, **West Bengal :** Baluchari, Dhaka Masli, Gicha Sarees, Boutique Sarees, Kantha Sarees, Zordoshi, **Jammu & Kashmir :** Chinon Silk, Tady Silk Printed Sarees, Pashmina Shawls & Suit, **Rajasthan :** Kota Silk, Hand Block Print Dress & Sarees, Punjab : Fulkari Dress and many more...



10 Days Only

Opening Today

Time : 10.30 am - 8.30 pm Call: 08850902824 **Entry & Parking Free**

All Credit & Debit Cards Accepted

ಹೊಸ ಮನೆ ಮಾರಾಟಕ್ಕಿದೆ

ಸರ್ದಾರ್ ವಲ್ಲಭಾಯಿಪಟೇಲ್ ನಗರ ಮುಡಾ ಅನುಮೋದಿತ ಲೇಔಟ್ 20*40 ಅಡಿ, ಪೂರ್ವ ದಿಕ್ಕು, 3 ಬಿಹೆಚ್‌ಕೆ, ಬೋರ್‌ವೆಲ್ ಮತ್ತು ಪಿಲ್ಲರ್ ಹೊಂದಿದೆ, 100% ವಾಸ್ತು, ಉತ್ತಮ ಗುಣಮಟ್ಟದ ಹೊಸ ಮನೆ

Call: 9380284276

SITE FOR SALE

40x60 West facing at Vinayaka Enclave layout. Near Vijaya nagar 4th stage, Price 78 lakhs. contact:

7026700056

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀಮಾನ್ ಎ.ಪಿ. ಅರ್ಕೇಶ್‌ರವರು

(ಶ್ರೀಮತಿ ಸಾಕಮ್ಮನವರ ಪತಿ)

ಇವರು ದಿನಾಂಕ : 06–02–2024 ಮಂಗಳವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇನೆ. ತತ್ಸಂಬಂಧ ಮೃತರ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ 16–02–2024 ಶುಕ್ರವಾರ ಬೆಳಗ್ಗೆ 11–30 ಗಂಟೆಗೆ ಅರಕೆರೆ ಗ್ರಾಮದ ನಮ್ಮ ಸ್ವಗೃಹದಲ್ಲಿ ನಡೆಸಲು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಮೃತರ ಪತ್ನಿ ಶ್ರೀಮತಿ ಸಾಕಮ್ಮ ಮತ್ತು ಮಕ್ಕಳಾದ ಶ್ರೀಮತಿ ಸ್ಮಿತಾ ಮತ್ತು ಶ್ರೀ ಎ. ಕುಮಾರ್,(ಪ್ರಥಮ ದರ್ಜೆ ಗುತ್ತಿಗೆದಾರರು, ಮೈಸೂರು) ನರೇಂದ್ರಬಾಬು, ಮಗಳು ಶ್ರೀಮತಿ ಪದ್ಮ ಶ್ರೀ ಎ.ಪಿ. ಉಮೇಶ್, ಮಕ್ಕಳು, ಮೊಮ್ಮಕ್ಕಳು ಹಾಗೂ ಚಿಕ್ಕಚನ್ನೇಗೌಡರ ಕುಟುಂಬವರ್ಗದವರು

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತುಗಳನ್ನು ನನ್ನ ಕಕ್ಷೀದಾರರು ಅದರ ಮಾಲೀಕರುಗಳಿಂದ ಖರೀದಿಸಲು ಉದ್ದೇಶಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ಪರಭಾರೆಯ ವಿಚಾರದಲ್ಲಿ ಮಾಲೀಕರನ್ನು ಹೊರತು ಪಡಿಸಿ ಇತರ ಯಾರಿಗಾದಾರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ಸಹಿ ಮಾಡಿದವರನ್ನು ಸಂಪರ್ಕಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಬಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಅದರ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಲಾಗುವುದು.,

ಷೆಡ್ಯೂಲ್: ಮೈಸೂರು ಜಿಲ್ಲೆ ಮತ್ತು ಮೈಸೂರು ತಾಲ್ಲೂಕು, ವರುಣ ಹೋಬಳಿ, ಹಾರೋಹಳ್ಳಿ ಗ್ರಾಮದ ಈ ಕೆಳಕಂಡ ಸರ್ವೆ ನಂಬರ್‌ಗಳ ಕೃಷಿ ಜಮೀನುಗಳು:

ಕ್ರಮ ಸಂಖ್ಯೆ	ಸರ್ವೇ ನಂಬರ್	ಮಾಲೀಕರ ಹೆಸರು	ವಿಸ್ತೀರ್ಣ		ಚಕ್ಕುಬಂದಿ (ಸರ್ವೆ ನಂಬರ್)			
			ಎಕರೆ	ಗುಂಟೆ	ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
1.	995/2	ಶೈಲಜ ಕೋಂ. ಲೇ. ನಂಜಪ್ಪ ಮತ್ತು ಇತರರು	00	11	995/11	995/10	1015 ಮತ್ತು ರಸ್ತೆ	994
2.	995/3	ರಾಮಣ್ಣ ಬಿನ್ ನಂಜುಂಡಯ್ಯ	00	07	995/6	995/12	1015 ಮತ್ತು ರಸ್ತೆ	995/9
3.	995/4	ಲಕ್ಷ್ಮಣ ಬಿನ್ ನಂಜುಂಡಯ್ಯ	00	31	995/7	995/6	1015 ಮತ್ತು ರಸ್ತೆ	994
4.	995/6		00	03	995/4	995/3, 9, 8	1015 ಮತ್ತು ರಸ್ತೆ	994
5.	995/7		00	06	995/5	995/4	1015 ಮತ್ತು ರಸ್ತೆ	994
6.	995/8	ರಾಮಣ್ಣ ಬಿನ್ ನಂಜುಂಡಯ್ಯ	00	02	995/6	995/12	995/9	994
7.	995/9	ತಿಮ್ಮಪ್ಪಸ್ವಾಮಿ ಬಿನ್ ಗಂಗನತಿಮ್ಮಯ್ಯ	00	20	995/6	995/12	995/3	995/8
8.	995/10	ಶೈಲಜ ಕೋಂ. ಲೇ. ನಂಜಪ್ಪ ಮತ್ತು ಇತರರು	00	29	995/2	995/1 ಮತ್ತು ರಸ್ತೆ	1015 ಮತ್ತು ರಸ್ತೆ	994
9.	995/11	ಚಿಕ್ಕಮಾಧು ಬಿನ್ ನಂಜುಂಡಯ್ಯ	01	00	995/12	995/2	1015 ಮತ್ತು ರಸ್ತೆ	994
10.	995/12	ರಾಮಣ್ಣ ಬಿನ್ ನಂಜುಂಡಯ್ಯ	00	11	995/3, 9, 8	995/11	1015 ಮತ್ತು ರಸ್ತೆ	994

ದಿನಾಂಕ: 14.02.2024, ಮೈಸೂರು

ಸಹಿ/– ಎಂ.ಎನ್.ಪ್ರಕಾಶ್ ಕಾಳಪ್ಪ, ವಕೀಲರು, KAR-1996-2000, #2-3, First Floor, PRI Complex, 67/7A, New Sayyajirao Road, Fort Mohalla, Mysore 570004, India, Cell: 93431 12535.

ಪುರಸಭೆ ಕಾರ್ಯಾಲಯ, ವಿರಾಜಪೇಟೆ

ದೂರವಾಣಿ ಸಂಖ್ಯೆ: 08274–257332 । ಇ–ಮೇಲ್ itstaff_ulb_virajpet@yahoo.com | Website: www.virajpettown.mrc.gov.in

ಸಂ.ಪುಕಾವಿ:/ ಕ.ನಿ/ಹರಾಜು/01/2023–24 ದಿನಾಂಕ: 14–02–2024

"ವಾರ್ಷಿಕ ಹರಾಜು ಇಸ್ತಿಯಾರು ಪ್ರಕಟಣೆ"

ಈ ಮೂಲಕ ಸಾರ್ವಜನಿಕರಿಗೆ ಪ್ರಕಟಿಸುವುದೇನೆಂದರೆ, ವಿರಾಜಪೇಟೆ ಪುರಸಭೆಗೆ ಸೇರಿದ 2024–25ನೇ ಸಾಲಿಗೆ ಈ ಕೆಳಕಂಡ ಬಾಪ್ತುಗಳಿಗೆ ವಾರ್ಷಿಕ ಬಹಿರಂಗ ಹರಾಜು ಪ್ರಕ್ರಿಯೆಯನ್ನು ದಿನಾಂಕ: 22/02/2024 ರಂದು ಪೂರ್ವಾಹ್ನ 11.00 ಗಂಟೆಗೆ ಪುರಸಭೆಯ ಕಛೇರಿಯ ಪುರಭವನದಲ್ಲಿ ಬಹಿರಂಗ ಹರಾಜು ಮೂಲಕ ವಿಲೇ ಪಡಿಸಲಾಗುವುದು. ಇಚ್ಛೆಯುಳ್ಳವರು ಷರತ್ತಿಗೊಳಪಟ್ಟು ದಿನಾಂಕ: 21–02–2024ರಂದು ಸಂಜೆ 5.00 ಗಂಟೆಯೊಳಗಾಗಿ ಕಛೇರಿ ಸಮಯದಲ್ಲಿ ಇ.ಎಂ.ಡಿ ಮೊತ್ತವನ್ನು ಡಿ.ಡಿ. ಮೂಲಕ ಪಾವತಿಸಿ ಹರಾಜಿನಲ್ಲಿ ಭಾಗವಹಿಸಿ ಸವಾಲು ಮೂಲಕ ಹಕ್ಕನ್ನು ಪಡೆದುಕೊಳ್ಳಬಹುದಾಗಿದೆ.

"ಹರಾಜಿಗೆ ಇಡಲಾದ ಬಾಪ್ತು"

ಕ್ರಸಂ.	ವಿವರ	ಮಳಿಗೆ ಸಂಖ್ಯೆ	ಮುಂಗಡ ಠೇವಣಿ ಮೊತ್ತ (ರೂ.ಗಳಲ್ಲಿ)
1	ಮೂರ್ನಾಡು ರಸ್ತೆ ಬದಿಯಲ್ಲಿರುವ ಹಂದಿ ಮಾಂಸ ಮಳಿಗೆ ಪರಿಶಿಷ್ಟಜಾತಿ/ಪರಿಶಿಷ್ಟ ಪಂಗಡ ರವರಿಗೆ ಮೀಸಲಿಡಲಾಗಿದೆ.	01	50,000/–
2	ಮೂರ್ನಾಡು ರಸ್ತೆ ಬದಿಯಲ್ಲಿರುವ ಹಂದಿ ಮಾಂಸ ಮಳಿಗೆ	02	50,000/–
3	ಮೂರ್ನಾಡು ರಸ್ತೆ ಬದಿಯಲ್ಲಿರುವ ಹಂದಿ ಮಾಂಸ ಮಳಿಗೆ	03	50,000/–
4	ಖಾಸಗೀ ಬಸ್ ನಿಲ್ದಾಣದ ವಾಹನಗಳ ಸುಂಕ ವಸೂಲಾತಿ	–	30,000/–
5	ಸಂತೆ ಸುಂಕ ವಸೂಲಾತಿ	–	30,000/–
6	ಮೀನು ಮಾರುಕಟ್ಟೆಯಲ್ಲಿರುವ ಮೀನು ಮಳಿಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ರವರಿಗೆ ಮೀಸಲಿಡಲಾಗಿದೆ.	01	50,000/–
7	ಮೀನು ಮಾರುಕಟ್ಟೆಯಲ್ಲಿರುವ ಮೀನು ಮಳಿಗೆ	02	50,000/–
8	ಮೀನು ಮಾರುಕಟ್ಟೆಯಲ್ಲಿರುವ ಮೀನು ಮಳಿಗೆ	03	50,000/–
9	ಮೀನು ಮಾರುಕಟ್ಟೆಯಲ್ಲಿರುವ ಮೀನು ಮಳಿಗೆ	04	50,000/–
10	ಮೀನು ಮಾರುಕಟ್ಟೆಯಲ್ಲಿರುವ ಮೀನು ಮಳಿಗೆ	05	50,000/–
11	ಮೀನು ಮಾರುಕಟ್ಟೆಯಲ್ಲಿರುವ ಮೀನು ಮಳಿಗೆ	06	50,000/–
12	ಮೀನು ಮಾರುಕಟ್ಟೆಯಲ್ಲಿರುವ ಮೀನು ಮಳಿಗೆ	07	50,000/–
13	ಮೀನು ಮಾರುಕಟ್ಟೆಯಲ್ಲಿರುವ ಮೀನು ಮಳಿಗೆ	10	50,000/–
14	ಮೀನು ಮಾರುಕಟ್ಟೆಯಲ್ಲಿರುವ ಮೀನು ಮಳಿಗೆ	11	50,000/–
15	ಮೀನು ಮಾರುಕಟ್ಟೆಯಲ್ಲಿರುವ ಮೀನು ಮಳಿಗೆ	12	50,000/–
16	ಮೀನು ಮಾರುಕಟ್ಟೆಯಲ್ಲಿರುವ ಮೀನು ಮಳಿಗೆ	13	50,000/–
17	ಮೀನು ಮಾರುಕಟ್ಟೆಯಲ್ಲಿರುವ ಮೀನು ಮಳಿಗೆ	14	50,000/–

ಇ.ಎಂ.ಡಿ. ಮೊತ್ತವನ್ನು ಪಾವತಿಸುವವರಿಗೆ ಮಾತ್ರ ಸಭಾಂಗಣಕ್ಕೆ ಪ್ರವೇಶ ನೀಡಲಾಗುವುದು. ಸಾರ್ವಜನಿಕರಿಗೆ ಅವಕಾಶವಿರುವುದಿಲ್ಲ. ಷರತ್ತುಗಳನ್ನು ಪುರಸಭೆ ಕಛೇರಿ ವೇಳೆಯಲ್ಲಿ ಪಡೆದುಕೊಳ್ಳತಕ್ಕದ್ದು.

ಸಹಿ/– ಆಡಳಿತಾಧಿಕಾರಿ
ಪುರಸಭೆ, ವಿರಾಜಪೇಟೆ

ಸಹಿ/– ಮುಖ್ಯಾಧಿಕಾರಿ
ಪುರಸಭೆ, ವಿರಾಜಪೇಟೆ